ಜನಶಕ್ತಿ

ದುಡಿಯುವ ಜನರ ಪ್ರಾಣ ಮಿತ್ರ

ಕನ್ನಡ ವಾರಪತ್ರಿಕೆ

ಸಂಪುಟ 11 | ಸಂಚಿಕೆ 38 | ಪುಟ 16 | ಸೆಪ್ಟೆಂಬರ್ 11–17, 2017 | ರೂ. 10/-

web: www.janashakthi.co.in e-mail : js_weekly@yahoo.com

ಲಾಲ್ ಸಲಾಂ ಸುಬೋಧ ಮೆಹತಾ





ಸೀತಾರಾಮ ಯೆಚೂರಿ

ಭಾರತವೆಂದರೆ

ಭಾ: ಭಾವ
ರ : ರಾಗ
ತ : ತಾಳ

ಇವೆಲ್ಲವುಗಳ ಸಂಗಮ.
ಇದೇ ನಿಜವಾದ ಭಾರತ



ಜನವರಿ 30

ಮಾನವ ಸರಪಣಿಗೆ ಕರೆ





ನಾನೂ ಗೌರಿ ನನೆದೆಗೂ ಗುಂಡಿಡಿ

ಬಿಜೆಪಿ ಮಂಗಳೂರು ಚಲೋ ಠುಸ್



ಆರ್ಥಿಕ ಅವ್ಯವಸ್ಥೆ ಮುಚ್ಚಲು ಸಂಪುಟ ಪುನರ್‌ರಚನೆಯ 'ಈವೆಂಟ್'



ನೀಟ್: ದಲಿತ ವಿದ್ಯಾರ್ಥಿನಿ ಆತ್ಮಹತ್ಯೆ

ನೀರು-ಧರ್ಮ ಮುಖಾಮುಖಿ



ಆರ್ಥಿಕ ಧೋರಣೆಗಳು ವಿನಾಶಕಾರಿಯಾಗುತ್ತಿವೆ, ಹೋರಾಟಗಳು ಹೆಚ್ಚುತ್ತಿವೆ: ಸಿಪಿಐ(ಎಂ) ಪೊಲಿಟ್‌ಬ್ಯುರೊ

ಮೋದಿ ಸರಕಾರದ ಆರ್ಥಿಕ ಧೋರಣೆಗಳು ದೇಶಕ್ಕೆ ವಿನಾಶಕಾರಿಯೆಂದು ಸಾಬೀತಾಗುತ್ತಿದೆ. ಇನ್ನೊಂದೆಡೆಯಲ್ಲಿ ಈ ಧೋರಣೆಗಳ ವಿರುದ್ಧ ಪ್ರತಿರೋಧಗಳು ಮತ್ತು ಹೋರಾಟಗಳು ಹೆಚ್ಚುತ್ತಿವೆ ಎಂದು ಸಿಪಿಐ(ಎಂ) ಪೊಲಿಟ್‌ಬ್ಯುರೊ ಹೇಳಿದೆ. ಸಪ್ಟಂಬರ್ 6 ಮತ್ತು 7 ರಂದು ನಡೆದ ಸಿಪಿಐ(ಎಂ) ಪೊಲಿಟ್‌ಬ್ಯುರೊ ಸಭೆಯ ನಂತರ ಈ ಕೆಳಗಿನ ಹೇಳಿಕೆಯನ್ನು ನೀಡಿದೆ:

ಆರ್ಥಿಕ ರಂಗದಲ್ಲಿ ಮಬ್ಬು ಕವಿದಿದೆ

ಇತ್ತೀಚಿಗೆ ದೊರೆತಿರುವ ಮಾಹಿತಿಗಳೆಲ್ಲ ನೋಟುರದ್ದತಿಯ ನಂತರ ಆರ್ಥಿಕ ನಿಧಾನಗತಿ ತೀಕ್ಷ್ಣಗೊಂಡಿರುವುದನ್ನು ತೋರಿಸುತ್ತಿವೆ ಮತ್ತು ಆರ್ಥಿಕ ಹಿಂಜರಿತದ ಕಾರ್ಮೋಡಗಳು ಕಾಣುತ್ತಿವೆ. ಅಂದಾಜು ಜಿಡಿಪಿ ಬೆಳವಣಿಗೆ ಪ್ರಸಕ್ತ ಹಣಕಾಸು ವರ್ಷದ ಮೊದಲ ತ್ರೈಮಾಸಿಕದಲ್ಲಿ, ಅಂದರೆ ಎಪ್ರಿಲ್–ಜೂನ್ ಅವಧಿಯಲ್ಲಿ 5.7%ಕ್ಕೆ ಇಳಿದಿದೆ. ಜಿಡಿಪಿ ಬೆಳವಣಿಗೆ ದರ ಸತತವಾಗಿ ನಾಲ್ಕು ತ್ರೈಮಾಸಿಕಗಳಲ್ಲಿ ಇಳಿದಿದೆ. ಈ ತ್ರೈಮಾಸಿಕದಲ್ಲಿ ಕೈಗಾರಿಕಾ ಉತ್ಪಾದನಾ ಸೂಚ್ಯಂಕ(ಐಐಪಿ) ಕೇವಲ 1.8%. ರಫ್ತು ಪ್ರಮಾಣ ಸ್ಥಗಿತಗೊಂಡಿದೆ. ಮತ್ತು ರಾಷ್ಟ್ರೀಕೃತ ಬ್ಯಾಂಕುಗಳ ಕಾರ್ಯನಿರ್ವಹಿಸದ ಆಸ್ತಿಗಳ(ಅಂದರೆ ಸುಸ್ತಿಸಾಲಗಳ) ಮೊತ್ತ ಜೂನ್ 2017ರ ಅಂತ್ಯದ ವೇಳೆಗೆ 8.26ಲಕ್ಷ ರೂ.(ಬಡ್ಡಿ ಬಿಟ್ಟು) ಗೆ ಏರಿದೆ.

ಕೃಷಿ ಸಂಕಟ ಆಳಗೊಳ್ಳುತ್ತಲೇ ಇದೆ. ಆರ್ಥಿಕದ ಎಲ್ಲ ವಲಯಗಳಲ್ಲೂ ನಿರುದ್ಯೋಗ ಮೇಲೇರುತ್ತಿದೆ. ಸೇವಾವಲಯದಲ್ಲಿ ಆರ್ಥಿಕ ಚಟುವಟಿಕೆ ಕುಂಠಿತಗೊಂಡಿದೆ ಎಂಬುದನ್ನು ಇತ್ತೀಚಿನ ಮಾಹಿತಿ ತೋರಿಸುತ್ತಿದೆ.

ಮೋದಿ ಸರಕಾರದ ಆರ್ಥಿಕ ಧೋರಣೆಗಳು ದೇಶಕ್ಕೆ ವಿನಾಶಕಾರಿಯಾಗುತ್ತಿವೆ.

ಪ್ರತಿರೋಧ ಮತ್ತು ಹೋರಾಟಗಳು ಹೆಚ್ಚುತ್ತಿವೆ

ನವ–ಉದಾರವಾದಿ ಧೋರಣೆಗಳಿಗೆ ಮತ್ತು ದೇಶದ ಪ್ರಜಾಪ್ರಭುತ್ವ ಮತ್ತು ರಾಜಕೀಯ ವ್ಯವಸ್ಥೆಗೆ ಕೋಮುವಾದಿ ಶಕ್ತಿಗಳ ಅಪಾಯದ ವಿರುದ್ಧ ಪ್ರತಿ–ರೋಧ ಹೆಚ್ಚುತ್ತಿರುವ ವರದಿಗಳನ್ನು ಪೊಲಿಟ್‌ಬ್ಯುರೊ ಆಲಿಸಿತು.

ಸಪ್ಟಂಬರ್ 18ರಂದು ಸಾಮೂಹಿಕ ಸಂಘಟನೆಗಳು ಮತ್ತು ವರ್ಗ ಸಂಘಟನೆಗಳ ಅಖಿಲ ಭಾರತ ಸಮಾವೇಶ, ಜನ ಏಕತಾ ಜನ ಅಧಿಕಾರ್ ಆಂದೋಲನ್, ಸಪ್ಟಂಬರ್ 28ರಂದು ನಿರುದ್ಯೋಗದ ವಿರುದ್ಧ ಯುವ ಜನರ ಅಣಿನೆರಿಕೆ ಮತ್ತು ನವಂಬರ್ 9ರಿಂದ 11 ರ ವರೆಗೆ ಸಂಸತ್ತಿನ ಎದುರು ಕೇಂದ್ರೀಯ ಕಾರ್ಮಿಕ ಸಂಘಟನೆಗಳು ಮತ್ತು ಒಕ್ಕೂಟಗಳ ಮೂರು ದಿನಗಳ ಮಹಾಧರಣಿ ಇವಕ್ಕೆ ಬೆಂಬಲ ಮತ್ತು ಸೌಹಾರ್ದ ವ್ಯಕ್ತಪಡಿಸಲು ಪೊಲಿಟ್‌ಬ್ಯುರೊ ನಿರ್ಧರಿಸಿದೆ.

ರೊಹಿಂಗ್ಯ ಪ್ರಶ್ನೆ: ಮಾನವೀಯ ಬಿಕ್ಕಟ್ಟು

ಪ್ರಧಾನ ಮಂತ್ರಿ ನರೇಂದ್ರ ಮೋದಿಯವರು ಮ್ಯಾನ್ಮರ್ ರಾಜಧಾನಿಗೆ ಭೇಟಿ ನೀಡಿದಾಗ ಅವರು ರೊಹಿಂಗ್ಯಗಳ ಪ್ರಶ್ನೆಗಳನ್ನು ಎತ್ತಿಕೊಳ್ಳುತ್ತಾರೆ ಎಂಬ ನಿರೀಕ್ಷೆ ಇತ್ತು. ಅದು ಸುಳ್ಳಾಗಿದೆ. ದುರದೃಷ್ಟವಶಾತ್, ತಮ್ಮದೇ ದೇಶದಲ್ಲಿ ವ್ಯಾಪಕ ಹಲ್ಲೆಗಳಿಗೆ ಒಳಗಾಗಿರುವ ಲಕ್ಷಾಂತರ ಮಂದಿ ನೆರೆಯ ಬಾಂಗ್ಲಾದೇಶ ಮತ್ತು ಭಾರತಕ್ಕೆ ಸಾವಿರ–ಸಾವಿರ ಸಂಖ್ಯೆಯಲ್ಲಿ ಓಡಿಹೋಗುತ್ತಿರುವಾಗ ಅದು ಭಾರತೀಯ ಪ್ರಧಾನ ಮಂತ್ರಿಗಳು ಮತ್ತು ಮ್ಯಾನ್ಮರ್ ಮುಖಂಡರ ನಡುವಿನ ಮಾತುಕತೆಗಳಲ್ಲಿ ಜಾಗ ಪಡೆದಿಲ್ಲ.

ಭಾರತ ಸರಕಾರ ಇದನ್ನು ಒಂದು ಮಾನವೀಯತೆಯ ಪ್ರಶ್ನೆಯಾಗಿ ಕಾಣಬೇಕು ಮತ್ತು ಇದನ್ನು ಪರಿಹರಿಸಲು ತಕ್ಷಣವೇ ಮ್ಯಾನ್ಮರ್ ಮತ್ತು ಬಾಂಗ್ಲಾದೇಶದ ಸರಕಾರಗಳೊಂದಿಗೆ ಎತ್ತಿಕೊಳ್ಳಬೇಕು. ಭಾರತದೊಳಕ್ಕೆ ಬಂದಿರುವ ರೊಹಿಂಗ್ಯಗಳನ್ನು ನಿರಾಶ್ರಿತರೆಂದು ಪರಿಗಣಿಸಬೇಕು, ಅವರನ್ನು ಹಿಂದಕ್ಕೆ ತಳ್ಳಬಾರದು ಅಥವ ಸಾಗ ಹಾಕಬಾರದು. ಈ ವಿಷಯವನ್ನು ವಿಶ್ವ ಸಂಸ್ಥೆ ಮಾನವ ಹಕ್ಕುಗಳ ಆಯೋಗ ಮತ್ತು ಅಂತರ್‍ರಾಷ್ಟ್ರೀಯ ರೆಡ್ ಕ್ರಾಸ್ ಮತ್ತು ಇತರ ಅಂತರ್‍ರಾಷ್ಟ್ರೀಯ ವೇದಿಕೆಗಳಲ್ಲೂ ಎತ್ತಬೇಕು.

ಎನ್‌ಇಇಟಿ ಪರೀಕ್ಷೆ

ತಮಿಳುನಾಡು ಮತ್ತು ಇತರೆಡೆಗಳಲ್ಲಿ ಎನ್‌ಇಇಟಿ ಪರೀಕ್ಷೆಗಳ ವಿರುದ್ಧ ವ್ಯಾಪಕ ಪ್ರತಿಭಟನೆಗಳು ನಡೆಯುತ್ತಿವೆ. ತಮಿಳುನಾಡಿನಲ್ಲಿ ವೈದ್ಯಕೀಯ ಶಿಕ್ಷಣಾಕಾಂಕ್ಷಿ ಅನಿತಾಳ ದುರದೃಷ್ಟಕರ ಸಾವಿನ ನಂತರ ಪ್ರತಿಭಟನೆಗಳು ರಾಜ್ಯಾದ್ಯಂತ ಹರಡುತ್ತಿವೆ.

ಪ್ರವೇಶ ಪರೀಕ್ಷೆ ಈ ವಿಧಾನಕ್ಕೆ ಹಲವು ರಾಜ್ಯಗಳಲ್ಲಿ ವಿರೋಧ ಬಂದಿರುವ ಹಿನ್ನೆಲೆಯಲ್ಲಿ ಕೇಂದ್ರ ಸರಕಾರ ಎಲ್ಲ ರಾಜ್ಯ ಸರಕಾರಗಳನ್ನು ವಿಶ್ವಾಸಕ್ಕೆ ತಗೊಂಡು ಈ ಪರೀಕ್ಷೆಗಳ ಬಗ್ಗೆ ಒಮ್ಮತವನ್ನು ವಿಕಾಸಗೊಳಿಸಬೇಕು.

ಪಕ್ಷದ 22ನೇ ಮಹಾಧಿವೇಶನ

ಪಕ್ಷದ 22ನೇ ಮಹಾಧಿವೇಶನವನ್ನು ಹೈದರಾಬಾದಿನಲ್ಲಿ ಎಪ್ರಿಲ್ 18ರಿಂದ 22ರ ವರೆಗೆ ನಡೆಸಬೇಕು ಎಂದು ಮುಂದಿನ ಕೇಂದ್ರ ಸಮಿತಿ ಸಭೆಯ ಮುಂದೆ ಪೊಲಿಟ್‌ಬ್ಯುರೊ ಪ್ರಸ್ತಾವ ಇಡುತ್ತದೆ. ಈ ಮಹಾಧಿವೇಶನದಲ್ಲಿ ಪರಿಶೀಲಿಸಬೇಕಾದ ದಸ್ತಾವೇಜುಗಳು ಮತ್ತು ಅಜೆಂಡಾದ ಸಿದ್ಧತೆ ಆರಂಭವಾಗಿದೆ.

“ದ್ವೇಷ–ಅಸಹಿಷ್ಣುತೆಯ ವಿರುದ್ಧದ ದನಿಯನ್ನು ಅಡಗಿಸುವ ಮತ್ತೊಂದು ಪ್ರಯತ್ನ” ಗೌರಿ ಲಂಕೇಶ್ ಕಗ್ಗೊಲೆ: ಸಿಪಿಐ(ಎಂ) ಪೊಲಿಟ್‌ಬ್ಯುರೊ ಬಲವಾದ ಖಂಡನೆ

ಹಿರಿಯ ಪತ್ರಕರ್ತೆ ಗೌರಿ ಲಂಕೇಶ್ ಕಗ್ಗೊಲೆ ನಡೆದಿರುವುದನ್ನು ಸಿಪಿಐ(ಎಂ) ಪೊಲಿಟ್‌ಬ್ಯುರೊ ಬಲವಾಗಿ ಖಂಡಿಸಿದೆ. ಅವರ ಮನೆಯ ಮುಂದೆ ಇದು ನಡೆದಿದೆ.

ಈ ಕೊಲೆ ಈಗ ಪರಿಚಿತವಾಗಿ ಬಿಟ್ಟಿರುವ ಆರೆಸ್ಸೆಸ್–ಬಿಜೆಪಿಯ ದ್ವೇಷ ಮತ್ತು ಅಸಹಿಷ್ಣುತೆಯ ವಾತಾವರಣದ ವಿರುದ್ಧ ಮಾತಾಡುವ ಧೈರ್ಯ ತೋರುವ ದನಿಗಳನ್ನು ಅಡಗಿಸುವ ವಿಧಾನಕ್ಕೆ ಅನುಸಾರವಾಗಿಯೇ ಇದೆ. ಗೋವಿಂದ ಪನ್ಸರೆ, ದಭೋಲ್ಕರ್, ಕಲ್ಬುರ್ಗಿ ಮತ್ತು ಈಗ ಗೌರಿ ಲಂಕೇಶ್ ಅವರ ಹತ್ಯೆಗಳು ಎಲ್ಲವೂ ಪರಸ್ಪರ ಸಂಬಂಧ ಇರುವಂತವುಗಳು. ಇವರೆಲ್ಲರೂ ಅಂಧಶ್ರದ್ಧೆ, ಅವೈಚಾರಿಕತೆ ಮತ್ತು ಬಲಪಂಥೀಯ ಹಿಂದುತ್ವ ಶಕ್ತಿಗಳು ಕೋಮುವಾದಿ ಅಜೆಂಡಾವನ್ನು ಗಟ್ಟಿಗೊಳಿಸುತ್ತಿರುವುದರ ವಿರುದ್ಧ ಖಡಾಖಂಡಿತವಾಗಿ ಮಾತಾಡುತ್ತಿದ್ದವರು ಎಂದಿರುವ ಸಿಪಿಐ(ಎಂ) ಪೊಲಿಟ್‌ಬ್ಯುರೊ ಕರ್ನಾಟಕ ಸರಕಾರ ಕೂಡಲೇ ಅಪರಾಧಿಗಳನ್ನು ಪತ್ತೆ ಹಚ್ಚಬೇಕು ಮತ್ತು ಬಂಧಿಸಬೇಕು ಎಂದು ಆಗ್ರಹಿಸಿದೆ.

ಈ ಹೀನ ಕಗ್ಗೊಲೆ ಮತ್ತು ದೇಶದಲ್ಲಿ ಹೆಚ್ಚುತ್ತಿರುವ ಅಸಹಿಷ್ಣುತೆ ಮತ್ತು ದ್ವೇಷಭಾವದ ವಿರುದ್ಧ ಎಡ ಮತ್ತು ಜನವಾದಿ ಶಕ್ತಿಗಳು ಒಂದು ಬಲವಾದ ಪ್ರತಿಭಟನೆಯನ್ನು ಆರಂಭಿಸಬೇಕು ಎಂದು ಸಿಪಿಐ(ಎಂ) ಪೊಲಿಟ್‌ಬ್ಯುರೊ ಕರೆ ನೀಡಿದೆ.

ಪ್ರತಿಭಟನೆಯ ದನಿಗಳು ಇನ್ನಷ್ಟು ಗಟ್ಟಿಯಾಗುತ್ತವೆ–ಯೆಚುರಿ

ಇದೊಂದು ಅತ್ಯಂತ ಹೀನ ಕಗ್ಗೊಲೆ, ವಿಕರಾಳ ವಿಧಾನದ ಕೊಲೆಗಡುಕ ಹಿಂಸಾಚಾರ ಎಂದು ಖಂಡಿಸಿರುವ ಸಿಪಿಐ(ಎಂ) ಪ್ರಧಾನ ಕಾರ್ಯದರ್ಶಿ ಸೀತಾರಾಮ್ ಯೆಚುರಿಯವರು ದೇಶದಲ್ಲಿ ಈ ಧರ್ಮಾಂಧತೆ, ದ್ವೇಷ, ಅಸಹಿಷ್ಣುತೆ ಮತ್ತು ಹಿಂಸಾಚಾರದ ವಾತಾವರಣವನ್ನು ಪೋಷಿಸುತ್ತಿರುವವರು ಯಾರು, ಅವರಿಗೆ ಈಕೆ ಒಂದು ಬೆದರಿಕೆಯಾಗಿ ಕಂಡಿರುವುದು ಏಕೆ ಎಂದು ಪ್ರಶ್ನಿಸಿದ್ದಾರೆ. ಆದರೆ ಅವರು ಅಡಗಿಸ ಬಯಸುವ ದನಿಗಳು ಇನ್ನಷ್ಟು ಗಟ್ಟಿಯಾಗಿ ಕೇಳಬರುತ್ತವೆ ಎಂದು ಅವರು ಎಚ್ಚರಿಸಿದ್ದಾರೆ.



ಹಂತಕರನ್ನು ತಕ್ಷಣ ಬಂಧಿಸಿ ವೈಚಾರಿಕ ದನಿಗಳನ್ನು ಅಡಗಿಸುವ ಪಿತೂರಿ ಬಯಲಾಗಲಿ

–ಸಿಐಟಿಯು, ಎಐಕೆಎಸ್, ಎಸ್‌ಎಫ್‌ಐ ಆಗ್ರಹ

ವಿಚಾರವಾದಿಗಳಾದ ಗೋವಿಂದ ಪನ್ಸರೆ, ನರೇಂದ್ರ ದಭೋಲ್ಕರ್, ಎಂಎಂ ಕಲ್ಬುರ್ಗಿ ನಂತರ ಈಗ ಗೌರಿ ಲಂಕೇಶ್ ಅವರ ಕ್ರೂರ ಹತ್ಯೆ ನಡೆದಿದೆ ಎಂದು ಇದನ್ನು ಬಲವಾಗಿ ಖಂಡಿಸಿರುವ ದೇಶದ ಒಂದು ಪ್ರಮುಖ ಕಾರ್ಮಿಕ ಸಂಘಟನೆ ಸಿಐಟಿಯು ಕರ್ನಾಟಕ ಸರಕಾರ ಹಂತಕರನ್ನು ಕೂಡಲೇ ಬಂಧಿಸಬೇಕು ಮತ್ತು ವೈಚಾರಿಕತೆಯ ದನಿಗಳನ್ನು ಅಡಗಿಸುವ ಪಿತೂರಿಯನ್ನು ಬಯಲಿಗೆಳೆಯಬೇಕು ಎಂದು ಆಗ್ರಹಿಸಿದೆ. ಸಿಐಟಿಯು ಸದಸ್ಯರು ಮತ್ತು ದೇಶದ ಕಾರ್ಮಿಕ ವರ್ಗ ಈ ಹೀನ ಕೃತ್ಯ ಮತ್ತು ಜಾತ್ಯತೀತತೆಯ ಮೇಲಿನ ದಾಳಿಯ ವಿರುದ್ಧ ಪ್ರತಿಭಟಿಸಬೇಕು ಎಂದು ಅದು ಕರೆ ನೀಡಿದೆ.

ದೇಶದ ರೈತರ ಪ್ರಮುಖ ಸಂಘಟನೆಯಾದ ಅಖಿಲ ಭಾರತ ಕಿಸಾನ್ ಸಭಾ(ಎಐಕೆಎಸ್) ಕೂಡ ಇದು ಹಿರಿಯ ಪತ್ರಕರ್ತೆ ಮತ್ತು ಹೋರಾಟಗಾರ್ತಿಯೊಬ್ಬರ ಕಗ್ಗೊಲೆ ಎಂದು ಖಂಡಿಸುತ್ತ ತಕ್ಷಣವೇ ಹಂತಕರನ್ನು ಬಂಧಿಸಬೇಕು ಎಂದು ಆಗ್ರಹಿಸಿದೆ. ಒಗ್ಗಟ್ಟಿನಿಂದ ದ್ವೇಷ ಹರಡುವ ಶಕ್ತಿಗಳ ವಿರುದ್ಧ ದೇಶವ್ಯಾಪಿ ಪ್ರಚಾರಾಂದೋಲನ ನಡೆಸಬೇಕು ಎಂದು ಹೇಳಿರುವ ಎಐಕೆಎಸ್ ಈ ಹೀನ ಕೃತ್ಯ ಮತ್ತು ಜಾತ್ಯತೀತತೆಯ ಮೇಲಿನ ಹಲ್ಲೆಯನ್ನು ಖಂಡಿಸಬೇಕು ಎಂದು ತನ್ನ ಸದಸ್ಯರಿಗೆ ಕರೆ ನೀಡಿದೆ.

ಭಾರತ ವಿದ್ಯಾರ್ಥಿ ಫೆಡರೇಷನ್(ಎಸ್‌ಎಫ್‌ಐ) ಕೇಂದ್ರೀಯ ಕಾರ್ಯಕಾರಿ ಸಮಿತಿ ದೇಶದ ಒಬ್ಬ ನಿರ್ಭೀತ, ಸ್ವತಂತ್ರ ಪತ್ರಕರ್ತರೂ, ವೈಚಾರಿಕರೂ ಆದ ಗೌರಿ ಲಂಕೇಶ್‌ರವರ ಕಗ್ಗೊಲೆಯ ವಿರುದ್ಧ ಎದ್ದೇಳಬೇಕು ಎಂದು ದೇಶಾದ್ಯಂತ ಇರುವ ತನ್ನ ಘಟಕಗಳಿಗೆ ಕರೆ ನೀಡಿದೆ. ಪ್ರಜಾಪ್ರಭುತ್ವ ಹಕ್ಕುಗಳನ್ನು, ಜಾತ್ಯತೀತತೆಯನ್ನು ರಕ್ಷಿಸಲು ಮತ್ತು ಈ ದ್ವೇಷದ ಶಕ್ತಿಗಳನ್ನು ಸೋಲಿಸಲು ಒಂದು ದೃಢ ಪ್ರತಿರೋಧವನ್ನು ಕಟ್ಟುವುದಾಗಿ ಅದು ಪಣತೊಟ್ಟಿದೆ.

ದನಿಗಳನ್ನು ಅಡಗಿಸುವ ಪ್ರಯತ್ನಗಳು ಯಶಸ್ವಿಯಾಗಲು ಬಿಡಬೇಕೇ? ಗೌರಿ ಲಂಕೇಶ್ ಕಗ್ಗೊಲೆಯ ಹಿನ್ನೆಲೆಯಲ್ಲಿ ಎಐಡಿಡಬ್ಲ್ಯುಎ ಪ್ರಶ್ನೆ

ಈ ಹತ್ಯೆ ಒಬ್ಬ ಹಿರಿಯ ಪತ್ರಕರ್ತೆ ಮತ್ತು ಹೋರಾಟಗಾರ್ತಿಯ ಅತ್ಯಂತ ಹೀನ ಕಗ್ಗೊಲೆ ಎಂದು ಅಖಿಲ ಭಾರತ ಜನವಾದಿ ಮಹಿಳಾ ಸಂಘಟನೆ(ಎಐಡಿಡಬ್ಲ್ಯುಎ) ಬಲವಾಗಿ ಖಂಡಿಸಿದೆ. ರಾಜಧಾನಿ ಬೆಂಗಳೂರಿನಲ್ಲಿ ಇಂತಹ ಒಂದು ಗಂಭೀರ ಅಪರಾಧ ನಡೆದಿರುವುದು ಆತಂಕಕಾರಿ ಮತ್ತು ಆಕ್ರೋಶ ಉಂಟುಮಾಡುವಂತದ್ದು ಎಂದು ಎಐಡಿಡಬ್ಲ್ಯುಎ ಹೇಳಿದೆ. ಗಮನಾರ್ಹ ಸಂಖ್ಯೆಯಲ್ಲಿ ಮಹಿಳಾ ವೃತ್ತಿಪರರು ಇರುವ ಒಂದು ನಗರದಲ್ಲಿ ಮನೆಗಳು ಮತ್ತು ರಸ್ತೆಗಳು ಸುರಕ್ಷಿತವಾಗಿಲ್ಲೆಂಬುದನ್ನು ಇದು ಎತ್ತಿ ತೋರಿದೆ ಎಂದಿರುವ ಎಐಡಿಡಬ್ಲ್ಯುಎ ಈ ಹತ್ಯೆಯ ಪರಿಣಾಮಕಾರಿ ಮತ್ತು ತುರ್ತಾದ ತನಿಖೆ ನಡೆಸಬೇಕು, ಈ ಮೂಲಕ ಅಪರಾಧಿಗಳನ್ನು ಹಿಡಿದು ಅವರಿಗೆ ಇತರರಿಗೆ ನಿದರ್ಶನವಾಗುವಂತಹ ಶಿಕ್ಷೆ ವಿಧಿಸಬೇಕು ಎಂದು ಆಗ್ರಹಿಸಿದೆ.

ದೇಶದ ಹಲವು ಭಾಗಗಳಲ್ಲಿ ವಿಮರ್ಶಕರ ಬಾಯಿ ಮುಚ್ಚಿಸಲು ಹಿಂಸಾಚಾರವನ್ನು ಬಳಸುವ ಘೋರ ಕಾರ್ಯತಂತ್ರವನ್ನು ಹರಿಯಬಿಡಲಾಗುತ್ತಿದೆ ಎಂದು ಕೂಡ ಎಐಡಿಡಬ್ಲ್ಯುಎ ಖಂಡಿಸಿದೆ. ಗೌರಿ ಲಂಕೇಶ್ ಅವರನ್ನು ಗುರಿಯಿಟ್ಟು ಹತ್ಯೆ ಮಾಡಿರುವುದು ಕೇವಲ ಆಕಸ್ಮಿಕವಲ್ಲ. ಇದು ದೇಶದಲ್ಲಿ ಬಲಪಂಥೀಯ ಶಕ್ತಿಗಳ ಹೆಚ್ಚುತ್ತಿರುವ ಪ್ರಭಾವ ಹರಿಯಬಿಟ್ಟಿರುವ ಅಸಹಿಷ್ಣುತೆ ಮತ್ತು ಹಿಂಸಾಚಾರದ ಒಂದು ಕರಾಳ ಸಂಕೇತ. ಅವರನ್ನು ಕೊಂದಿರುವುದೇ ಆಕೆ ಆರೆಸ್ಸೆಸ್ ಮತ್ತು ಹಿಂದುತ್ವ ಬ್ರಿಗೇಡಿನ ಇತರ ಅಂಗಗಳನ್ನು ನಿರ್ದಾಕ್ಷಿಣ್ಯವಾಗಿ ಮತ್ತು ನಿರ್ಭೀತಿಯಿಂದ ಟೀಕಿಸುತ್ತಿದ್ದರು ಎಂಬ ಕಾರಣಕ್ಕಾಗಿ. 'ಗೌರಿ ಲಂಕೇಶ್ ಪತ್ರಿಕೆ'ಯ ಸಂಪಾದಕರಾಗಿ, ಮತ್ತು ಇತರ ಸಾರ್ವಜನಿಕ ವೇದಿಕೆಗಳಲ್ಲಿ ಕೋಮುವಾದಿ ಅಜೆ–ಂಡಾದ ಬಗ್ಗೆ ಅವರ ಕಟು ಟೀಕೆ ಹಲವಾರು ಕೇಸರಿ ಮಂದಿಗಳನ್ನು ಕೆರಳಿಸಿತ್ತು. ತಮ್ಮ ಅಭಿಪ್ರಾಯಗಳಿಗಾಗಿ ಸಾಮಾಜಿಕ ಮಾಧ್ಯಮಗಳಲ್ಲಿ ಅವರು ಮತ್ತೆ–ಮತ್ತೆ ಮೂದಲಿಕೆಗಳು ಮತ್ತು ಬೆದರಿಕೆಗಳನ್ನು ಎದುರಿಸಬೇಕಾಗಿ ಬಂದರೂ ಅವರ ಬಾಯಿ ಮುಚ್ಚಿಸಲು ಆಗಿರಲಿಲ್ಲ. ಹಲವಾರು ಪ್ರಶ್ನೆಗಳ ಮೇಲೆ ತಮ್ಮ ಸಕ್ರಿಯತೆಯನ್ನು ಅವರು ಮುಂದುವರೆಸಿದ್ದರು, ಮತ್ತು ಹೆಚ್ಚೆಚ್ಚು ವೈಷಮ್ಯಭರಿತವಾಗುತ್ತಿರುವ ವಾತಾವರಣದಲ್ಲಿ ಸಾರ್ವಜನಿಕವಾಗಿ, ಯಾವುದೇ ರಾಜಿ ಮಾಡಿಕೊಳ್ಳದೆ ಎಡ ಮತ್ತು ಪ್ರಗತಿಪರ ನಿಲುವನ್ನು ವ್ಯಕ್ತಗೊಳಿಸುತ್ತಿದ್ದರು. ಬೆದರಿಕೆಗಳೇನೇ ಇದ್ದರೂ, ಬಿಜೆಪಿ ಸರಕಾರದ ಧೋರಣೆಗಳನ್ನು ಮತ್ತು ರಾಜಕೀಯವನ್ನು ಬಹಿರಂಗವಾಗೇ ಪ್ರಶ್ನಿಸುತ್ತಿದ್ದರು. ಈ ಹತ್ಯೆಯ ಹಿಂದಿರುವ ಉದ್ದೇಶಗಳು ಪ್ರಜಾಪ್ರಭುತ್ವವಾದಿ ಮನೋಧರ್ಮದ ಜನ ವಿಭಾಗಗಳಿಗೆ ಒಂದು ಎಚ್ಚರಿಕೆ ಗಂಟೆ, ಈ ರೀತಿ ಬೆದರಿಕೆಗಳು, ದನಿಗಳನ್ನು ಅಡಗಿಸುವ ಪ್ರಯತ್ನಗಳು ಯಶಸ್ವಿಯಾಗಲು ಬಿಡಬೇಕೇ ಎಂದು ಎಐಡಿಡಬ್ಲ್ಯುಎ ಪ್ರಶ್ನಿಸಿದೆ.

ಗೌರಿ ಲಂಕೇಶ್‌ರವರನ್ನು ಪ್ರತಿಕ್ರಿಯಾವಾದಿ ಶಕ್ತಿಗಳು ದೈಹಿಕವಾಗಿ ಮುಗಿಸಿ ಬಿಟ್ಟಿರಬಹುದು, ಆದರೆ ಆಕೆಯ ದನಿ ಜೀವಂತವಾಗಿರುತ್ತದೆ, ಅವರ ಕೃತಿ ಸ್ಫೂರ್ತಿ ನೀಡುತ್ತಿರುತ್ತದೆ ಎನ್ನುತ್ತ ಎಐಡಿಡಬ್ಲ್ಯುಎ, ಪ್ರಜಾಪ್ರಭುತ್ವ ಹಕ್ಕುಗಳಿಗಾಗಿ ಹಾಗೂ ಭಿನ್ನಮತಕ್ಕೆ ಅವಕಾಶಕ್ಕಾಗಿ ಸಮರ, ಆಕೆಯ ಹೆಸರಲ್ಲಿ, ಮತ್ತು ಈ ಸಂವಿಧಾನಿಕ ಹಕ್ಕುಗಳನ್ನು ಎತ್ತಿಹಿಡಿಯುವಾಗ ಹತ್ಯೆಗಳಿಗೆ ಗು–ರಿಯಾದ ಇತರರ ಹೆಸರಿನಲ್ಲಿ ಮುಂದುವರೆಯುತ್ತದೆ ಎಂದಿದೆ. ಈ ಜಘನ್ಯ ಹತ್ಯೆಯ ವಿರುದ್ಧ ದೇಶಾದ್ಯಂತ ಪ್ರತಿಭಟನೆಗಳನ್ನು ಸಂಘಟಿಸಬೇಕು ಎಂದು ಕರೆ ನೀಡಿರುವ ಎಐಡಿಡಬ್ಲ್ಯುಎ ಗೌರಿ ಲಂಕೇಶ್ ಅವರಿಗೆ ನ್ಯಾಯ ಪಡೆಯುವ ವರೆಗೆ ಈ ಹೋರಾಟ ಮುಂದುವರೆಯುತ್ತದೆ ಎಂದು ಹೇಳಿದೆ.

ಸಂಪಾದಕೀಯ

"ನಾನೂ ಗೌರಿ, ನನಗೆ ಗುಂಡಿಡಿ"

ಗೌರಿ ಲಂಕೇಶ್ ಅವರ ಬರ್ಬರ ಹತ್ಯೆ ಕರ್ನಾಟಕ, ಭಾರತ ಮಾತ್ರವಲ್ಲ ಇಡೀ ಜಗತ್ತಿಗೆ ಆಘಾತಕಾರಿ ಸುದ್ದಿಯಾಗಿದೆ. ಡಾ. ದಾಬೋಲ್ಕರ್, ಗೋವಿಂದ್ ಪನ್ಸಾರೆ, ಡಾ ಕಲಬುರ್ಗಿ ಅವರ ಕೊಲೆಗಳ ಎರಡು ವರ್ಷಗಳ ನಂತರ ಗೌರಿ ಲಂಕೇಶ್ ಅವರ ಅದೇ ಮಾದರಿಯ ಹತ್ಯೆ ಇಡೀ ದೇಶವೇ ತಲೆತಗ್ಗಿಸುವ ಬೆಳವಣಿಗೆ. ದ್ವೇಷ ಮತ್ತು ಅಸಹನೆಗಳ ವಾತಾವರಣ ಹರಡುವ ಅದನ್ನು ವಿರೋಧಿಸಿದವರನ್ನು ಪ್ರತಿರೋಧಿಸಿದವರನ್ನು ಬಲಿ ತೆಗೆದುಕೊಳ್ಳುವ ಬಲಪಂಥೀಯ ಶಕ್ತಿಗಳ ಬಲ ಕಿಂಚಿತ್ತೂ ಕುಂದಿಲ್ಲ. ಅವುಗಳಿಗೆ ಕುಮ್ಮಕ್ಕು ಬೆಂಬಲ ಕೊಡುವ ಸರಕಾರಗಳೂ ಇನಿತೂ ಬದಲಾಗಿಲ್ಲ ಎಂಬುದನ್ನು ಇನ್ನೊಮ್ಮೆ ತೋರಿಸಿಕೊಟ್ಟಿದೆ. ಹಿಂದಿನ ಮೂರೂ ಸರಣಿ ಕೊಲೆಗಳ ಕೊಲೆಗಡುಕರನ್ನು ಪತ್ತೆ ಹಚ್ಚುವಲ್ಲಿ ಮಹಾರಾಷ್ಟ್ರ, ಕರ್ನಾಟಕ ಮತ್ತು ಕೇಂದ್ರದಲ್ಲಿದ್ದ ಕಾಂಗ್ರೆಸ್ ಮತ್ತು ಬಿಜೆಪಿ ಎರಡೂ ಪಕ್ಷಗಳ ನೇತೃತ್ವದ ಸರಕಾರಗಳ ನಿರ್ಲಕ್ಷ ಅದಕ್ಷತೆ ವಿಳಂಬ ವೈಫಲ್ಯಗಳ ನೇರ ಫಲ ಇದು ಎಂಬುದು ಸ್ಪಷ್ಟ. ಅದರಲ್ಲೂ ಡಾ ಕಲಬುರ್ಗಿ ಅವರ ಕೊಲೆ ತನಿಖೆಯಲ್ಲಿ ಯಾವುದೇ ಪ್ರಗತಿ ತೋರಿಸದ ಕರ್ನಾಟಕದ ಸಿದ್ಧರಾಮಯ್ಯ ಸರಕಾರ ಇದರ ಪ್ರಮುಖ ಜವಾಬ್ದಾರಿ ಹೊರಬೇಕು. "ಸೆಕ್ಯುಲರ್ ಮತ್ತು ಅಹಿಂದ" ಸರಕಾರದ ಆಡಳಿತದಲ್ಲಿ ಬೆಂಗಳೂರಿನಂತಹ ನಗರದಲ್ಲಿ ಇಂತಹ ಭೀಕರ ಕೊಲೆ ನಡೆಯುತ್ತದೆ ಎನ್ನುವುದು ನಾಚಿಕಗೇಡಿನ ವಿಷಯ.

ಈ ವರೆಗಿನ ಸರಕಾರದ ಸ್ಪಂದನೆ ನೋಡಿದರೂ ಗೌರಿ ಲಂಕೇಶ್ ಕೊಲೆಗಡುಕರನ್ನು ಗುರುತಿಸಿ ಶಿಕ್ಷಿಸಲಾಗುತ್ತದೆ ಎಂಬ ಭರವಸೆ ಮೂಡುತ್ತಿಲ್ಲ. ಗುಪ್ತದಳದ ಐಜಿಪಿ ಬಿ ಕೆ ಸಿಂಗ್ ನೇತೃತ್ವದಲ್ಲಿ ವಿಶೇಷ ತನಿಖಾ ತಂಡ ರಚಿಸಲಾಗಿದೆ. ಮನೆಯ ಎದುರಿನ ಸಿಸಿಟಿವಿ ಯಲ್ಲಿ ಕೊಲೆಗಡುಕರ ವಿಡಿಯೋ ರೆಕಾರ್ಡು ಆಗಿದೆ, ಎಂಬುದನ್ನು ಬಿಟ್ಟರೆ ಯಾವುದೇ ಆಶಾದಾಯಕ ಲಕ್ಷಣಗಳಿಲ್ಲ. ಕೊಲೆಗಡುಕರು ಬಾಡಿಗೆ-ಯ "ವೃತ್ತಿಪರ" ಕೊಲೆಗಾರರಾಗಿರುವ ಸಾಧ್ಯತೆ ಹೆಚ್ಚಿರುವುದರಿಂದ ಕೊಲೆಗಡುಕರನ್ನು ಗುರುತಿಸುವುದು ಮಾತ್ರವಲ, ಅವರ ಹಿಂದಿರುವ ಕೊಲೆಯ ಯೋಜಕ ವ್ಯಕ್ತಿಗಳು/ಸಂಘಟನೆಗಳು ಮತ್ತು ಅವರ ಉದ್ದೇಶಗಳನ್ನು ಬಯಲಿಗೆಳೆಯುವ ಅಗತ್ಯ ಇದೆ. ಹಿಂದಿನ ಮೂವರು ವಿಚಾರವಾದಿಗಳ ಕೊಲೆಯ ಹಿಂದೆ ಗೋವಾದಲ್ಲಿ ಪ್ರಧಾನ ಕಚೇರಿ ಹೊಂದಿರುವ ಸನಾತನ ಸಂಸ್ಥೆಯ ವ್ಯಕ್ತಿಗಳ ಕೈವಾಡ ಇದೆ. ಬಳಸಿದ ಪಿಸ್ತೂಲು, ಕೊಲೆಯ ಮಾದರಿ ಒಂದೇ ಇದೆ. ಬಂಧಿಸಲಾದ ಶಂಕಿತರೂ ಆ ಸಂಸ್ಥೆಯ ಸದಸ್ಯರು ಎಂಬೆಲ್ಲಾ ಅನುಮಾನಗಳು ಇದ್ದರೂ ಈ ವರೆಗೆ ಈ ನಿಟ್ಟಿನಲ್ಲಿ ಯಾವುದೇ ಪ್ರಗತಿಯಾಗಿಲ್ಲ. ಗೌರಿ ಅವರ ಕೊಲೆಗೂ ಈ ಮೂರೂ ಕೊಲೆಗಳಿಗೆ ಸಾಮ್ಯತೆಗಳಿವೆ. ಸಂಘ ಪರಿವಾರದ ಮತ್ತು ಅದರ ಸರಕಾರಗಳ ಧೋರಣೆಗಳನ್ನು ವಿರೋಧಿಸುವರೆಲ್ಲರೂ ಗೋಮಾಂಸ ತಿನ್ನುವರು ದೇಶದ್ರೋಹಿಗಳು. ಅವರನ್ನು ಬಡಿದು ಕೊಲ್ಲಬೇಕು ಎಂಬುದನ್ನು ಸಾಮಾನ್ಯಗೊಳಿಸಿರುವ ಸಂಘ ಪರಿವಾರ ಇಂತಹ ಹಿಂಸಾಚಾರಕ್ಕೆ ಕುಮ್ಮಕ್ಕು ಕೊಡುವ ವಾತಾವರಣ ಸೃಷ್ಟಿಸಿದೆ. ಇಂತಹ ವಾತಾವರಣ ಉಗ್ರ ಬಲಪಂಥೀಯ ಶಕ್ತಿಗಳಿಗೆ ಲೈಸೆನ್ಸ್ ಕೊಟ್ಟಂತಾಗಿದೆ. ಆದ್ದರಿಂದ ಇದು ಉಗ್ರ ಬಲಪಂಥೀಯ ಗುಂಪುಗಳ ಕೃತ್ಯ ಮತ್ತು ಅದಕ್ಕೆ ಸಂಘ ಪರಿವಾರದ ಪರೋಕ್ಷ ಕುಮ್ಮಕ್ಕು ಬೆಂಬಲವಾದರೂ ಇದೆ ಎಂದು ನಂಬಲು ಸಾಕಷ್ಟು ಆಧಾರಗಳಿವೆ.



ಸೆಕ್ಯುಲರ್ ಮತ್ತು ಎಡ-ಪ್ರಜಾಸತ್ತಾತ್ಮಕ ಶಕ್ತಿಗಳ ಈ ಅನುಮಾನಗಳಿಗೆ ಯಾವ ಪುರಾವೆಗಳಿವೆ ಎಂದು ಸಂಘ ಪರಿವಾರದ ಮತ್ತು ಅದರ ಕಾರ್ಯಕರ್ತರು ಮತ್ತು ನಾಯಕರು ಪ್ರಶ್ನಿಸಿದ್ದಾರೆ. ಪುರಾವೆಗೆ ಬಹಳ ದೂರ ಹೋಗಬೇಕಾಗಿಲ್ಲ. ಸಂಘ ಪರಿವಾರದ ಮತ್ತು ಬಿಜೆಪಿ ಸರಕಾರಗಳ ಹೆಚ್ಚಿನ ಜವಾಬ್ದಾರಿ ಸ್ಥಾನಗಳಲ್ಲಿರುವ ಹೆಚ್ಚಿನ ನಾಯಕರು (ಪ್ರಧಾನಿ ಮೋದಿ ಮೊಹನ್ ಭಾಗವತ್ ಸೇರಿದಂತೆ) ಹತ್ಯೆಯನ್ನು ಖಂಡಿಸಿಲ್ಲ. ಕೆಲವೇ ನಾಯಕರು ಬಹಳ ಸಮಯದ ನಂತರ ರೆಕಾರ್ಡಿಗಾಗಿಯೋ ಎಂಬಂತೆ ಖಂಡಿಸಿದ್ದಾರೆ. ಅವರನ್ನೂ ಸಂಘಿ ಫೇಸ್ ಬುಕ್ 'ಟ್ರೋಲ್' ಗಳು ಹೀಯಾಳಿಸಿದ್ದಾರೆ. ಮಾತ್ರವಲ್ಲ, ಸಂಘ ಪರಿವಾರದ ಹಲವು ಕಾರ್ಯಕರ್ತರು ಸಾಮಾಜಿಕ ಮಾಧ್ಯಮಗಳಲ್ಲೂ ಬೇರೆಡೆಗಳಲ್ಲೂ ಮುಕ್ತವಾಗಿಯೇ ಈ ಹೇಯ ಕೃತ್ಯವನ್ನು ಬೆಂಬಲಿಸಿದ್ದಾರೆ. ಆ ಬಗ್ಗೆ ಸಂಭ್ರಮಿಸಿದ್ದಾರೆ. "ಚೆಡ್ಡಿಗಳ ಮಾರಣ ಹೋಮ ಅಂತ ಗೌರಿ ಲಂಕೇಶ್ ತಮ್ಮ ಪತ್ರಿಕೆಯಲ್ಲಿ ಬರೆಯದೇ ಇದ್ದಿದ್ದರೆ ಅವರು ಉಳಿಯುತ್ತಿರಲಿಲ್ಲವಾ?" ಎಂದು ಚಿಕ್ಕಮಗಳೂರು ಬಿಜೆಪಿ ಶಾಸಕ ಜೀವರಾಜ್ ಸಭೆಯೊಂದರಲ್ಲಿ ಹೇಳಿದ್ದಾರೆ. ಹತ್ಯೆಗೆ ಬೆಂಬಲ ಮತ್ತು ಸಂಭ್ರಮ ಸಾಮಾಜಿಕ ಮಾಧ್ಯಮಗಳಲ್ಲಿ ಅತ್ಯಂತ ಅವಹೇಳನಕಾರಿ ಕೀಳು ಮಟ್ಟ ತಲುಪಿದೆ. ಇಂತಹ ಮಟ್ಟಕ್ಕೆ ಇಳಿದ ಹಲವರನ್ನು ಪ್ರಧಾನಿ ಮೋದಿ ಸೇರಿದಂತೆ ಹಲವು ಹಿರಿಯ ಸಂಘಿ ನಾಯಕರು ಫಾಲೋ ಮಾಡುತ್ತಿದ್ದಾರೆ ಎಂಬುದು ಇನ್ನಷ್ಟು ಆಘಾತಕಾರಿ. "ಒಂದು ಹೆಣ್ಣು ಕುನ್ನಿ ಸತ್ತಿದೆ...ಎಲ್ಲಾ ನಾಯಿಮರಿಗಳು ಒಂದೇ ಸ್ವರದಲ್ಲಿ ಊಳಿಡುತ್ತಿವೆ" ಎಂಬ ಜವಳಿ ಉದ್ಯಮಿ ನಿಖಿಲ್ ದಧೀಚ್ ನ ಖಾತೆಯನ್ನು ಪ್ರಧಾನಿ ಮೋದಿ ಫಾಲೋ ಮಾಡುತ್ತಿದ್ದಾರೆ. ಇಂತಹವರ ಮೇಲೆ ಕ್ರಮವನ್ನೂ ಜರುಗಿಸಲಾಗಿಲ್ಲ. ಫಾಲೋ ಮಾಡುವುದನ್ನೂ ನಿಲ್ಲಿಸಿಲ್ಲ. "ಧರ್ಮಕ್ಕಾಗಿ ಜೀವ ಕೊಡಬೇಕು ಅಂತೇನಿಲ್ಲ...ಧರ್ಮದ ವಿರುದ್ಧವಾದವರ ಜೀವ ತೆಗೆದರೆ ಆಯ್ತು" ಎಂಬುದು ಮಲ್ಲಿ ಅರ್ಜುನ್(ಉರುಫ್ ಮಲ್ಲಿಕಾರ್ಜುನ ಬಿರಾದರ) ಅವರ ಕಮೆಂಟ್. ಮಾತ್ರವಲ್ಲ ಗೌರಿ ಲಂಕೇಶ್ ಅವರ ಮೇಲೆ ಅವರ ಪತ್ರಿಕೆಯ ಲೇಖನಗಳ ವಿರುದ್ಧ ಮತ್ತು ಬೇರೆ ಬೇರೆ ನೆಪಗಳಲ್ಲಿ ಕೋರ್ಟಿನಲ್ಲಿ ಹತ್ತಾರು "ಅವಹೇಳನ" ಕೇಸುಗಳನ್ನು ಹಾಕಿದವರಲ್ಲಿ ಹೆಚ್ಚಿನವರು ಸಂಘ ಪರಿವಾರದ ನಾಯಕರು ಕಾರ್ಯಕರ್ತರೇ. ಇವರಲ್ಲಿ ಸಂಸದ ಹಿರಿಯ ನಾಯಕ ಪ್ರಹ್ಲಾದ್ ಜೋಶಿ ಮತ್ತು ಉಮೇಶ್ ದುಶಿ ಅವರೂ ಸೇರಿದ್ದಾರೆ. ರಾಜ್ಯದ ತುಂಬಾ ಈ ಕೇಸುಗಳ ಹಿಯರಿಂಗುಗಳಿಗೆ ಅಲೆದು ಸುಸ್ತಾಗುವಂತೆ ಮಾಡಿದವರೂ ಅವರೇ. ಇನ್ನೂ ಹೆಚ್ಚು "ಪುರಾವೆ"ಗಳು ಬೇಕೆ?

ತಮ್ಮ ಮೇಲೆ ಈ ಕೊಲೆಯ ಆಪಾದನೆ ಬರುವುದು ಎಂದು ತಿಳಿದ ಬಲಪಂಥೀಯ ಶಕ್ತಿಗಳು ಮತ್ತು ಅವರ ಬಾಲಬಡುಕ ಮಾಧ್ಯಮಗಳು ಅದನ್ನು ಬೇರೆಡೆಗೆ ತಿರುಗಿಸುವ ಪ್ರಯತ್ನ ಮಾಡಿದವು. ಡಾ. ರಾಜೀವ್ ಚಂದ್ರಶೇಖರ್ ಸ್ವಾಮ್ಯದ ರಿಪಬ್ಲಿಕನ್ ಟಿವಿ ಗೌರಿ ಸೋದರ (ಇತ್ತೀಚೆಗಷ್ಟೇ ಬಿಜೆಪಿ ಜತೆ ಗುರುತಿಸಿಕೊಂಡಿದ್ದ) ಇಂದ್ರಜಿತ್ "ಸಹಕಾರ"ದೊಂದಿಗೆ ಉಗ್ರ ಎಡಪಂಥೀಯರು ಹತ್ಯೆ ಮಾಡಿರಬಹುದಾದ ಕೋನವನ್ನೂ ನೋಡಬೇಕು ಎಂದು ಹರಿಯಬಿಟ್ಟಿತು. ಹಲವು ಬಿಜೆಪಿ ಬಾಲಬಡುಕ ಮಾಧ್ಯಮಗಳು ಈ ವಕ್ರಧೋರಣೆ ಮುಂದುವರೆಸಿವೆ. ಅವು ಪುನಃ ಇಂದ್ರಜಿತ್ "ಸಹಕಾರ"ದೊಂದಿಗೆ ಕರ್ನಾಟಕ ಸರಕಾರದಲ್ಲಿ ನಂಬಿಕೆ ಇಲ್ಲ. ಸಿಬಿಐ ತನಿಖೆ ನಡೆಸಬೇಕು ಎಂಬ ಪ್ರಚಾರವನ್ನೂ ಆರಂಭಿಸಿದವು. ಆದರೆ ಗೌರಿ ಅವರ ಸೋದರಿ ಕವಿತಾ ಇವೆರಡೂ ಧೋರಣೆಯನ್ನು ತಿರಸ್ಕರಿಸುವ ಮೂಲಕ ಈ ಪ್ರಯತ್ನಕ್ಕೆ ಹಿನ್ನಡೆ ಆಗಿದೆ. ಇದೇ ಇಂದ್ರಜಿತ್ ಹಿಂದೆ ಕುಟುಂಬದ ಆಸ್ತಿಯ ವಿಷಯದಲ್ಲಿ ಗೌರಿಗೆ ಪಿಸ್ತೂಲು ತೋರಿಸಿದ್ದರು ಮತ್ತು ಅವರ ನಡುವೆ ಹೆಚ್ಚಿನ ಸಂಪರ್ಕ ಇರಲಿಲ್ಲ ಎಂಬುದು ಬಹಿರಂಗ ಗುಟ್ಟಾದರೂ, ಅವು ಇನ್ನೂ ಪ್ರಯತ್ನಗಳನ್ನು ಬಿಟ್ಟಿಲ್ಲ.

ಗೌರಿ ಅವರ ಹತ್ಯೆಗೆ ಸೆಕ್ಯುಲರ್ ಮತ್ತು ಎಡ-ಪ್ರಜಾಸತ್ತಾತ್ಮಕ ಶಕ್ತಿಗಳಿಂದ ಬಂದ ಪ್ರತಿಕ್ರಿಯೆ ಸ್ಫೂರ್ತಿದಾಯಕ. ಅದೇ ರಾತ್ರಿ ಕರ್ನಾಟಕದ ಹಲವು ಕಡೆ, ಮರು ದಿನ ಇಡೀ ದೇಶದಲ್ಲಿ ಜಗತ್ತಿನಲ್ಲಿ ನಡೆದ ಪತ್ರಕರ್ತರ ಮತ್ತಿತರ ಜನವಿಭಾಗಗಳ ಪ್ರತಿಭಟನೆಗಳು ನಡೆದವು. ಗೌರಿ ಅವರ ಪಾರ್ಥಿವ ಶರೀರ ಇಟ್ಟ ರವೀಂದ್ರ ಕಲಾಕ್ಷೇತ್ರ, ಆ ಮೇಲೆ ಚಾಮರಾಜಪೇಟೆಯಲ್ಲಿ ನಡೆದ ಅಂತ್ಯಕ್ರಿಯೆಯಲ್ಲಿ ಭಾಗವಹಿಸಿದವರ ಹಾಡು-ಘೋಷಣೆಗಳು, ತೋರಿದ ಐಕ್ಯತೆ ನೋಡಿದರೆ, ಸೆಕ್ಯುಲರ್ ಮತ್ತು ಎಡ-ಪ್ರಜಾಸತ್ತಾತ್ಮಕ ವ್ಯಕ್ತಿ/ಶಕ್ತಿ/ಸಂಘಟನೆಗಳನ್ನು ಇಂತಹ ಹತ್ಯೆಗಳಿಂದ ಬೆದರಿಸಿ ಸುಮ್ಮನಿರಿಸಬಹುದು ಎಂಬುದು ಕೊಲೆಗಡುಕರ ಮತ್ತು ಅವರ ಹಿಂದಿರುವವರ ಉದ್ದೇಶವಾಗಿದ್ದರೆ ಅದು ಖಂಡಿತ ವಿಫಲವಾಗಿದೆ. ಕರ್ನಾಟಕ, ಇಂಡಿಯಾ ಮತ್ತು ಇಡೀ ಜಗತ್ತಿನಲ್ಲಿ ಮಾರ್ದನಿಗೊಂಡ "ನಾನೂ ಗೌರಿ, ನನಗೆ ಗುಂಡಿಡಿ" (I am Gauri, Shoot Me) ಎಂಬ ಘೋಷಣೆ ಮೂಲಕ ಈ ಪ್ರತಿರೋಧ ವ್ಯಕ್ತವಾಗಿದೆ. ಈ ಹತ್ಯೆಯೇ ಸೆಕ್ಯುಲರ್ ಮತ್ತು ಎಡ-ಪ್ರಜಾಸತ್ತಾತ್ಮಕ ಶಕ್ತಿಗಳ ಇನ್ನಷ್ಟು ಗಟ್ಟಿಯಾದ ಐಕ್ಯತೆಗೆ ವೇಗವರ್ಧಕವಾಗುವ ಲಕ್ಷಣಗಳು ಕಾಣುತ್ತಿವೆ. ಚಾರಿತ್ರಿಕ "ಸೌಹಾರ್ದತೆಗಾಗಿ ಕರ್ನಾಟಕ" ಸಮಾವೇಶ ಮತ್ತು ರಾಜ್ಯ-ವ್ಯಾಪಿ ಮಾನವ ಸರಪಣಿಗೆ ಅದರ ಕರೆ, ನಡೆದ ದಿನವೇ ಗೌರಿ ಹತ್ಯೆ, ಅದರ ಮಹತ್ವ ಅಗತ್ಯತೆಯನ್ನು ಇನ್ನಷ್ಟು ಹೆಚ್ಚಿಸಿದೆ. ಇಂತಹ ಸಮಾವೇಶಗಳು ಜಿಲ್ಲಾ, ತಾಲೂಕು, ಗ್ರಾಮ/ವಾರ್ಡು ಮಟ್ಟಗಳಲ್ಲಿ ನಡೆದು ಸೌಹಾರ್ದತೆಗಾಗಿ ಕೋಮುವಾದಿ ಭಯೋತ್ಪಾದನೆಯ ವಿರುದ್ಧ ಸಂಘಟಿತ ಚಳುವಳಿಯ ಸ್ವರೂಪ ಪಡೆಯಬೇಕು.

ಸೆಪ್ಟೆಂಬರ್ 6 ರಂದು ಪುರಭವನದ ಎದುರು ನಡೆದ ಸಭೆಯಲ್ಲಿ ಕೈಗೊಂಡ ಮೂರು ಪ್ರಮುಖ ಹಕ್ಕೊತ್ತಾಯಗಳಿಗೆ ವ್ಯಾಪಕ ಪ್ರಚಾರ-ಪ್ರಕ್ಷೋಭೆ ನಡೆಯಬೇಕು. ಆ ಮೂರು ಹಕ್ಕೊತ್ತಾಯಗಳೆಂದರೆ – ಇದನ್ನು ಭಯೋತ್ಪಾದಕ ಕೃತ್ಯವೆಂದು ಘೋಷಿಸಬೇಕು, ನ್ಯಾಯಾಲಯದ ಮೇಲ್ವಿಚಾರಣೆಯಲ್ಲಿ ಎಸ್.ಐ.ಟಿ ತನಿಖೆ ನಡೆಯಬೇಕು, ಸಂವಿಧಾನದ ಆಶಯಗಳನ್ನು ಎತ್ತಿಹಿಡಿಯುವ ವಿಚಾರವಾದಿಗಳ ಸರಣಿ ಕೊಲೆಗಳು ನಿರ್ದಿಷ್ಟ ಸಂಘಟಿತ ಗುಂಪಿನಿಂದ ನಡೆಯುತ್ತಿರುವ ಸಾಧ್ಯತೆ ಬಗ್ಗೆ ನಿರ್ದಿಷ್ಟ ಕ್ರಮಗಳನ್ನು ಶಿಫಾರಸ್ಸು ಮಾಡಲು ಜಂಟಿ ಸಂಸತ್ ಸಮಿತಿ ರಚನೆಯಾಗಬೇಕು.




ಅಂತಿಮ ನಮನ

ಸಾಮ್ರಾಜ್ಯಶಾಹಿ ವಿರೋಧಿ ದಿನಾಚರಣೆ

ವಿಶ್ವಶಾಂತಿ ಚಿರಾಯುವಾಗಲಿ ಎಂಬ ಘೋಷಣೆಯೊಂದಿಗೆ ಸಿಪಿಐ(ಎಂ) ದ.ಕ.ಜಿಲ್ಲಾ ಸಮಿತಿ ವತಿಯಿಂದ ಸೆಪ್ಟೆಂಬರ್ 1 ರಂದು ಮಂಗಳೂರು ಜಿಲ್ಲಾಧಿಕಾರಿ ಕಚೇರಿ ಎದುರು ಸಾಮ್ರಾಜ್ಯಶಾಹಿ ವಿರೋಧಿ ದಿನವನ್ನು ಆಚರಿಸಲಾಯಿತು.

ಈ ಸಂದರ್ಭ ದ.ಕ.ಜಿಲ್ಲಾ ಸಮಿತಿ ಕಾರ್ಯದರ್ಶಿ ವಸಂತ ಆಚಾರಿ ಮಾತನಾಡಿ, ವಿಶ್ವದಲ್ಲಿ ತನ್ನ ಪ್ರಾಬಲ್ಯವನ್ನು ಸ್ಥಾಪಿಸಲು ಅಮೇರಿಕಾ ಸಂಸ್ಥಾನ ಪ್ರಯತ್ನಿಸುತ್ತಿರುವುದು ವಿಶ್ವಶಾಂತಿಗೆ ದೊಡ್ಡ ತಡೆ–ಯಾಗಿದೆ ಎಂಬುದನ್ನು ನಿರೂಪಿಸಿದರು. ಭಾರತ ಮತ್ತು ಪಾಕಿಸ್ಥಾನದ ಮಧ್ಯೆ ಸಂಘರ್ಷವನ್ನು ಹುಟ್ಟುಹಾಕಲು ಒಂದೆಡೆಯಲ್ಲಿ ಪಾಕಿಸ್ತಾನಕ್ಕೆ ನೆರವನ್ನೂ, ಇನ್ನೊಂದೆಡೆಯಲ್ಲಿ ಭಾರತದೊಡನೆ ಯುದ್ಧ ಸಂಬಂಧೀ ಶಸ್ತ್ರಾಸ್ತ್ರ ಮಾರಾಟ ಒಪ್ಪಂದ ಹಾಗೂ ತರಬೇತಿಗಳನ್ನು ನಡೆಸುತ್ತಿದೆ. ಬಹುರಾಷ್ಟ್ರೀಯ ಕಂಪೆನಿಗಳಿಗೆ ಯುದ್ಧ ಸಾಮಾಗ್ರಿ ಉತ್ಪಾದನೆಗೆ ನಮ್ಮ ಪ್ರಧಾನಿ ನರೇಂದ್ರ ಮೋದಿ ಅವರು ಅವಕಾಶ ಒದಗಿಸುತ್ತಿರುವುದು ಅಪಾಯಕಾರಿ. ಅಂತೆಯೇ ಚೀನಾ ಮತ್ತು ಭಾರತದ ನಡುವೆ ಅನಗತ್ಯ ಕಲಹ ಸೃಷ್ಟಿಸಲು ಅಮೇರಿಕಾ ಪ್ರಯತ್ನಿಸುತ್ತಿದೆ ಎಂದು ಅವರು ವಿವರಿಸಿದರು.

ಪ್ರತಿಭಟನೆಗೂ ಮೊದಲು ಮಿನಿವಿಧಾನಸೌಧದಿಂದ ಜಿಲ್ಲಾಧಿಕಾರಿ ಕಚೇರಿವರೆಗೆ ಮೆರವಣಿಗೆ ನಡೆಸಲಾಯಿತು. ಸಿಪಿಐ(ಎಂ) ದ.ಕ.ಜಿಲ್ಲಾ ಸಮಿತಿ ಮುಖಂಡರಾದ ಜೆ.ಬಾಲಕೃಷ್ಣ ಶೆಟ್ಟಿ, ಸುನಿಲ್ ಕುಮಾರ್ ಬಜಾಲ್, ಕೃಷ್ಣಪ್ಪ ಸಾಲ್ಯಾನ್ ಕಾರ್ಯಕ್ರಮದಲ್ಲಿ ಭಾಗವಹಿಸಿದ್ದರು.

ಉಳ್ಳಾಲ ತೊಕ್ಕೊಟಿನಲ್ಲಿ ಕಾಲ್ನಡಿಗೆ ಜಾಥಾ ಸಂಗಮ:

ಚುನಾವಣಾ ಭರವಸೆಗಳನ್ನು ಈಡೇರಿಸುವಂತೆ ಕೇಂದ್ರ ಸರಕಾರಕ್ಕೆ ಆಗ್ರಹಿಸಿ ದೇಶಾದ್ಯಂತ ಜನ ಚಳುವಳಿಯ ಅಂಗವಾಗಿ ಉಳ್ಳಾಲ ವಲಯ ಸಮಿತಿ ಆಶ್ರಯದಲ್ಲಿ ತೊಕ್ಕೊಟ್ಟು ಜಂಕ್ಷನ್ನಿನಲ್ಲಿ ಕಾಲ್ನಡಿಗೆ ಜಾಥಾ ಸಂಗಮ ಸಭೆ ನಡೆಯಿತು.

ಸಭೆಯನ್ನುದ್ದೇಶಿಸಿ ಸಿಪಿಐ(ಎಂ) ದ.ಕ. ಜಿಲ್ಲಾ ಸಮಿತಿ ಕಾರ್ಯದರ್ಶಿ ವಸಂತ ಆಚಾರಿ ಮಾತನಾಡಿ, ಲೋಕಸಭಾ ಚುನಾವಣಾ ಸಮಯದಲ್ಲಿ ನೂರಾರು ಆಶ್ವಾಸನೆಗಳನ್ನು ನೀಡಿ ಅಧಿಕಾರಕ್ಕೆ ಬಂದ ನರೇಂದ್ರಮೋದಿ ನೇತೃತ್ವದ ಸರಕಾರ ತನ್ನ ಆಶ್ವಾಸನೆಗಳನ್ನು ಈಡೇರಿಸುವಲ್ಲಿ ಸಂಪೂರ್ಣ ವಿಫಲವಾಗಿದೆ ಎಂದು ಅನೇಕ ವಿವರಗಳ ಮೂಲಕ ನಿರೂಪಿಸಿದರು.

ಸಭೆಗೆ ಪೂರ್ವಭಾವಿಯಾಗಿ ಉಳ್ಳಾಲ ಕೋಟೆಪುರದಿಂದ ದ.ಕ.ಜಿಲ್ಲಾ ಸಮಿತಿ ಸದಸ್ಯೆ ಪದ್ಮಾವತಿ ಶೆಟ್ಟಿ ನೇತೃತ್ವದಲ್ಲಿ, ಕೋಟೆಕಾರಿನಿಂದ ಲೋಕಲ್ ಸಮಿತಿ ಕಾರ್ಯದರ್ಶಿ ಬಾಬು ಪಿಲಾರ್ ನೇತೃತ್ವದಲ್ಲಿ ಮತ್ತು ಕೊಣಾಜೆಯಿಂದ ಲೋಕಲ್ ಸಮಿತಿಯ ಸಂಕಪ್ಪ ಕರ್ಕೇರ ನೇತೃತ್ವದಲ್ಲಿ ಜಾಗೃತಿ ಜಾಥಾ ನಡೆದು ಸಂಜೆ ತೊಕ್ಕೊಟ್ಟು ಜಂಕ್ಷನ್‌ನಲ್ಲಿ ಸಮಾರೋಪಗೊಂಡಿತು. ಸಿಪಿಐ(ಎಂ) ಉಳ್ಳಾಲ ವಲಯ ಕಾರ್ಯದರ್ಶಿ ಕೃಷ್ಣಪ್ಪ ಸಾಲ್ಯಾನ್, ದ.ಕ.ಜಿಲ್ಲಾ ಸಮಿತಿಯ ಸದಸ್ಯರಾದ ಯಾದವ ಶೆಟ್ಟಿ, ಜಯಂತ ನಾಯ್ಕ್ ಈ ಕಾರ್ಯಕ್ರಮದಲ್ಲಿ ಉಪಸ್ಥಿತರಿದ್ದರು.

ಹಕ್ಕು ಪತ್ರಕ್ಕಾಗಿ ನಿವೇಶನ ರಹಿತರಿಂದ ಶಿರೂರು ಗ್ರಾಮ ಪಂಚಾಯತ್ ಕಛೇರಿ ಮುತ್ತಿಗೆ

ಕುಂದಾಪುರ ತಾಲೂಕು ಶಿರೂರು ಗ್ರಾಮ ಪಂಚಾಯತ್ ವ್ಯಾಪ್ತಿಯಲ್ಲಿ ವಸತಿ ಸಮಸ್ಯೆ ಜನ ಸಾಮಾನ್ಯರ ಒಂದು ಗಂಭೀರ ಸಮಸ್ಯೆಯಾಗಿದೆ. ಒಂದೇ ಮನೆಯ ಸೂರಿನಡಿಯಲ್ಲಿ 2–3 ಕುಟುಂಬಗಳು ಒಟ್ಟಿಗೆ ವಾಸವಾಗಿರುವ ಅನಿವಾರ್ಯ ಪರಿಸ್ಥಿತಿ ಇದೆ. ಅತೀ ಚಿಕ್ಕ ಮನೆಗೂ ತಿಂಗಳೊಂದರ ದುಬಾರಿ ಬಾಡಿಗೆ ಕೊಡಬೇಕಾದ ಪರಿಸ್ಥಿತಿ ಇದೆ. ಭೂಮಿಯ ಬೆಲೆ ವಿಪರೀತ ಹೆಚ್ಚುತ್ತಿರುವುದರಿಂದ ಬಡ ಜನರು ಖಾಸಗಿ ಜಮೀನು ನಿವೇಶನ ಖರೀದಿ ಮಾಡುವುದು ಕನಸಿನ ಮಾತು. ಈ ಹಿನ್ನೆಲೆಯಲ್ಲಿ "ಶಿರೂರು ಗ್ರಾಮ ಪಂಚಾಯತ್ ವ್ಯಾಪ್ತಿಯ ಮನೆ ನಿವೇಶನ ರಹಿತರ ಹೋರಾಟ ಸಮಿತಿ" ಹಾಗೂ ಕರ್ನಾಟಕ ಪ್ರಾಂತ ಕೃಷಿ ಕೂಲಿಕಾರರ ಸಂಘ ಕುಂದಾಪುರ ತಾಲೂಕು ಸಮಿತಿಗಳ ನೇತೃತ್ವದಲ್ಲಿ ಮನೆ ನಿವೇಶನ ರಹಿತರ ಅರ್ಜಿಗಳನ್ನು ಸಾಮೂಹಿಕವಾಗಿ ಶಿರೂರು ಗ್ರಾಮ ಪಂಚಾಯತ್ ಕಛೇರಿಗೆ ಸಲ್ಲಿಸುವ ಮನೆ ನಿವೇಶನ ಸ್ಥಳದ ಹಕ್ಕು ಪತ್ರ ಮಂಜೂರಾತಿಗಾಗಿ ಹೋರಾಟ ಚಳವಳಿಯನ್ನು ಹಮ್ಮಿಕೊಂಡಿತ್ತು.

ಶಿರೂರು ಗ್ರಾಮ ಪಂಚಾಯತ್ ವ್ಯಾಪ್ತಿಯ ನಿವೇಶನ ರಹಿತರ ಹೋರಾಟ ಸಮಿತಿ ಮತ್ತು ಕರ್ನಾಟಕ ಪ್ರಾಂತ ಕೃಷಿ ಕೂಲಿಕಾರರ ಸಂಘ ಕುಂದಾಪುರ ತಾಲೂಕು ಸಮಿತಿಗಳ ನೇತೃತ್ವದಲ್ಲಿ ಶಿರೂರು ಗ್ರಾಮ ಪಂಚಾಯತ್ ವ್ಯಾಪ್ತಿಯ ಬಡನಿವೇಶನ ರಹಿತರಿಂದ ಸ್ವೀಕರಿಸಿದ ಅರ್ಜಿಗಳನ್ನು ನಿವೇಶನ ಸ್ಥಳ ಮಂಜೂರು ಮಾಡಲು ಒತ್ತಾಯಿಸಿ ಸೆಪ್ಟೆಂಬರ್ 7ರಂದು ಶಿರೂರು ಪಂಚಾಯತ್ ಕಛೇರಿಗೆ ಮುತ್ತಿಗೆ ಹೋರಾಟ ಮಾಡಲಾಯಿತು.

ಸಿಪಿಐ(ಎಂ) ಉಡುಪಿ ಜಿಲ್ಲಾ ಸಮಿತಿ ಕಾರ್ಯದರ್ಶಿ ಬಾಲಕೃಷ್ಣ ಶೆಟ್ಟಿ ಸಿಐಟಿಯು ಉಡುಪಿ ಜಿಲ್ಲಾ ಪ್ರಧಾನ ಕಾರ್ಯದರ್ಶಿ ಶ್ರೀ ಕೆ. ಶಂಕರ್ ಮುಖಂಡರಾದ ಸುರೇಶ ಕಲ್ಲಗರ, ಹೆಚ್. ನರಸಿಂಹ, ಯು. ದಾಸಭಂಡಾರಿ, ಮಹಾಬಲ ವಡೇರಹೋಬಳಿ ಮೊದಲಾದವರು ನಿವೇಶನ ರಹಿತರ ಹೋರಾಟಕ್ಕೆ ಬೆಂಬಲ ಸೂಚಿಸಿ ಪ್ರತಿಭಟನಾ ಸಭೆಯಲ್ಲಿ ಮಾತನಾಡಿದರು.

ವೆಂಕಟೇಶ್ ಕೋಣಿ

ಮೆಸ್ಕಾಂ ಗುತ್ತಿಗೆ ಕಾರ್ಮಿಕರನ್ನು ಖಾಯಂಗೊಳಿಸಲು ಆಗ್ರಹಿಸಿ ಮಂಗಳೂರಿನಲ್ಲಿ ಧರಣಿ ಸತ್ಯಾಗ್ರಹ:

ಮಂಗಳೂರು, ಉಡುಪಿ, ಶಿವಮೊಗ್ಗ, ಚಿಕ್ಕಮಗಳೂರು ಜಿಲ್ಲೆಗಳಿಗೆ ಸಂಬಂಧಿಸಿದ ಮಂಗಳೂರು ವಲಯದ ಮೆಸ್ಕಾಂ, ಕರ್ನಾಟಕ ಪವರ್ ಕಂಪೆನಿ ಲಿ., ಕೆಪಿಟಿಸಿಎಲ್ ಸಂಸ್ಥೆಗಳ ಗುತ್ತಿಗೆ ಕಾರ್ಮಿಕರನ್ನು ಖಾಯಂಗೊಳಿಸಬೇಕು ಹಾಗೂ ಮತ್ತಿತರ ಬೇಡಿಕೆಗಳನ್ನು ಈಡೇರಿಸುವಂತೆ ಆಗ್ರಹಿಸಿ ಕರ್ನಾಟಕ ರಾಜ್ಯ ವಿದ್ಯುತ್ ನೌಕರರ ಫೆಡರೇಶನಿನ ಮಂಗಳೂರು ವಲಯದ 500ಕ್ಕೂ ಮೀರಿದ ಗುತ್ತಿಗೆ ಕಾರ್ಮಿಕರು ಸೆಪ್ಟೆಂಬರ್ 4 ರಂದು ಮಂಗಳೂರಿನ ಮೆಸ್ಕಾಂ ಕಚೇರಿಯ ಮುಂದೆ 24 ಗಂಟೆಗಳ ಧರಣಿ ಸತ್ಯಾಗ್ರಹವನ್ನು ನಡೆಸಿದರು.

ಸಿಐಟಿಯು ರಾಜ್ಯ ಸಮಿತಿಯ ಉಪಾಧ್ಯಕ್ಷರಾದ ವಸಂತ ಆಚಾರಿ ಪ್ರತಿಭಟನೆಯನ್ನು ಉದ್ಘಾಟಿಸಿ ಮಾತನಾಡಿದರು. ಧರಣಿ ಸತ್ಯಾಗ್ರಹಿಗಳನ್ನು ಉದ್ದೇಶಿಸಿ ಕರ್ನಾಟಕ ರಾಜ್ಯ ವಿದ್ಯುತ್ ನೌಕರರ ಫೆಡರೇಶನಿನ ಪ್ರಧಾನ ಕಾರ್ಯದರ್ಶಿ ಎಸ್.ಎಂ.ಶಿವಕುಮಾರ್, ಸಿಐಟಿಯು ಮುಖಂಡರಾದ ಜೆ.ಬಾಲಕೃಷ್ಣ ಶೆಟ್ಟಿ, ಸುನಿಲ್ ಕುಮಾರ್ ಬಜಾಲ್ ಮುಂತಾದವರು ಮಾತನಾಡಿದರು. ಫೆಡರೇಶನಿನ ಉಡುಪಿ ಜಿಲ್ಲಾ ಮುಖಂಡ ವೆಂಕಟೇಶ ಕುಂದಾಪುರ, ದ.ಕ.ಜಿಲ್ಲಾ ಮುಖಂಡ ಪ್ರಕಾಶ್ ಬೆಳ್ತಂಗಡಿ, ಚಿಕ್ಕಮಗಳೂರು ಜಿಲ್ಲಾ ಮುಖಂಡ ಮಿಥುನ್, ಶಿವಮೊಗ್ಗ ಜಿಲ್ಲಾ ಮುಖಂಡ ಬಸವಯ್ಯ, ಕೆಪಿಸಿಎಲ್ ನೌಕರ ಸಂಘಟನೆಯ ಜಾನ್ ಗೋನ್ಸಾಲ್ವಿಸ್, ಕೆಪಿಟಿಸಿಎಲ್ ನೌಕರರ ಸಂಘಟನೆಯ ವಿನಯ ನೆಲ್ಯಾಡಿ ಪ್ರತಿಭಟನೆಯ ನೇತೃತ್ವ ವಹಿಸಿದ್ದರು.

ಗುತ್ತಿಗೆ ನೌಕರರ ಬೇಡಿಕೆಗಳನ್ನು ಈಡೇರಿಸಲು ಶ್ರಮಿಸುವುದಾಗಿ ಉಸ್ತುವಾರಿ ಸಚಿವರು ಪ್ರತಿಭಟನಾಕಾರರಿಗೆ ಹೇಳಿ ಕಳುಹಿಸಿದರೂ ಪ್ರತಿಭಟನಾಕಾರರು ಮಿಸುಕಾಡಲಿಲ್ಲ. ಕೊನೆಗೆ ತಡರಾತ್ರಿಯಲ್ಲಿ ಮೆಸ್ಕಾಂ ಸಂಸ್ಥೆಯ ಮ್ಯಾನೇಜಿಂಗ್ ಡೈರೆಕ್ಟರ್ ಧರಣಿ ನಿರತರು ಕುಳಿತಿರುವಲ್ಲಿಗೆ ಬಂದು ಪ್ರತಿಭಟನಾಕಾರರ ಮನವಿಯನ್ನು ಸ್ವೀಕರಿಸಿದರು. ಈ ಮನವಿಯನ್ನು ಮೇಲಾಧಿಕಾರಿಗಳಿಗೆ ಸಲ್ಲಿಸಿ ಬೇಡಿಕೆ ಪರಿಹರಿಸಲು ಶೀಘ್ರ ಕ್ರಮಕೈಗೊಳ್ಳಲು ಶಿಫಾರಸು ಮಾಡುವುದಾಗಿ ಭರವಸೆ ನೀಡಿದ ಮೇರೆಗೆ ತಡರಾತ್ರಿ ಧರಣಿ ಸತ್ಯಾಗ್ರಹವನ್ನು ಕೊನೆಗೊಳಿಸಲಾಯಿತು.

ಮರಳು ಸಮಸ್ಯೆ ಪರಿಹಾರಕ್ಕೆ ಸುಳ್ಯದಲ್ಲಿ ಕಟ್ಟಡ ಕಾರ್ಮಿಕರ ಪ್ರತಿಭಟನೆ:

ಮರಳು ಸಮಸ್ಯೆ ಪರಿಹಾರಕ್ಕೆ ಆಗ್ರಹಿಸಿ ಮತ್ತು ಅವೈಜ್ಞಾನಿಕ ಹಾಗೂ ಕರಾಳ ಮರಳು ನೀತಿಯ ಹಿಂತೆ–ಗೆತಕ್ಕೆ ಆಗ್ರಹಿಸಿ, ಸುಳ್ಯದ ಸರ್ಕಾರಿ ಬಸ್ ನಿಲ್ದಾಣದ ಬಳಿ ಸೆಪ್ಟೆಂಬರ್ 5 ರಂದು ಕರ್ನಾಟಕ ರಾಜ್ಯ ಕಟ್ಟಡ ಮತ್ತು ನಿರ್ಮಾಣ ಕಾರ್ಮಿಕರ ಫೆಡರೇಶನ್ ವತಿಯಿಂದ ಪ್ರತಿಭಟನೆ ನಡೆಸಲಾಯಿತು.

ಸುಳ್ಯದ ಶಾಸ್ತ್ರಿ ವೃತ್ತದಿಂದ ಕಾರ್ಮಿಕರು ಪ್ರತಿಭಟನಾ ಮೆರವಣಿಗೆ ಹೊರಟು 5 ನಿಮಿಷ ಕಾಲ ಬಸ್ ನಿಲ್ದಾಣದ ಬಳಿ ರಸ್ತೆ ತಡೆ ಕಾರ್ಯಕ್ರಮ ಆಯೋಜಿಸಲಾಗಿತ್ತು. ಇದನ್ನು ಪೋಲೀಸ್ ಇಲಾಖೆಗೆ ತಿಳಿಸಿಯೂ ಆಗಿತ್ತು. ಬಸ್‌ಸ್ಟೇಂಡ್ ಮುಂಭಾಗದಲ್ಲಿ ಪ್ರತಿಭಟನಾಕಾರರು ರಸ್ತೆತಡೆಗೆ ಮುಂದಾದಾಗ, ಪೋಲೀಸರು ಬಂದು ಪ್ರಚೋದನೆ ಇಲ್ಲದೆ ಕಿರುಕುಳ ನೀಡಿದಾಗ ಪ್ರತಿಭಟನಾಕಾರರಿಗೂ ಪೋಲೀಸರಿಗೂ ವಾಗ್ವಾದ, ತಳ್ಳಾಟ ನಡೆಯಿತು. ಅರ್ಧಗಂಟೆಯ ಬಳಿಕ ಕಾರ್ಮಿಕ ನಾಯಕರ ಪ್ರಯತ್ನದಿಂದಲಾಗಿ ವಾತಾವರಣ ತಿಳಿಯಾಯಿತು.

ಫೆಡರೇಶನ್ನಿನ ಸುಳ್ಯ ಘಟಕದ ಅಧ್ಯಕ್ಷ ಕೆ.ಪಿ.ಜಾನಿ ಅವರು ಪೋಲೀಸರು ಕಾರ್ಮಿಕರ ಮೇಲೆ ನಡೆಸಿದ ಬಲಪ್ರಯೋಗವನ್ನು ಖಂಡಿಸಿದ್ದಾರೆ.

ಕಲಬುರ್ಗಿ ಹತ್ಯೆ ಮಾಡಿದವರನ್ನು ಬಂಧಿಸುತ್ತಿಲ್ಲ ಯಾಕೆ? ಉತ್ತರ ಕೊಡಿ



ಚಿಂತಕ, ಸತ್ಯಶೋಧ ವೈಚಾರಿಕ ನಾಡೋಜ ಡಾ. ಎಂ. ಎಂ. ಕಲ್ಬುರ್ಗಿಯವರ ನೆನಪಿನಲ್ಲಿ ಕಾರವಾರದಲ್ಲಿ ಚಿಂತನ ಉತ್ತರ ಕನ್ನಡ, ಚಿಂತನ ರಂಗ ಅಧ್ಯಯನ ಕೇಂದ್ರ, ಸಿಐಟಿಯು, ಎಸ್.ಎಫ್.ಐ ಮತ್ತು ಸಮಾನ ಮನಸ್ಕ ಸ್ನೇಹಿತರು ಸೇರಿದ್ದರು.

115 ಕ್ಕೂ ಹೆಚ್ಚು ಪುಸ್ತಕಗಳನ್ನು ಸಹಸ್ರಾರು ವಿಚಾರ ಪ್ರಚೋದಕ ಭಾಷಣಗಳನ್ನು ನೂರಾರು ಸಂಶೋಧನಾ ಪ್ರಬಂಧಗಳನ್ನು ಹಾಗೂ ಉತ್ತಮ ಸಂಶೋಧನಾ ವಿದ್ಯಾರ್ಥಿ ಸಮೂಹವನ್ನು ನಾಡಿಗೆ ಅರ್ಪಿಸಿದ ಡಾ. ಕಲಬುರ್ಗಿಯವರು ಧರ್ಮಾಂಧತೆ ಅಂಧಶ್ರದ್ಧೆ ಸಹಿಸುತ್ತಿರಲಿಲ್ಲ. ನಾಡಿನಾದ್ಯಂತ ಜಾಗೃತಿಗೆ ಮುಂದಾದ ಇವರು ಲಿಂಗಾಯತ ಸ್ವತಂತ್ರ ಧರ್ಮ ಎಂಬುದನ್ನು ಆಧಾರ ಸಹಿತ ಪ್ರತಿಪಾದಿಸಿದ್ದರು. ಸರ್ವಸಮಾನತೆ ಬಯಸುವವರಾಗಿದ್ದರಿಂದಲೇ ಅವರ ಹತ್ಯೆಯಾಯಿತು. ಆದರೆ ವೈಚಾರಿಕ ಪರಂಪರೆಯನ್ನು ಹತ್ಯೆ ಮಾಡಿ ನಾಪತ್ತೆಯಾದ ಹಂತಕರನ್ನು ಬಂಧಿಸುವಲ್ಲಿ ವಿಳಂಬ ಧೋರಣೆ ವಿದ್ವತ್ ವಲಯಕ್ಕೆ ಆಘಾತಕಾರಿ ಎಂದು ಡಾ. ಕಲಬುರ್ಗಿ ಯವರ ವಿದ್ಯಾರ್ಥಿ ಪ್ರೊ. ಶ್ರೀಧರ ನಾಯಕರು ಹತ್ಯೆಯನ್ನು ಖಂಡಿಸಿದರು. ಅವರೊಂದಿಗೆ ತನ್ನ ವಿದ್ಯಾರ್ಥಿ ಜೀವನದ ಮೆಲುಕು ಹಾಕಿದರು.

ಬಿ.ಎಸ್.ಎನ್.ಎಲ್. ಕಾರ್ಮಿಕ ಸಂಘಟನೆಯ ಕಾರ್ಯದರ್ಶಿ ಎಂ.ಎಂ. ಹೆಗಡೆ ಮಾತನಾಡಿ ಸಾಹಿತ್ಯ ಸಂಪತ್ತನ್ನು ಮಾತ್ರ ಹೊಂದಿದ ಇವರ ಖಚಿತ ವೈಚಾರಿಕತೆ ಇಂದಿನ ಅಗತ್ಯ ಎಂದರು. ಪ್ರಗತಿಪರ ಸಾಹಿತ್ಯ ಸಂಘಟಕ ರಾಮಾ ನಾಯ್ಕ ಹಂತಕರ ಬಂಧಿಸುವಲ್ಲಿ ಸರ್ಕಾರ ಸೋತಿದೆ, ಆ ಹತ್ಯಾಕೋರರು ಬಲವಾದ ಮುಷ್ಠಿಯಲ್ಲಿ ರಕ್ಷಿಸಲ್ಪಡುತ್ತಿದ್ದಾರೆ. ದೇಶದಲ್ಲಿ ಭಯೋತ್ಪಾದನೆ ಎಂದರೆ ಬೇರೆಡೆಗೆ ಬೊಟ್ಟು ಮಾಡಿ ತೋರಬೇಕಿಲ್ಲ. ಭಾರತದ ಅಂತರಂಗದೊಳಗೆ ಧಾರ್ಮಿಕ ಭಯೋತ್ಪಾದಕ ಜನರು ಇದ್ದಾರೆ. ಅಂದರೆ ನಾವೇನು ಪುಕ್ಕಲರಾಗಿ ಹೆದರಿ ಕೂತು ಧರ್ಮಾಂಧರಿಗೆ ಸೋಲುವುದಿಲ್ಲ ಎಂದರು.

ಸಿಐಟಿಯು ರಾಜ್ಯ ಕಾರ್ಯದರ್ಶಿ ಯಮುನಾ ಗಾಂವ್ಕರ್ ಮಾತನಾಡಿ ಸಾಹಿತ್ಯ ಮತ್ತು ಹೋರಾಟದ ದಾರಿಯ ಸಂಗಾತಿಗಳು ಡಾ. ಎಂ.ಎಂ. ಕಲಬುರ್ಗಿ, ದಾಬೋಲ್ಕರ್, ಫನ್ಸಾರೆಯವರು. ಆದರೆ ಸಂಚುರೂಪಿಸಿ ಹತ್ಯೆ ಮಾಡಿದವರನ್ನು ಬಂಧಿಸುತ್ತಿಲ್ಲ ಯಾಕೆ ಉತ್ತರ ಕೊಡಿ ಎಂದು ಸೌಮ್ಯ ಪ್ರತಿಭಟನೆ ನಮ್ಮದು. ಎಂದರು. •




















ಬಂಧುಗಳೆ,

ಗೌರಿ ಲಂಕೇಶ್ ಹತ್ಯೆ ವಿರೋಧಿಸಿ ರಾಜ್ಯಾದ್ಯಂತ, ದೇಶಾದ್ಯಂತ ದೊಡ್ಡ ದೊಡ್ಡ ಹೋರಾಟಗಳು ನಡೆದಿವೆ. ಪ್ರಪಂಚದಾದ್ಯಂತ ಅವರ ಹತ್ಯೆಗೆ ಹಲವು ಮನಗಳು ಮಿಡಿದಿವೆ. ನೀವು ಕೂಡ ಪ್ರತಿಭಟನೆ/ಖಂಡನೆ ವ್ಯಕ್ತಪಡಿಸಿದ್ದೀರಿ.

ಇದೇ ಆಶಯದೊಂದಿಗೆ ಸೆಪ್ಟೆಂಬರ್ 12ರ ಮಂಗಳವಾರದಂದು ಬೆಂಗಳೂರಿನಲ್ಲಿ ಪ್ರಜಾತಂತ್ರ ಪ್ರೇಮಿಗಳ ಬೃಹತ್ ಸಮಾವೇಶ ನಡೆಯಲಿದೆ.

1. ಗೌರಿ ಲಂಕೇಶ್ ಹತ್ಯೆಯ ತನಿಖೆಗಾಗಿ ರಚನೆಯಾಗಿರುವ ವಿಶೇಷ ತನಿಖಾ ದಳ ವೇಗವಾಗಿ ಕಾರ್ಯಪ್ರವೃತ್ತವಾಗಬೇಕು ಮತ್ತು ಅಪರಾಧಿಗಳನ್ನು ಬಂಧಿಸಬೇಕೆಂದು ಆಗ್ರಹಿಸಲು;

2. ದೇಶಾದ್ಯಂತ ವೈಚಾರಿಕತೆಯ ಮೇಲೆ ದಾಳಿ ಮಾಡುವ ಹತ್ಯಾ ಸಂಸ್ಕೃತಿಯನ್ನು ಬೆಳೆಸುತ್ತಿರುವ ಆರೆಸ್ಎಸ್ ಮತ್ತು ಸಂಘಪರಿವಾರದ ಜೀವವಿರೋಧಿ ಕೃತ್ಯಗಳನ್ನು ಕೇಂದ್ರ ಸರ್ಕಾರ ಪ್ರತಿಬಂಧಿಸಬೇಕೆಂದು ಒತ್ತಾಯಿಸಲು;

3. ಗೌರಿ ಲಂಕೇಶ್ ತನ್ನ ಸಾಮಾಜಿಕ ಜೀವನದುದ್ದಕ್ಕೂ ಕನಸಿದ, ಜಾಲತಾಣದ ತನ್ನ ಕೊನೆಯ ಹೇಳಿಕೆಯಲ್ಲಿ ಆಶಿಸಿದ ಎಲ್ಲಾ ಜೀವಪರ, ಜನಪರ ಶಕ್ತಿಗಳ ಐಕ್ಯತೆಯನ್ನು ದಾಖಲಿಸಲು ಈ ಸಮಾವೇಶ ನಡೆಯುತ್ತಿದೆ.

ಹಾಗಾಗಿ ಸೆಪ್ಟೆಂಬರ್ 12 ರಂದು ಬೆಂಗಳೂರಿನಲ್ಲಿ ನಡೆಯುತ್ತಿರುವ 'ಖಂಡನೆ, ಪ್ರತಿರೋಧದ ಸಮಾವೇಶ'ದಲ್ಲಿ ನಿಮ್ಮ ದನಿಯೂ ಸೇರಲಿ; ನಿಮ್ಮ ಹೆಜ್ಜೆಯೂ ಮೂಡಲಿ!

–'ನಾನೂ ಗೌರಿ'

ಗೌರಿ ಲಂಕೇಶ್ ಹತ್ಯೆ ವಿರೋಧಿ ಹೋರಾಟ ವೇದಿಕೆ.

ಪ್ರತಿರೋಧ ಸಮಾವೇಶ.

ಸೆ.12ರ ಮಂಗಳವಾರ, ಸೆಂಟ್ರಲ್ ಕಾಲೇಜು ಆಟದ ಮೈದಾನ, ಕಾಳಿದಾಸ ರಸ್ತೆ, ಫ್ರೀಡಂ ಪಾರ್ಕ್ ಹಿಂಭಾಗ, ಬೆಂಗಳೂರು.

ದಯವಿಟ್ಟು ಬನ್ನಿ. ಇತರರಿಗೂ ತಿಳಿಸಿ.

#IAmGauri





KEA ಮುಂದೆ SFI ಪ್ರತಿಭಟನೆ

ಕರ್ನಾಟಕ ಪರೀಕ್ಷಾ ಪ್ರಾಧಿಕಾರದ ತಪ್ಪು ನಿರ್ಧಾರದಿಂದಾಗಿ "ಸಿಕ್ಕ ವೈದ್ಯಕೀಯ ಸೀಟುಗಳನ್ನು" ಕಳೆದುಕೊಳ್ಳುವಂತಹ ಪರಿಸ್ಥಿತಿ ನಿರ್ಮಾಣ ಮಾಡಿರುವುದರ ವಿರುದ್ಧ ಭಾರತ ವಿದ್ಯಾರ್ಥಿ ಫೆಡರೇಷನ್ (SFI) ಕರ್ನಾಟಕ ರಾಜ್ಯ ಸಮಿತಿಯು ಇಂದು KEA ಮುಂದೆ ಪ್ರತಿಭಟನೆ ನಡೆಸಿತು.

ಪ್ರತಿಭಟನೆ ಉದ್ದೇಶಿಸಿ SFI ರಾಜ್ಯಕಾರ್ಯದರ್ಶಿ ಗುರುರಾಜ ದೇಸಾಯಿ ಮಾತನಾಡಿ "ಕೊನೆ ಕ್ಷಣದಲ್ಲಿ ವೈದ್ಯ ಮತ್ತು ದಂತ ವೈದ್ಯ ಕೋರ್ಸ್ನ ಸೀಟುಗಳನ್ನು ಪ್ರಕಟಿಸುವ ಸಂಪ್ರದಾಯವನ್ನು ಕರ್ನಾಟಕ ಪರೀಕ್ಷಾ ಪ್ರಾಧಿಕಾರ ಈ ವರ್ಷವೂ ಮುಂದುವರಿಸಿದೆ. ಸಾಲು ಸಾಲು ರಜೆಗಳೂ ಆಗಮಿಸಿದ್ದರಿಂದ ಸಹಸ್ರಾರು ವಿದ್ಯಾರ್ಥಿಗಳು ಸಕಾಲದಲ್ಲಿ ಶುಲ್ಕ ಪಾವತಿಸಿ, ಡಿಡಿ ಪಡೆಯಲಾಗದೆ ತೀವ್ರ ತೊಂದರೆ ಅನುಭವಿಸುವಂತಾಗಿದೆ.

ಆ.22 ರಂದು ತಡರಾತ್ರಿ ಉಳಿಕೆ ಸೀಟುಗಳ ಸಂಖ್ಯೆಯನ್ನು ಪ್ರಕಟಿಸಿದ ಕೆಇಎ, ಆ.26 ರಿಂದ 28 ರವರೆಗೆ ಈ ಸೀಟುಗಳಿಗೆ ಆಫ್ ಲೈನ್ ಮೂಲಕ ಪ್ರವೇಶಾವಕಾಶ ಕಲ್ಪಿಸಲಾಗುವುದು ಎಂದು ಪ್ರಕಟಣೆ



ನೀಡಿತ್ತು. ಶುಕ್ರವಾರದಿಂದ ಭಾನುವಾರದವರೆಗೆ ರಜೆ ಇದ್ದಿದ್ದರಿಂದ ವಿದ್ಯಾರ್ಥಿಗಳಿಗೆ ಪ್ರವೇಶಕ್ಕೆ ಡಿಡಿ ತರಲು ಸಮಯಾವಕಾಶ ಇರಲಿಲ್ಲ. ಹೀಗಾಗಿ ವಿದ್ಯಾರ್ಥಿ ಮತ್ತು ಪೋಷಕರು ಪರದಾಡುವಂತಾಗಿತ್ತು. ಅದರಲ್ಲೂ ಕೆಇಎ ವೆಬ್ ಸೈಟ್ ನೋಡಲು ಅವಕಾಶವಾಗದ ಗ್ರಾಮೀಣ ಭಾಗದ ವಿದ್ಯಾರ್ಥಿಗಳೂ ಪರದಾಡುವಂತಾಯಿತು.

ಮತ್ತೊಂದೆಡೆ ಆ.26 ರಂದು ಎಂದಿನಂತೆ ಕೌನ್ಸೆಲಿಂಗಿಗೆ ಬಂದ ವಿದ್ಯಾರ್ಥಿಗಳಿಗೆ 'ಡಿಡಿ ಇದ್ದರೆ ಮಾತ್ರ ಕೌನ್ಸೆಲಿಂಗ್ಗೆ ಪ್ರವೇಶ' ಎಂದ ಕೂಡಲೇ ಆತಂಕಕ್ಕೆ ಒಳಗಾದರು. ಪ್ರತಿ ವರ್ಷವೂ ಕೊನೇ ಗಳಿಗೆಯಲ್ಲಿ ಉಳಿಕೆ ಸೀಟುಗಳನ್ನು ಪ್ರಕಟಿಸಿ ಅವಾಂತರ ಸೃಷ್ಟಿಸುವುದೇ ರಾಜ್ಯ ಸರಕಾರದ ಜಾಯಮಾನವಾಗಿದೆ. ಕನಿಷ್ಟ ಚೆಕ್ನ್ನಾದರೂ ಪಡೆದಿದ್ದರೆ ವಿದ್ಯಾರ್ಥಿಗಳಿಗೆ ಸೀಟು ಸಿಗುತ್ತಿತ್ತು. ಕೇರಳ ಸರಕಾರ ರಜೆ ಇದ್ದ ಕಾರಣ ದಿನಾಂಕವನ್ನು ವಿಸ್ತರಿಸಿತ್ತು. ಕರ್ನಾಟಕ ರಾಜ್ಯ ಸರಕಾರ ಈ ಮಾದರಿಯನ್ನು ಅನುಸರಿಸದಿರುವುದು ವಿದ್ಯಾರ್ಥಿಗಳಿಗೆ ಎಸಗಿದ ದ್ರೋಹವಾಗಿದೆ ಎಂದರು.

ಪೋಷಕರ ಸಂಘಟನೆಯ ಅಧ್ಯಕ್ಷರಾದ ನರಸಿಂಹ ಮೂರ್ತಿ ಮಾತನಾಡಿ "ಪ್ರವೇಶಕ್ಕೆ ಇನ್ನೂ ಕಾಲಾವಕಾಶವಿದ್ದರೂ ಕರ್ನಾಟಕ ಪರೀಕ್ಷಾ ಪ್ರಾಧಿಕಾರವು ರಜಾ ದಿನಗಳಲ್ಲೇ ಯಾಕೆ ಪ್ರಕಟಣೆ ಹೊರಡಿಸಬೇಕು? ಇದರ ಹಿಂದಿರುವ ಉದ್ದೇಶವೇನು ಎಂಬ ಪ್ರಶ್ನೆಯೂ ಉದ್ಭವಿಸಿದೆ.

ಡಿಡಿಯಿಲ್ಲದೆ ಸಾವಿರಾರು ಸೀಟುಗಳು ಖಾಲಿ ಉಳಿಯುತ್ತವೆ. ಖಾಲಿ ಸೀಟುಗಳಿಗೆ ವಿದ್ಯಾರ್ಥಿಗಳು ಆಗಮಿಸಿಲ್ಲ ಎಂದು ಕೆಇಎ ನಮೂದಿಸಿ, ಖಾಲಿ ಸೀಟುಗಳನ್ನು ಖಾಸಗಿ ಸೀಟುಗಳಾಗಿ ಪರಿವರ್ತಿಸಲಾಗುತ್ತಿದೆ ಎಂಬ ಆರೋಪ ಪ್ರತಿವರ್ಷ ಕೇಳಿಬರುತ್ತಿದೆ. ಇದರಿಂದ ಬಡ ಹಾಗೂ ಮಧ್ಯಮ ವರ್ಗದ ವಿದ್ಯಾರ್ಥಿಗಳಿಗೆ ಅನ್ಯಾಯ ಮಾಡಿದಂತಾಗಿದೆ. ಸಿಕ್ಕ ಸೀಟುಗಳನ್ನು ಕ್ಯಾನ್ಸಲ್ ಮಾಡಿರುವುದು ಸರಿಯಲ್ಲ. ಹಾಗಾಗಿ ಸೀಟು ಸಿಕ್ಕ ವಿದ್ಯಾರ್ಥಿಗಳಿಗೆ ಸೀಟು ಹಂಚಿಕೆಯನ್ನು ಮಾಡಬೇಕು ಎಂದರು.

ಮನವಿ ಸ್ವೀಕರಿಸಿ ಮಾತನಾಡಿದ KEA ಆಡಳಿತಾಧಿಕಾರಿ ಗಂಗಾಧರಯ್ಯನವರು "ಸರಕಾರದ ಗಮನಕ್ಕೆ ತಂದು ಸಂಜೆಯೊಳಗಾಗಿ ಸಮಸ್ಯೆ ಬಗೆ ಹರಿಸುವುದಾಗಿ ಹೇಳಿದರು.

ಪ್ರತಿಭಟನೆಯಲ್ಲಿ ಮುಖಂಡರಾದ ವೇಗಾನಂದ, ಹನಮಂತ ದುರ್ಗದ್, ಶೃತಿ ನೆಲವಾಕನಹಳ್ಳಿ, ಶಿವಕುಮಾರ, ಸಾಗರ ಇದ್ದರು.



ತುಮಕೂರಿನಲ್ಲಿ ಕಟ್ಟಡ ಕಾರ್ಮಿಕರ ಬೈಕ್ ಜಾಥ

ಕರ್ನಾಟಕ ರಾಜ್ಯ ಕಟ್ಟಡ ಮತ್ತು ಇತರೆ ನಿರ್ಮಾಣ ಕಾರ್ಮಿಕರ ಫೆಡರೇಷನ್ (ರಿ,) ಸಿಐಟಿಯು ಜಿಲ್ಲಾ ಸಮಿತಿ ಹಾಗೂ ತುಮಕೂರು ನಗರದ ಪೂರ್ವ, ಪಶ್ಚಿಮ, ಉತ್ತರ, ದಕ್ಷಿಣ ಘಟಕಗಳ ವತಿಯಿಂದ ನಗರ ವ್ಯಾಪ್ತಿಯಲ್ಲಿ ಬೈಕ್ ಜಾಥ ನಡೆಸಲಾಯಿತು. ಜಾಥ ಪ್ರಾರಂಭದಲ್ಲಿ ಪತ್ರಕರ್ತೆ ಹಾಗೂ ಸಮಾಜಮುಖಿ ಬರಹಗಾರ್ತಿ ಗೌರಿ ಲಂಕೇಶ್‌ರವರ ಹತ್ಯೆಗೆ ಖಂಡಿಸಿ ಶ್ರದ್ಧಾಂಜಲಿ ಸಲ್ಲಿಸಲಾಯಿತು.

ಜಾಥವನ್ನು ಉದ್ಘಾಟಿಸಿ ಮಾತನಾಡಿದ ಸಂಘಟನೆಯ ರಾಜ್ಯ ಪ್ರಧಾನ ಕಾರ್ಯದರ್ಶಿ ಕೆ. ಮಹಾಂತೇಶ್‌ರವರು ಕಟ್ಟಡ ಕಾರ್ಮಿಕರು ನಿರಂತರ ಹೋರಾಟದಿಂದ ರಾಜ್ಯದಲ್ಲಿ ಸೌಲಭ್ಯಗಳು ಜಾರಿಯಾಗುತ್ತಿದ್ದು ಇವುಗಳನ್ನು ಪಡೆಯಲು ಕಾರ್ಮಿಕರು ಸಂಘಟನೆಯ ವ್ಯಾಪ್ತಿಗೆ ಬರಬೇಕಿದೆ. ಕಟ್ಟಡ ಕಾರ್ಮಿಕರನ್ನು ಸಂಘಟಿಸಿ ಅವರ ಭದ್ರತೆಗಾಗಿ ಶ್ರಮಿಸುವುದು ಇಂದಿನ ತುರ್ತು ಕಾರ್ಯಕ್ರಮವಾಗಿದೆ. ಅದರ ಭಾಗವಾಗಿ ತುಮಕೂರು ನಗರ ವ್ಯಾಪ್ತಿಯಲ್ಲಿ ಜಾಥದ ಮೂಲಕ ಅವರಿಗೆ ಸಂಘಟನಾ ಅರಿವನ್ನು ಮೂಡಿಸುವುದು ಮತ್ತು ಮಂಡಳಿಯ ಸೌಲಭ್ಯಗಳನ್ನು ವಿಳಂಬವಿಲ್ಲದೆ ಜಾರಿಯಾಗುವಂತೆ ಒತ್ತಾಯಿಸುವ ಭಾಗವಾಗಿ ಈ ಬೈಕ್ ಜಾಥ ನಡೆಯುತ್ತಿದೆ.

ಕಲ್ಯಾಣ ಮಂಡಳಿಯಲ್ಲಿ ಶೇಕರಣೆಗೊಂಡಿರುವ ಸೆಸ್ ಹಣವನ್ನು ಹಾಲಿ ಇರುವ 12 ಸೌಲಭ್ಯಗಳಿಗೆ ಮಾತ್ರ ವಿನಿಯೋಗಿಸುವಂತೆ, ಯಾವುದೇ ಕಾರಣಕ್ಕೂ ಸೆಸ್ ಹಣವನ್ನು ರಾಜ್ಯ ಸರ್ಕಾರ ವ್ಯಾಪ್ತಿಯ ಸಹಕಾರಿ ಬ್ಯಾಂಕ್‌ಗಳಲ್ಲಿ ಠೇವಣಿ ಇಡದಂತೆ ಸರ್ವೋಚ್ಚ ನ್ಯಾಯಾಲಯದ ಮಾರ್ಗದರ್ಶನದಂತೆ ನಡೆಯಬೇಕು. ಅಗತ್ಯ ಸಿಬ್ಬಂದಿ ನೇಮಕ, ಮಾಸಿಕ ಪಿಂಚಣಿ 3 ಸಾವಿರ ನೀಡುವಂತೆ ಒತ್ತಾಯಿಸಿ ಸೆಪ್ಟೆಂಬರ್ 14 ರಂದು ಕಟ್ಟಡ ಕಾರ್ಮಿಕರಿಂದ ಬೆಂಗಳೂರಿಗೆ ಮಹಾನಡಿಗೆ ಕಾರ್ಯಕ್ರಮವನ್ನು ಹಮ್ಮಿಕೊಳ್ಳಲಾಗಿದೆ ಎಂದರು.

ಸಂಘದ ಜಿಲ್ಲಾಧ್ಯಕ್ಷ ಬಿ. ಉಮೇಶ್ ಮಾತನಾಡಿ ಕಟ್ಟಡ ಕಾರ್ಮಿಕರು ಶ್ರಮವಹಿಸಿ ದುಡಿಯುವ ಜೊತೆಗೆ ಸಂಘಟನೆಗಳ ಜೊತೆ ಸೇರಿ ಕಲ್ಯಾಣ ಮಂಡಳಿಯ ಗುರುತು ಚೀಟಿ ಪಡೆದು ಕಲ್ಯಾಣ ಮಂಡಳಿಯಿಂದ ದೊರೆಯುವ ವೈದ್ಯಕೀಯ, ಶೈಕ್ಷಣಿಕ ಸೇರಿದಂತೆ ಇತರೆ ಸೌಲಭ್ಯಗಳನ್ನು ಪಡೆಯುವ ಮೂಲಕ ಕುಟುಂಬ ಭದ್ರತೆಯನ್ನು ಪಡೆಯಬೇಕು ಈ ಜಾಥದ ಮಹತ್ವವನ್ನು ಕಟ್ಟಡ ಕಾರ್ಮಿಕರಲ್ಲಿ ತಿಳಿಸಲು ಎಲ್ಲಾ ಕಾರ್ಮಿಕ ಮುಖಂಡರು ಶ್ರಮಿಸಬೇಕು ಎಂದರು

ಜಾಥವು ತುಮಕೂರು ನಗರದ ಕುಣಿಗಲ್ ರಸ್ತೆ, ರಾಜೀವ್‌ಗಾಂಧಿ ಬಡಾವಣೆ, ಪ್ರಗತಿ ಬಡಾವಣೆ, ಗೆದ್ದಲಹಳ್ಳಿ, ಜಯನಗರ, ಮಂಜುನಾಥನಗರ, ಮೈದಾಳ ರಸ್ತೆ, ಎಸ್‌ಎಲ್‌ಎನ್‌ನಗರ, ಗಿರಿನಗರ, ಕ್ಯಾತ್ಸಂದ್ರ, ಬಂಡೆಪಾಳ್ಯ, ಮಾರನಾಯಕನಪಾಳ್ಯ, ಕುಂದೂರು ಸೇರಿದಂತೆ ಮುಂತಾದ ಪ್ರದೇಶಗಳಲ್ಲಿ ಸಂಚರಿಸಿತು.

ಜಾಥದ ನೇತೃತ್ವವನ್ನು ಜಿಲ್ಲಾ ಕಾರ್ಯದರ್ಶಿ ಶ್ರೀಧರ್, ಖಜಾಂಚಿ ರಾಮಚಂದ್ರ, ಮುಖಂಡರುಗಳಾದ ರಾಮಣ್ಣ, ಚನ್ನಕೇಶವ, ಶಂಕರಪ್ಪ, ಮಂಜುನಾಥ್, ಟಿ.ಹೆಚ್.ರಾಮು, ಕಂಠಯ್ಯ, ಸ್ವಾಮಿ, ನಾಗರಾಜು, ಖಲೀಲ್ ಅಹಮದ್ ಮುಂತಾದವರು ನೇತೃತ್ವವಹಿಸಿದ್ದರು.

ಕಲಬುರ್ಗಿ ಹಂತಕರನ್ನು ಬಂಧಿಸಲು ಒತ್ತಾಯಿಸಿ ಬೆಂಗಳೂರಿನಲ್ಲಿ ಪ್ರತಿಭಟನೆ

ವಿಚಾರವಾದಿ, ಚಿಂತಕ ಎಂ.ಎಂ ಕಲಬುರ್ಗಿ ಹತ್ಯೆಯಾಗಿ ಎರಡು ವರ್ಷ ಕಳೆದರು ಇನ್ನು ಹಂತಕರನ್ನು ಬಂಧಿಸದಿರುವುದು ಖಂಡನೀಯ, ವೈಚಾರಿಕ ಸತ್ಯ ಹೇಳುವವರ ಮೇಲೆ ಇಂತಹ ಧಾಳಿಗಳು ಹೆಚ್ಚಾಗುತ್ತಲೆ ಇವೆ. ಸರಕಾರ ತನಿಖೆ ಪ್ರಗತಿಯಲ್ಲಿದೆ ಎಂದು ಹೇಳುತ್ತಿದೆಯೇ ಹೊರತು ಅನುಮಾನ ವಿರುವವರನ್ನು ಬಂಧಿಸಿ ಅವರನ್ನು ವಿಚಾರಿಸುವ ಪ್ರಯತ್ನ ಮಾಡುತ್ತಿಲ್ಲವೆಂದು ಮಾಜಿ ಸಚಿವರು, ಹಿರಿಯ ಸಾಹಿತಿಗಳಾದ ಬಿ.ಟಿ.ಲಲಿತಾನಾಯಕ್ ರವರು ಹೇಳಿದರು.

ಎಸ್.ಎಫ್.ಐ, ಡಿ.ವೈ.ಎಫ್.ಐ, ಜೆ.ಎಮ್.ಎಸ್, ಡಿ.ಎಸ್.ಎಫ್. ಡಿ.ಎಚ್.ಎಸ್, ಬಿ.ಜಿ.ವಿ.ಎಸ್. ಕರ್ನಾಟಕ ಲೇಖಕೀಯರ ಸಂಘ, ಸಮುದಾಯ ಫ್ರೀಥಿಂಕರ್ಸ್ ಸಂಘಟನೆಗಳು ಸೇರಿ ಬೆಂಗಳೂರಿನ ಟೌನ್ ಹಾಲ್ ಮುಂಭಾಗದಲ್ಲಿ ಹಮ್ಮಿಕೊಂಡಿದ್ದ ಪ್ರತಿಭಟನೆಯಲ್ಲಿ ಭಾಗವಹಿಸಿ ಮಾತನಾಡಿದರು. ಪ್ರತಿಭಟನೆಯಲ್ಲಿ ಸಾಹಿತಿಗಳಾದ ಯೋಗೇಶ್ ಮಾಸ್ಟರ್, ಲೇಖಕಿಯರ ಸಂಘದ ಅಧ್ಯಕ್ಷರಾದ ವಸುಂಧರಾ ಭೂಪತಿ, ಚಿಂತಕರಾದ ಮಹಮ್ಮದ್ ಖುರೇಶಿ, ಎಸ್.ವೈ ಗುರುಶಾಂತ, ಪುರುಷೋತ್ತಮ ದಾಸ್, ಸುರೇಂದ್ರ ರಾವ್ ನರಸಿಂಹ ಮೂರ್ತಿ ಗೌರಮ್ಮ ಮಾತನಾಡಿದರು. ಪ್ರತಿಭಟನೆಯಲ್ಲಿ ಸಂಘಟನೆಯ ಮುಖಂಡರಾದ ವಿ.ಅಂಬರೀಶ್, ಗುರುರಾಜ್, ಬಸವರಾಜ ಪೂಜಾರ್, ಪುರುಷೋತ್ತಮ ಕಲಾಲ್ ಬಂಡಿ, ಪಂಡಿತರಾಧ್ಯ ಸೇರಿದಂತೆ ಅನೇಕರಿದ್ದರು.

ವಿಜಯಪುರ ಜಿಲ್ಲಾ ಪಂಚಾಯಿತಿ ಚಲೋ

ಕರ್ನಾಟಕ ರಾಜ್ಯ ಗ್ರಾಮ ಪಂಚಾಯತ್ ನೌಕರರ ಸಂಘ (ಸಿಐಟಿಯು) ಸಂಯೋಜಿತ ವಿಜಯಪುರ ಜಿಲ್ಲಾ ಸಮಿತಿಯಿಂದ ರಾಜ್ಯ ಸಮಿತಿ ಕರೆಯಮೇರೆಗೆ ಜಿಲ್ಲಾ ಪಂಚಾಯಿತಿ ಚಲೋ ಕಾರ್ಯಕ್ರಮವನ್ನು ಜಿಲ್ಲಾ ಪಂಚಾಯತ ಮಹಾದ್ವಾರದಿಂದ ಜಿಲ್ಲಾ ಪಂಚಾಯಿತಿ ವರೆಗೆ ಮೆರವಣಿಗೆ ಮೂಲಕ ತೆರಳಿ ಜಿಲ್ಲಾ ಪಂಚಾಯತ ಸಹಾಯಕ ಕಾರ್ಯದರ್ಶಿ ಎ.ಬಿ. ಅಲ್ಲಾಪೂರ ಇವರ ಮೂಲಕ ಪ್ರಧಾನ ಕಾರ್ಯದರ್ಶಿ ಆರ್.ಡಿ.ಪಿ.ಆರ್. ಬೆಂಗಳೂರು ಇವರಿಗೆ ಮನವಿ ಸಲ್ಲಿಸಲಾಯಿತು.

ಈ ಸಂದರ್ಭದಲ್ಲಿ ಸಿಐಟಿಯು ಜಿಲ್ಲಾ ಪ್ರಧಾನ ಕಾರ್ಯದರ್ಶಿ ಲಕ್ಷ್ಮಣ ಹಂದ್ರಾಳ ಮಾತನಾಡಿ, ಗ್ರಾಮ ಪಂಚಾಯಿತಿಗಳಲ್ಲಿ ಕೆಲಸ ನಿರ್ವಹಿಸುತ್ತಿರುವ ಎಲ್ಲಾ ನೌಕರರಿಗೆ ಇ-ಎಫ್‌ಎಮ್‌ಎಸ್ ಮೂಲಕ ವೇತನ ಗ್ರಾಮ ಪಂಚಾಯತಿಯಲ್ಲಿ ದುಡಿಯುತ್ತಿರುವ ಕಾರ್ಮಿಕರಿಗೆ ಕನಿಷ್ಠ ಕೂಲಿ ಜಾರಿ ಮಾಡುತ್ತಿಲ್ಲ ಇದು ದುರಾದೃಷ್ಟಕರ ಎಂದು ಆಕ್ರೋಶ ವ್ಯಕ್ತ ಪಡಿಸಿದರು.

ಈ ಸಂದರ್ಭದಲ್ಲಿ ಗ್ರಾ ಪಂ ನೌಕರರ ಜಿಲ್ಲಾ ಮುಖಂಡರಾದ ಸಂಗು ನಾಲ್ಕಮಾನ ಮಾತನಾಡಿ, ಕ್ಲಾರ್ಕ ಬಿಲ್ ಕಲೆಕ್ಟರುಗಳ ಬಡ್ತಿಯ ಶೈಕ್ಷಣಿಕ ಅರ್ಹತೆಯನ್ನು ಎಸ್.ಎಸ್.ಎಲ್.ಸಿ. ಬದಲು ಪಿಯುಸಿ ಎಂದು ಪರಿಗಣಿಸಿ ನೋಟಿಫಿಕೇಷನ್ ಹೊರಡಿಸಲಾಗಿದೆ. ಇದು ಅನವಶ್ಯಕವಾಗಿತ್ತು. ಇದರಿಂದ ರಾಜ್ಯಾದ್ಯಂತ ಎಸ್.ಎಸ್.ಎಲ್.ಸಿ. ಆಗಿರುವ ಸುಮಾರು 4000 ನೌಕರರು ಬಡ್ತಿ ತಡೆ ಹಿಡಿಯಲ್ಪಟ್ಟಿದೆ. ಇದರಿಂದ ತುಂಬಾ ತುಂಬಾ ತೊಂದರೆಯಾಗುವ ಸಂಭವವಿದೆ ಎಂದರು. ಕ್ಲರ್ಕ್/ಬಿಲ್ ಕಲೆಕ್ಟರ್‌ಗೆ 13187.60 ರೂ. ವಾಟರ್



ಪಾವತಿ ಮಾಡಬೇಕು. ಅನುಮೋದನೆಯಾಗದಿರುವ ಎಲ್ಲಾ ನೌಕರರನ್ನು ಅನುಮೊದನೆ ಮಾಡಬೇಕು. ಕ್ಲಾರ್ಕ ಬಿಲ್ ಕಲೆಕ್ಟರುಗಳ ಬಡ್ತಿಯಲ್ಲಿ ಮೊದಲಿನಂತೆ ಎಸ್‌ಎಸ್‌ಎಲ್‌ಸಿಯನ್ನು ಪರಿಗಣಿಸಬೇಕೆಂದು ಒತ್ತಾಯಿಸಿದರು. ಗ್ರಾಮ ಪಂಚಾಯತ ನೌಕರರಿಗೆ ಇಎಫ್‌ಎಮ್‌ಎಸ್ ಮೂಲಕ ವೇತನ ಪಾವತಿಯ ನಿರ್ಧಾರವನ್ನು ನಮ್ಮ ಸಂಘವು ಹೃತ್ಪೂರ್ವಕವಾಗಿ ಸ್ವಾಗತಿಸುತ್ತದೆ. ಮತ್ತು 3-4 ವರ್ಷಗಳಿಂದ ವೇತನ ನೀಡದೇ ಇರುವ ಗ್ರಾಮ ಪಂಚಾಯಿತಿ ಸಿಬ್ಬಂದಿಗಳಿಗೆ ತಕ್ಷಣ ವೇತನ ನೀಡಬೇಕು. ಇಲ್ಲದಿದ್ದರೆ ಉಗ್ರ ಹೋರಾಟ ಹಮ್ಮಿಕೊಳ್ಳಬೇಕಾಗುತ್ತದೆ ಎಂದು ಒತ್ತಾಯಿಸಿದರು.


ಜನವಾದಿ ಮಹಿಳಾ ಸಂಘಟನೆಯ ಮುಖಂಡರಾದ ಸುರೇಖಾ ರಜಪೂತ ಮಾತನಾಡಿ, 17-08-2017 ರಂದು ನಿಯಮಾನುಸಾರ ಜಿ.ಪಂ.ನಿಂದ ಅನೊಮೊದನೆಯಾದ ಸಿಬ್ಬಂದಿಗೆ ಮಾತ್ರ ಈ ಎಫ್‌ಎಮ್.ಎಸ್ ವೇತನ ಅಂದಿದ್ದು ಸರಿಯಾದ ಕ್ರಮವಲ್ಲ. ಇದು ಎಲ್ಲಾ ನೌಕರರಿಗೆ ಸಂಬಳ (ಕನಿಷ್ಠ ಕೂಲಿ) ಪಾವತಿ ಕಡ್ಡಾಯ ಎಂಬ ನಿಯಮಕ್ಕೆ ವಿರುದ್ಧವಾಗಿದೆ. ಸುಪ್ರಿಂ ಕೋರ್ಟ್ ಸಮಾನ ಕೆಲಸಕ್ಕೆ ಸಮಾನ ವೇತನ ನೀಡಬೇಕೆಂದು ಆದೇಶ ವಿದ್ದರು.

ಮನ್ 11353.60 ರೂ. ಜವಾನ್ 10775.60 ರೂ. ಸ್ವಚ್ಛತಾಗಾರ 13,635.60 ರೂ.. ಈ ರೀತಿಯಾಗಿ ಮುಖ್ಯಮಂತ್ರಿಗಳ ಅಧ್ಯಕ್ಷತೆಯಲ್ಲಿ ನಡೆದ ಸಭೆಯಲ್ಲಿ ಪ್ರತ್ಯೇಕ ಅನುದಾನ ಒಟ್ಟು ಸಿಬ್ಬಂದಿ 56138 ನೌಕರರಿಗೆ ಪ್ರತಿವರ್ಷಕ್ಕೆ 829.82 ಕೋಟಿ ರೂಪಾಯಿ ನೀಡಲು ತೀರ್ಮಾನಿಸಿದ್ದು, ಸದ್ಯ ಆ ಹಣಕಾಸು ಇಲಾಖೆಯಿಂದ ಬಿಡುಗಡೆಯಾಗಬೇಕೆಂದು ಒತ್ತಾಯಿಸಿದರು.

ಈ ಸಂದರ್ಭದಲ್ಲಿ ವಿಠ್ಠಲ ಹೊನಮೊರೆ, ರಾಜು ಜಾಧವ, ಸಂಗಪ್ಪ ಸೀತಿಮನಿ, ಗಂಗಾಧರ ಪಾಟೀಲ, ತೊಂಟಪೂರ, ಎಮ್.ಎಚ್.ಬಾಗಲಕೋಟ ಇವರು ಮಾತನಾಡಿದರು.

ಈ ಸಂದರ್ಭದಲ್ಲಿ ರಂಗಪ್ಪ ದಳವಾಯಿ, ಮುರುಘೇಂದ್ರ ಹುಣಶ್ಯಾಳ, ಎಂ.ಕೆ. ಚಳ್ಳಗಿ, ಎಸ್.ಎಸ್.ಹೂರಾರ, ಮಂಜು ಕರಡಿ, ಈರಮ್ಮ ಬಾಣಿ, ರಫೀಕ ವಾಲಿಕಾರ, ಪಿಂಟು ಕೊಂಡಗುಳಿ ಮುಂತಾದವರು ಇದ್ದರು. ಚೆನ್ನಪ್ಪ ಹೂಗಾರ, ಶಕೀಲ ಬಾಗವಾನ, ಚಂದಸಾಬ ಅಡಾಡಿ, ಶರಣಪ್ಪ ಹರಿಜನ, ಸಾಯಿಪಟೇಲ ಕುರಿಕಾಯಿ, ಪರಶುರಾಮ ಮೇಲಗೇರಿ, ಪರಶು ಹೊಲೇರ, ಎಚ್.ಬಿ. ತುರಡಗಿ, ಬಾಲಪ್ಪ ದೊಡಮನಿ ಮುಂತಾದವರು ಇದ್ದರು.

ಸಂಗು ನಾಲ್ಕಮಾನ



ಇತ್ತೀಚೆಗೆ ಮೂರು ಕಟ್ಟುಗಳಲ್ಲಿ ದೇಶದ ಆರ್ಥವ್ಯವಸ್ಥೆಯ ಸ್ಥಿತಿ–ಗತಿಯನ್ನು ಬಿಂಬಿಸುವ ಮಾಹಿತಿಗಳು ಬಂದಿವೆ. ಇವು ಒಂದಕ್ಕಿಂತ ಒಂದು ಹೆಚ್ಚು ನಿರಾಶಾದಾಯಕವಾಗಿವೆ, ಈ ಆರ್ಥಿಕ ಅವ್ಯವಸ್ಥೆಯ ಹಿನ್ನೆಲೆಯಲ್ಲಿ ಕೇಂದ್ರ ಸಂಪುಟದ ಪುನಾರಚನೆಯಾಗಿದೆ, ಉತ್ತಮ ಕೆಲಸ ಮಾಡಿದವರಿಗೆ ಪುರಸ್ಕಾರ, ಸರಿಯಾದ ಕೆಲಸ ಮಾಡದವರಿಗೆ ಶಿಕ್ಷೆಯಾಗಿದೆ ಎಂಬ ಅಬ್ಬರದ ಮಾತುಗಳು ಕೇಳ ಬಂದಿವೆ. ಆದರೆ

ದೇಶದ ಆರ್ಥಿಕ ಅವ್ಯವಸ್ಥೆಗೆ ಯಾರು ಹೊಣೆ?



*ಪ್ರಕಾಶ್ ಕಾರಟ್

ಮೋದಿ 'ಬಲಿಷ್ಟ ನಾಯಕ' ಎಂದು ಎಷ್ಟು ಹೆಚ್ಚೆಚ್ಚು ಬಿಂಬಿತವಾಗುತ್ತಾರೋ ಅಷ್ಟು ಹೆಚ್ಚೆಚ್ಚು ಈ ಹೊಣೆಗಾರಿಕೆ ಅವರ ಹೆಗಲ ಮೇಲೆಯೇ ಏರುತ್ತದೆ.

ದೇಶದ ಆರ್ಥಿಕತೆ ಕುರಿತು ಕಳೆದ ಕೆಲವು ದಿನಗಳಿಂದ ಬರುತ್ತಿರುವ ವರದಿಗಳು ಸತತವಾಗಿ ತೀರಾ ನಿರಾಶಾದಾಯಕವಾಗಿವೆ. ಅನಾಣ್ಯೀಕರಣದ ನಂತರ ಆರ್ಥಿಕತೆಯ ಮಂದಗತಿ ಇನ್ನೂ ಹೆಚ್ಚಾಗಿದೆ ಹಾಗೂ ದೇಶವು ಆರ್ಥಿಕ ನಿಧಾನಗತಿಯತ್ತ ತೀವ್ರರೀತಿಯಲ್ಲಿ ಸಾಗುತ್ತಿದೆ ಎನ್ನುವುದನ್ನು ಪ್ರಕಟವಾಗುತ್ತಿರುವ ಎಲ್ಲಾ ಮಾಹಿತಿಗಳು ತೋರಿಸುತ್ತಿವೆ.

ಮೊದಲಿಗೆ ಬಂದದ್ದು ಆರ್ಥಿಕ ಸಮೀಕ್ಷೆಯ ಎರಡನೇ ಸಂಪುಟ. ಇದು ಒಟ್ಟಾರೆ ಆರ್ಥಿಕ ಪರಿಸ್ಥಿತಿ ಬಗ್ಗೆ ತೀರಾ ವಿಷಣ್ಣವಾದ ಚಿತ್ರಣವನ್ನು ನೀಡಿದೆ. 2016–17ನೇ ಸಾಲಿನ ನಿಜವಾದ ನಿವ್ವಳ ಮೌಲ್ಯ ಸೇರ್ಪಡೆ(ಗ್ರಾಸ್ ವ್ಯಾಲ್ಯೂ ಆಡೆಡ್– ಜಿವಿಎ) ಯ ಬೆಳವಣಿಗೆ ದರ 6.6 ಆಗಿದೆ. 2015–16ರಲ್ಲಿ ಇದು 7.9 ಅಗಿತ್ತು. ಕಳೆದ ಆರ್ಥಿಕ ವರ್ಷದ ಕೊನೆಯ ಮೂರು ತಿಂಗಳ, ಅಂದರೆ ಈ ವರ್ಷದ ಜನವರಿಯಿಂದ ಮಾರ್ಚ್‌ವರೆಗಿನ ಜಿವಿಎ ಬೆಳವಣಿಗೆ ದರ ಕೇವಲ 5.6 ಆಗಿದೆ.

ಪ್ರಸಕ್ತ ಹಣಕಾಸು ವರ್ಷದ ಮೊದಲ ಮೂರು ತಿಂಗಳ, ಅಂದರೆ ಎಪ್ರಿಲ್‌ನಿಂದ ಜೂನ್, ಉತ್ಪಾದನೆ ವಲಯದ ಜಿವಿಎ ಕೇವಲ 1.2 ಶೇಕಡಾ ಆಗಿದ್ದು ಹಿಂದಿನ ವರ್ಷದ ಇದೇ ಅವಧಿಯಲ್ಲಿ ಅದು ಶೇಕಡಾ 10.7 ಆಗಿತ್ತು.

ಕಳೆದ ಮೂರು ವರ್ಷಗಳಿಂದ ರಫ್ತು ಸ್ಥಗಿತಗೊಂಡಿದೆ. ಜತೆಗೆ ಸುಸ್ತಿ ಬ್ಯಾಂಕ್ ಸಾಲಗಳ ಹಾಗೂ ರಾಷ್ಟ್ರೀಕೃತ ಬ್ಯಾಂಕ್‌ಗಳ ವಸೂಲಾಗದ ಸಾಲದ ಪ್ರಮಾಣ (ಎನ್‌ಪಿಎ) ಹೆಚ್ಚಾಗುತ್ತಿರುವ ಸಮಸ್ಯೆಯ ಅಪಾಯದ ಕತ್ತಿ ತೂಗುತ್ತಿದೆ. 2017 ಜೂನ್ ಅಂತ್ಯದ ವೇಳೆಗೆ ಎನ್‌ಪಿಎ ಪ್ರಮಾಣ ಎಷ್ಟು ದೊಡ್ಡದಾಗಿತ್ತೆಂದರೆ ಅದರ ಮೊತ್ತ 8.26 ಲಕ್ಷ ಕೋಟಿ ರೂಪಾಯಿಗಳು. ಉದ್ಯೋಗ ಸೃಷ್ಟಿಯ ವಿಚಾರಕ್ಕೆ ಬಂದರೆ, ಸಂಘಟಿತ ಕ್ಷೇತ್ರದಲ್ಲಿ ಉದ್ಯೋಗಗಳು ಕಡಿಮೆಯಾಗಿವೆ ಎಂಬುದನ್ನು ಲಭ್ಯವಿರುವ ಎಲ್ಲಾ ಅಂಕಿ–ಸಂಖ್ಯೆಗಳು ತಿಳಿಸುತ್ತವೆ. ಹೊಸ ಉದ್ಯೋಗಗಳ ಸೃಷ್ಟಿ ಕಳೆದ ದಶಕದಲ್ಲೇ ಅತ್ಯಂತ ಕಡಿಮೆ ಪ್ರಮಾಣದ್ದಾಗಿದೆ.

ಅಂಕಿಸಂಖ್ಯೆಗಳ ಎರಡನೇ ಕಟ್ಟು ಕೇಂದ್ರೀಯ ಅಂಕಿ–ಸಂಖ್ಯೆ ಸಂಸ್ಥೆ (ಸಿಎಸ್‌ಒ)ದಿಂದ ಬಂದಿರುವಂತದ್ದು.. ಈ ಆರ್ಥಿಕ ವರ್ಷದ ಮೊದಲ ಮೂರು ತಿಂಗಳಲ್ಲಿ ಅಂದರೆ ಎಪ್ರಿಲ್‌ನಿಂದ ಜೂನ್ ವರೆಗಿನ ಒಟ್ಟು ದೇಶೀಯ ಉತ್ಪನ್ನ (ಜಿಡಿಪಿ) ಶೇಕಡಾ 5.7 ಎಂದು ಅದು ಅಂದಾಜು ಮಾಡಿದೆ. ಕಳೆದ ಸತತ ನಾಲ್ಕು ತ್ರೈಮಾಸಿಕಗಳಲ್ಲಿ ಜಿಡಿಪಿ ಬೆಳವಣಿಗೆ ದರ ಸತತವಾಗಿ ಕುಸಿದಿದೆ. ಈ ತ್ರೈಮಾಸಿಕದ ಕೈಗಾರಿಕಾ ಉತ್ಪಾದನಾ ಸೂಚ್ಯಂಕ 1.8% ಬೆಳವಣಿಗೆ ದರವನ್ನು ತೋರಿಸಿದೆ. ಬಂಡವಾಳ ಹೂಡಿಕೆ ಏನೇನೂ ಚಿಗುರಿಕೊಂಡಿಲ್ಲ.

ಅನೌಪಚಾರಿಕ ಕ್ಷೇತ್ರದಲ್ಲಿ ಭಾರೀ ಪ್ರಮಾಣದ ಏರುಪೇರು, ದಿನಗೂಲಿ ಕಾರ್ಮಿಕರ ಜೀವನೋಪಾಯ ಕಸಿದುಕೊಂಡಿದ್ದು ಮತ್ತು ರೈತರ ಮೇಲೆ ಪ್ರತಿಕೂಲ ಪರಿಣಾಮ ಬೀರಿದ ಅನಾಣ್ಯೀಕರಣ ಪ್ರಕ್ರಿಯೆ ಆರ್ಥಿಕತೆಯ ಮಂದಗತಿಯನ್ನು ಹೆಚ್ಚಿಸಿದ್ದರಲ್ಲಿ ಅನುಮಾನವೇ ಇಲ್ಲ. ಬ್ಯಾಂಕ್ ಠೇವಣಿಗಳಲ್ಲಿ ಉಬ್ಬರದ ಹೊಡೆತವನ್ನು ತಡೆದುಕೊಳ್ಳಲು ರಿಝರ್ವ್ ಬ್ಯಾಂಕ್ ವಾಣಿಜ್ಯ ಬ್ಯಾಂಕುಗಳಿಂದ ಪಡೆಯುವ ಸಾಲಕ್ಕೆ ಕೊಡುವ ಬಡ್ಡಿದರ (ರಿವರ್ಸ್ ರೆಪೋ ರೇಟ್) ಮತ್ತು ನಗದೀಕರಣ ಹೊಂದಾಣಿಕೆ (ಲಿಕ್ವಿಡಿಟಿ ಅಟ್ಜಸ್ಟ್‌ಮೆಂಟ್) ವ್ಯವಸ್ಥೆಗೆ ಮೊರೆ ಹೋಗಬೇಕಾಗಿದೆ. ಇದರ ಜೊತೆಜೊತೆಗೇ ಹೊಸ ಕರೆನ್ಸಿ ನೋಟ್‌ಗಳನ್ನು ಮುದ್ರಿಸುವ ವೆಚ್ಚವೂ ಸೇರಿಕೊಂಡಿತು. ಇವೆಲ್ಲದರ ಪರಿಣಾಮವಾಗಿ ಸರಕಾರಕ್ಕೆ ಆರ್‌ಬಿಐ ಡಿವಿಡೆಂಡ್ ಅರ್ಧದಷ್ಟು ಕಡಿಮೆಯಾಯಿತು.

ಅನಾಣ್ಯೀಕರಣಗೊಂಡ ನೋಟುಗಳ ವಾಪಸಾತಿ ಕುರಿತ ಆರ್‌ಬಿಐ ಸಲ್ಲಿಸಿದ ಮಾಹಿತಿಯೇ ಅಂಕಿ–ಸಂಖ್ಯೆಗಳ ಮೂರನೇ ಕಟ್ಟು. 500 ಮತ್ತು 1000 ರೂಪಾಯಿ ನೋಟುಗಳಲ್ಲಿ ಶೇಕಡಾ 99ರಷ್ಟು ಬ್ಯಾಂಕಿಂಗ್ ವ್ಯವಸ್ಥೆಗೆ ಮರಳಿ ಬಂದಿದೆ. ಕೇಂದ್ರ ಜಿಲ್ಲಾ ಸಹಕಾರಿ ಬ್ಯಾಂಕ್‌ಗಳ ಕೆಲವು ಕರೆನ್ಸಿಗಳನ್ನು ಇನ್ನೂ ಲೆಕ್ಕಕ್ಕೆ ತೆಗೆದುಕೊಳ್ಳಬೇಕಾಗಿದೆ ಎಂದು ಆರ್‌ಬಿಐ ವರದಿ ಮಾಡಿದೆ. ಇದರಿಂದ ಅನಾಣ್ಯೀಕರಣದಿಂದ ಕಪ್ಪು ಹಣವನ್ನು ಹೊರಗೆಳೆಯಲಾಗುತ್ತದೆ ಮತ್ತು ಭ್ರಷ್ಟಾಚಾರವನ್ನು ನಿಗ್ರಹಿಸಲಾಗುತ್ತದೆ ಎಂದೆಲ್ಲ ಹರಡಿಸಿದ ಸಂಗತಿಗಳು ಕೇವಲ ಮಿಥ್ಯೆಗಳು ಎಂದು ಸ್ಫೋಟಗೊಂಡಿವೆ. ಇಡೀ ಅನಾಣ್ಯೀಕರಣ ಪ್ರಕ್ರಿಯೆ ದೇಶದ ಅರ್ಥ ವ್ಯವಸ್ಥೆಗೆ ಹಾನಿಯುಂಟು ಮಾಡಿದೆ ಹಾಗೂ ಬಡವರು ಮತ್ತು ಅಸಂಘಟಿತ ವಲಯದ ಕ್ಷೇತ್ರವನ್ನು ಅತಿಯಾಗಿ ಬಾಧಿಸಿದೆಯಷ್ಟೇ.



ವ್ಯಂಗ್ಯಚಿತ್ರ: ಮಂಜುಲ್, ಫಸ್ಟ್ ಪೋಸ್ಟ್

ಇಂಥ ಸನ್ನಿವೇಶದ ಹಿನ್ನೆಲೆಯಲ್ಲಿ ಕೇಂದ್ರ ಸಚಿವ ಸಂಪುಟದ ಪುನಾರಚನೆ ಆಗಿದೆ. ಇದರಲ್ಲಿ ಸಾಧಕರನ್ನು ಪುರಸ್ಕರಿಸಲಾಗಿದೆ ಹಾಗೂ ಅದಕ್ಷರನ್ನು ಶಿಕ್ಷಿಸಲಾಗಿದೆ ಎಂದೆಲ್ಲಾ ಅತಿರಂಜಿತ ಪ್ರಚಾರ ನಡೆದಿದೆ. ಆದರೆ ವಾಸ್ತವವಾಗಿ ಹಾಗೆ ಆಗೇ ಇಲ್ಲ ಎನ್ನುವುದು ಢಾಳಾಗಿ ಕಾಣಿಸುತ್ತದೆ. ನಿರ್ಮಲಾ ಸೀತಾರಾಮನ್ ವಾಣಿಜ್ಯ ಮತ್ತು ಕೈಗಾರಿಕೆ ಸಚಿವರಾಗಿದ್ದರು. ಅವರ ಉಸ್ತುವಾರಿಯಲ್ಲಿ, 2015–16ರಲ್ಲಿ ರಫ್ತು 15.6%ದಷ್ಟು ಕುಸಿಯಿತು. ಅಂದಿನಿಂದಲೂ ಅದು ಕುಸಿಯುತ್ತಲೇ ಇದೆ. ಇದೇ ಅವಧಿಯಲ್ಲಿ ವಿಯೆಟ್ನಾಮ್ ಮತ್ತು ಬಾಂಗ್ಲಾ ದೇಶದಂಥ ರಾಷ್ಟ್ರಗಳು ರಫ್ತುಗಳಲ್ಲಿ ಉತ್ತಮ ಬೆಳವಣಿಗೆಯನ್ನು ದಾಖಲಿಸಿವೆ. ಕೈಗಾರಿಕಾ ಉತ್ಪಾದನೆ ಬಗ್ಗೆ ಹೇಳುವುದಾದರೆ, ಅದರ ಬೆಳವಣಿಗೆ ದರ ಬಹಳ ಸಮಯದಿಂದ ಜಾರುತ್ತಾ ಸಾಗಿದೆ. ಆದ್ದರಿಂದ, ನಿರ್ಮಲಾರನ್ನು ರಕ್ಷಣಾ ಖಾತೆಗೆ ಬಡ್ತಿ ನೀಡಿರುವುದು ಏನನ್ನು ಸೂಚಿಸುತ್ತದೆ?

ಕಳೆದ ಎರಡು ವರ್ಷಗಳಲ್ಲಿ ರೈಲ್ವೆ ಅಪಘಾತಗಳಲ್ಲಿ ದಯನೀಯ ದಾಖಲೆ ಹೊಂದಿದ್ದಕ್ಕಾಗಿ ಸುರೇಶ್ ಪ್ರಭು ಅವರನ್ನು ರೈಲ್ವೆ ಖಾತೆಯಿಂದ ಬಿಡುಗಡೆ ಮಾಡಬೇಕಿತ್ತು. ಹೀಗಾಗಿ ಅವರನ್ನು ವಾಣಿಜ್ಯ ಮತ್ತು ಕೈಗಾರಿಕೆ ಖಾತೆ ಸಚಿವರನ್ನಾಗಿ ಮಾಡಲಾಗಿದೆ. ಈಗಿನ ಕೃಷಿ ಸಚಿವರನ್ನು ಒಬ್ಬ ಉತ್ತಮ ಸಾಧಕ ಎಂದು ಹೇಳಬಹುದೇ?... ಈ ಪಟ್ಟಿ ಯನ್ನು ಇನ್ನಷ್ಟು ಬೆಳೆಸಬಹುದು.

ನಿಜಸಂಗತಿಯೆಂದರೆ, ಯಾವುದೇ ಸಚಿವ ಖಾತೆಯಲ್ಲಿ ಕೆಲಸದ ಯಶಸ್ಸನ್ನು ನಿರ್ಧರಿಸುವುದು ಅದರ ಸಚಿವರಿಗಿಂತ ಹೆಚ್ಚಾಗಿ ಅಲ್ಲಿ ಅನುಸರಿಸುವ ಧೋರಣೆಗಳೇ. ಮೋದಿ ಆಡಳಿತ ವ್ಯವಸ್ಥೆಯಲ್ಲಿ, ಪ್ರತಿಯೊಂದು ಕ್ಷೇತ್ರದ ಮೂಲಭೂತ ನೀತಿಯನ್ನು ಪ್ರಧಾನಿಗಳು ಮಾತ್ರವೇ ನಿರ್ಧರಿಸುತ್ತಾರೆ. ಆದ್ದರಿಂದ ಬ್ಯಾಂಕ್ ಸುಸ್ತಿ ಸಆಲಗಳ ಪ್ರಮಾಣ ಹೆಚ್ಚುತ್ತಾ ಹೋದರೆ ಬ್ಯಾಂಕ್‌ಗಳನ್ನು ಖಾಸಗೀಕರಿಸಬೇಕೇ ಹೊರತು ಸಾಲ ಮರುಪಾವತಿ ಮಾಡಲು ತಪ್ಪಿದ ಖಾಸಗಿ ಕಂಪೆನಿಗಳನ್ನು ಶಿಕ್ಷಿಸುವುದಲ್ಲ. ಅದೇ ರೀತಿ ರೈಲ್ವೆಯನ್ನು ಖಾಸಗೀಕರಿಸಬೇಕಾದರೆ ಆಗ ಸುರಕ್ಷತೆಯು ಆದ್ಯತೆ ವಿಷಯ ಆಗುವುದಿಲ್ಲ. ಒಂದು ವೇಳೆ ಹಣಕಾಸು ಸಚಿವರು ಅನಾಣ್ಯೀಕರಣ ನಿರ್ಧಾರವನ್ನು ತೆಗೆದುಕೊಂಡಿದ್ದರೆ, ಈಗ ಅನಾವರಣಗೊಳ್ಳುತ್ತಿರುವ ದುರಂತಕ್ಕಾಗಿ ಅರುಣ್ ಜೇಟ್ಲಿಯನ್ನು ಕತ್ತಿನ ಪಟ್ಟಿ ಹಿಡಿದು ಹೊರದಬ್ಬಬೇಕಾಗಿತ್ತು. ಆದರೆ ನಿರ್ಧಾರ ತೆಗೆದುಕೊಂಡವರು ಯಾರು ಎಂಬುದು ಪ್ರತಿಯೊಬ್ಬರಿಗೂ ಗೊತ್ತಿದೆ.

ಅರ್ಥ ವ್ಯವಸ್ಥೆಯು ಒಂದು ಆರ್ಥಿಕ ಹಿಂಜರಿತದತ್ತ ಸಾಗುತ್ತಿದೆ. ದೇಶದ ಭವಿಷ್ಯ ಮಂಕಾಗಿದೆ. ರೈತರು ಕೃಷಿ ಬಿಕ್ಕಟ್ಟಿನಿಂದ ಸಂಕಟಪಡುತ್ತಿದ್ದಾರೆ, ಅನೌಪಚಾರಿಕ ವಲಯದ ಕಾರ್ಮಿಕರು ತಮ್ಮ ಜೀವನೋಪಾಯಗಳನ್ನೇ ಕಳೆದುಕೊಳ್ಳುತ್ತಿದ್ದಾರೆ. ಯುವಜನರಿಗೆ ಉದ್ಯೋಗಗಳು ಸಿಗುತ್ತಿಲ್ಲ. ವಿರೋಧಾಭಾಸವೆಂದರೆ, ಮೋದಿ 'ಬಲಿಷ್ಟ ನಾಯಕ' ಎಂದು ಎಷ್ಟು ಹೆಚ್ಚೆಚ್ಚು ಬಿಂಬಿತವಾಗುತ್ತಾರೋ ಅಷ್ಟು ಹೆಚ್ಚೆಚ್ಚು ಅವ್ಯವಸ್ಥೆಯ ಹೊಣೆಗಾರಿಕೆ ಅವರ ಹೆಗಲ ಮೇಲೇರುತ್ತದೆ.

ಅನು:ವಿಶ್ವ

ಸಪ್ಟಂಬರ್ 18 ಅಖಿಲ ಭಾರತ ಸಮಾವೇಶ: ಐಕ್ಯ ಜನತಾ ಹೋರಾಟಕ್ಕೆ 'ಜನ ಏಕತಾ ಜನ ಅಧಿಕಾರ ಆಂದೋಲನ' ರಚನೆ

ದೇಶಾದ್ಯಂತ ಕಾರ್ಯಪ್ರವೃತ್ತವಾಗಿರುವ ಎಡ ಮತ್ತು ಪ್ರಜಾಪ್ರಭುತ್ವವಾದಿ ಸಾಮೂಹಿಕ, ವರ್ಗ ಮತ್ತು ಸಾಮಾಜಿಕ ಸಂಘಟನೆಗಳು ಒಂದು ಐಕ್ಯ ವೇದಿಕೆಯನ್ನು ಆರಂಭಿಸಲಿದ್ದಾರೆ. ಜನತೆಯ ಸಾಧ್ಯವಾದಷ್ಟು ವಿಸ್ತಾರವಾದ ಐಕ್ಯತೆಯನ್ನು ಕಟ್ಟಿ ಬಿಜೆಪಿ ನೇತೃತ್ವದ ಎನ್‌ಡಿಎ ಸರಕಾರದ ಜನ–ವಿರೋಧಿ ಧೋರಣೆಗಳ ವಿರುದ್ಧ ವಿಷಯಾಧಾರಿತ ಐಕ್ಯ ಹೋರಾಟಗಳನ್ನು ನಡೆಸುವುದು ಈ ವೇದಿಕೆಯ ಉದ್ದೇಶ. ನವದೆಹಲಿಯ ಮಾವಳಂಕರ್ ಸಭಾಂಗಣದಲ್ಲಿ ಸಪ್ಟಂಬರ್ 18ರಂದು ನಡೆಯಲಿರುವ ಅಖಿಲ ಭಾರತ ಸಮಾವೇಶದಲ್ಲಿ ಇದು ಆರಂಭವಾಗಲಿದೆ. ಜನಗಳ ಹಕ್ಕುಗಳು ಮತ್ತು ದೇಶದ ಪ್ರಜಾಪ್ರಭುತ್ವ ಹಂದರದ ಮೇಲೆ ಪ್ರಹಾರಗಳು ತೀವ್ರಗೊಳ್ಳುತ್ತಿರುವ ಮತ್ತು ನವ–ಉದಾರವಾದಿ ಆರ್ಥಿಕ ಧೋರಣೆಗಳ ವಿರುದ್ಧ ಹಾಗೂ ದ್ವೇಷ ಮತ್ತು ಹಿಂಸಾಚಾರದ ಕೋಮುವಾದಿ, ವಿಭಜನಕಾರಿ ರಾಜಕೀಯದ ವಿರುದ್ಧ ವಿವಿಧ ಜನವಿಭಾಗಗಳ ಹೋರಾಟಗಳು ಹೆಚ್ಚುತ್ತಿರುವ ಸಂದರ್ಭದಲ್ಲಿ ಈ ಸಮಾವೇಶವನ್ನು ಸಂಘಟಿಸಲಾಗುತ್ತಿದೆ.

ಆಗಸ್ಟ್ 28ರಂದು ಈ ಸಮಾವೇಶದ ಸಂಘಟನಾ ಸಮಿತಿಯ ಸದಸ್ಯರು ನೀಡಿರುವ ಹೇಳಿಕೆಯಲ್ಲಿ ಈ ಸಮಾವೇಶ ನೂರಕ್ಕೂ ಹೆಚ್ಚು ಅಖಿಲ ಭಾರತ ಮತ್ತು ಪ್ರದೇಶ–ಆಧಾರಿತ ಸಂಘಟನೆಗಳು ಒಂದುಗೂಡಲು ಸೌಕರ್ಯ ಕಲ್ಪಿಸುತ್ತದೆ ಎಂದಿದ್ದಾರೆ. ಈ ಐಕ್ಯ ವೇದಿಕೆ ಎಲ್ಲರನ್ನೂ ತಟ್ಟುವ ಸರ್ವಸಾಮಾನ್ಯ ಉದ್ದೇಶದಿಂದ ಕೆಲಸ ಮಾಡುತ್ತದೆ, ಆರೆಸ್ಸೆಸ್–ಬಿಜೆಪಿ ಕೂಟ ಮತ್ತು ಇತರ ಸರ್ವಾಧಿಕಾರಶಾಹಿ ಶಕ್ತಿಗಳ ನವ–ಉದಾರವಾದಿ ಧೋರಣೆಗಳು ಮತ್ತು ಕೋಮುವಾದದ ವಿರುದ್ಧ ಹೋರಾಟ ನಡೆಸ ಬಯಸುವ ಎಲ್ಲ ಎಡ ಮತ್ತು ಪ್ರಜಾಪ್ರಭುತ್ವವಾದಿ ಆಂದೋಲನಗಳನ್ನು ಒಂದುಗೂಡಿಸಲು ಪ್ರಯತ್ನಿಸುತ್ತದೆ ಎಂದು ಅವರು ಹೇಳಿದ್ದಾರೆ.

'ಜನ ಏಕತಾ ಜನ ಅಧಿಕಾರ ಆಂದೋಲನ' ಎಂಬ ಈ ಪ್ರಸ್ತಾವಿತ ಐಕ್ಯ ವೇದಿಕೆ ಜನಗಳ ಐಕ್ಯತೆ, ಜನಗಳ ಅಧಿಕಾರ ಮತ್ತು ಜನಗಳ ಪ್ರತಿರೋಧಕ್ಕೆ ಶ್ರಮಿಸುತ್ತದೆ. ಸಮಾವೇಶ ಪ್ರಸಕ್ತ ಸಾಮಾಜಿಕ–ರಾಜಕೀಯ ಮತ್ತು ಆರ್ಥಿಕ ಸನ್ನಿವೇಶದ ಕುರಿತು ಒಂದು ನಿರ್ಣಯವನ್ನು, ಒಂದು ಆಗ್ರಹ ಮಹಾಪತ್ರವನ್ನು ಮತ್ತು ಮುಂದಿನ ಕಾರ್ಯಾಚರಣೆಯ ಯೋಜನೆಯನ್ನು ಅಂಗೀಕರಿಸುತ್ತದೆ.

ಈ ಸಮಾವೇಶ ಕೇಂದ್ರೀಯ ಕಾರ್ಮಿಕ ಸಂಘಗಳ ಜಂಟಿ ವೇದಿಕೆ ನಡೆಸುತ್ತಿರುವ ಹೋರಾಟಗಳಿಗೆ– ಸಂಸತ್ತಿನ ಮುಂದೆ ನವಂಬರ್ 9–11 ರ ಸತತ ಮೂರು ದಿನಗಳ ಬೃಹತ್ ಧರಣಿಗೆ ಮತ್ತು ರೈತ ಸಂಘಟನೆಗಳ ಜಂಟಿ ವೇದಿಕೆಯ ನವಂಬರ್ 20ರ ಪಾರ್ಲಿಮೆಂಟ್ ಚಲೋಗೆ ಬೆಂಬಲ ಮತ್ತು ಸೌಹಾರ್ದ ವ್ಯಕ್ತಪಡಿಸಲಿದೆ.

ಎಲ್ಲಾ ರಾಜ್ಯಗಳಿಂದ ಕಾರ್ಮಿಕರು, ರೈತರು, ಕೃಷಿ ಕೂಲಿಕಾರರು, ವಿದ್ಯಾರ್ಥಿಗಳು, ಯುವಜನರು, ಮಹಿಳೆಯರು, ನೌಕರರು, ಬುಡಕಟ್ಟು ಜನಗಳು, ದಲಿತರು, ಅಲ್ಪಸಂಖ್ಯಾತರು, ಮತ್ತು ನಂತರ ಸಾಮಾಜಿಕವಾಗಿ ದಮನಕ್ಕೊಳಗಾಗಿರುವ ವಿಭಾಗಗಳ ಜನರನ್ನು ಪ್ರತಿನಿಧಿಸುವ ಸಾಮೂಹಿಕ, ವರ್ಗ ಮತ್ತು ಸಾಮಾಜಿಕ ಸಂಘಟನೆಗಳ ಕಾರ್ಯಕರ್ತರು, ಲೇಖಕರು, ಸಾಂಸ್ಕೃತಿಕ ಗುಂಪುಗಳು, ಬುದ್ಧಿಜೀವಿಗಳು, ಜಾತ್ಯತೀತ ಪ್ರಗತಿಪರ ವ್ಯಕ್ತಿಗಳು ಈ ಸಮಾವೇಶದಲ್ಲಿ ನೆರೆಯಲಿದ್ದಾರೆ.

ಸಮಾವೇಶದ ನಿರ್ಣಯವನ್ನು ವಿವಿಧ ಕಾರ್ಮಿಕ ಸಂಘಗಳು, ರೈತ, ಕೃಷಿಕೂಲಿಕಾರ, ಮಹಿಳಾ, ಯುವಜನ, ವಿದ್ಯಾರ್ಥಿ ಸಂಘಟನೆಗಳು ಮತ್ತು ಸಾಮೂಹಿಕ ಆಂದೋಲನಗಳೊಂದಿಗೆ ಹಲವು ಸಮಾಲೋಚನೆಗಳನ್ನು ನಡೆಸಿ ರೂಪಿಸಲಾಗಿದೆ ಎಂದು ಸಂಘಟನಾ ಸಮಿತಿಯ ಸದಸ್ಯರು ಹೇಳಿದ್ದಾರೆ.

ಹನ್ನನ್ ಮೊಲ್ಲ, ಅಮರಜಿತ್ ಕೌರ್, ಅತುಲ್‌ಕುಮಾರ್ ಅಂಜನ್, ಕೆ.ಹೇಮಲತಾ, ಅನ್ನಿ ರಾಜ, ತಿರುಮಲೈ, ಕವಿತಾ ಕೃಷ್ಣನ್, ಮರಿಯಮ್ ಧವಳೆ, ವಿಕ್ರಂ ಸಿಂಗ್, ಅನಿಲ್ ಚೌಧುರಿ, ಡಾ.ಸುನೀಲಂ, ನಿಖಿಲ್ ಡೇ, ರಾಜೀವ್ ದಿಮ್ರಿ, ಗೌತಮ್ ಮೋದಿ, ಕೆ. ಮಧುರೇಶ್ ಕುಮಾರ್, ಪಿ.ಕೃಷ್ಣಪ್ರಸಾದ್, ರೋಮ ಮಲಿಕ್ ಸಮಾವೇಶದ ಸಂಘಟನಾ ಸಮಿತಿಯ ಸದಸ್ಯರು.



ಚಾರಿತ್ರಿಕ "ಸೌಹಾರ್ದತೆಗಾಗಿ ಕರ್ನಾಟಕ" ಸಮಾವೇಶ

ಸೆಪ್ಟೆಂಬರ್ 5 ರಂದು ಬೆಂಗಳೂರಿನ ಟೌನ್ ಹಾಲಿನಲ್ಲಿ ಸೇರಿದ್ದ ಚಾರಿತ್ರಿಕ "ಸೌಹಾರ್ದತೆಗಾಗಿ ಕರ್ನಾಟಕ" ಸಮಾವೇಶ ಹುತಾತ್ಮರ ದಿನದಂದು (ಜನವರಿ 30ರಂದು) ರಾಜ್ಯದ ಬಹುಭಾಗಗಳನ್ನು ಹಾದುಹೋಗುವ ಒಟ್ಟು ಸುಮಾರು 2500 ಕಿ.ಮಿ. ಉದ್ದದ ಮೂರು ಮಾನವ ಸರಪಣಿಗಳನ್ನು ರಚಿಸಲು ಕರೆ ಕೊಟ್ಟಿದೆ. ಆ ಮೂಲಕ ರಾಜ್ಯದ ಸೌಹಾರ್ದತೆಯ ಪರಂಪರೆಯನ್ನು ಎತ್ತಿ ಹಿಡಿಯಲು ಮತ್ತು ಅದನ್ನು ಬಲಗೊಳಿಸಲು, ಹಾಗೂ ಅದನ್ನು ಭಂಗಪಡಿಸುವ ಎಲ್ಲಾ ರೀತಿಯ ಮತಾಂಧತೆಗಳನ್ನು ಧಿಕ್ಕರಿಸಲು ಪಣ ತೊಡಬೇಕು ಎಂದು ಸಮಾವೇಶ ಕರೆ ಕೊಟ್ಟಿದೆ. ಈ ಸಮಾವೇಶವನ್ನು ಎಡಪಕ್ಷಗಳು, ರೈತ ದಲಿತ ಸಂಘಟನೆಗಳು ಮತ್ತು ಮಾನವ ಬಂಧುತ್ವ ವೇದಿಕೆ ಜಂಟಿಯಾಗಿ ಸಂಘಟಿಸಿದ್ದವು. ಈ ಚಾರಿತ್ರಿಕ ಸಮಾವೇಶದ ವರದಿ. ಸಮಾವೇಶದ ನಿರ್ಣಯದ ಪೂರ್ಣಪಾಠ, ಸಮಾವೇಶದಲ್ಲಿ ಆಡಿದ ಮಾತುಗಳ ಸಾರಾಂಶ, ಸಮಾವೇಶದ ಪ್ರಚಾರಕ್ಕೆ ಮಾಡಿದ ಕೆಲವು ಪೋಸ್ಟರುಗಳೂ ಇಲ್ಲಿವೆ. ಸಮಾವೇಶದ ರಾತ್ರಿಯೇ ಮತಾಂಧ ಶಕ್ತಿಗಳ ವಿರುದ್ಧ ಸತತವಾಗಿ ಸೆಣಸುತ್ತಿದ್ದ ಗೌರಿ ಲಂಕೇಶ್ ಅವರ ಅಮಾನುಷ ಹತ್ಯೆ ಸಮಾವೇಶದ ಮಹತ್ವ ಅಗತ್ಯತೆಗಳನ್ನು ಮತ್ತೊಮ್ಮೆ ಸಾರಿ ಹೇಳಿತು.



ಜನವರಿ 30 ರಂದು ಮಾನವ ಸರಪಣಿಗೆ ಕರೆ

ಟೌನ್ ಹಾಲಿನಲ್ಲಿ 10 ಗಂಟೆಯಿಂದಲೇ ವಿವಿಧ ಸಂಘಟನೆಗಳಿಗೆ ಸೇರಿದ ರಾಜ್ಯದ ವಿವಿಧ ಭಾಗಗಳಿಂದ ಬಂದಿದ್ದ ಜನ ಸೇರಲು ಆರಂಭಿಸಿದ್ದರು. ವೇದಿಕೆಯಿಂದ ಸೌಹಾರ್ದ ಗೀತೆಗಳು ಮೊಳಗಲು ಆರಂಭವಾಗಿತ್ತು. ವಿವಿಧ ಸಂಘಟನೆಗಳ ನಾಯಕರು ಆಗಮಿಸುತ್ತಿದ್ದಂತೆ ಕೆಳಗಿನ ಹಾಲು ತುಂಬುತ್ತಿದ್ದಂತೆ, ಮತ್ತೆ ಬಂದ ಜನ ಬಾಲ್ಕನಿಗೆ ಹೋಗಿ ಟೌನ್ ಹಾಲ್ ತುಂಬುತ್ತಿದ್ದಂತೆ ಸಮಾವೇಶ ಆರಂಭವಾಯಿತು. ವಿವಿಧ ಸಂಘಟನೆಗಳ ನಾಯಕರನ್ನು ವೇದಿಕೆಗೆ ಬರಮಾಡಿಕೊಳ್ಳುತ್ತಾ ಡಾ. ಗಾಯತ್ರಿ ನಿರೂಪಣೆಯನ್ನು ನಿರ್ವಹಿಸಿದರು. ಸಿಪಿಐ(ಎಂ) ಸೆಕ್ರೆಟಾರಿಯಟ್ ಸದಸ್ಯ ಕಾ.ವಿಜೆ.ಕೆ.ನಾಯರ್, ಸಿಪಿಐ ರಾಜ್ಯ ಕಾರ್ಯದರ್ಶಿ ಪಿ.ವಿ.ಲೋಕೇಶ್, ಎಸ್.ಯು.ಸಿ.ಐ.(ಸಿ)ನ ಡಾ. ಕೆ. ಉಮಾ, ಕರ್ನಾಟಕ ರಾಜ್ಯ ರೈತ ಸಂಘದ ವೀರಗಂಗಯ್ಯ?, ಮಾನವ ಬಂಧುತ್ವ ವೇದಿಕೆಯ ಸಂಚಾಲಕರಾದ ವಿಲ್ಫ್ರೆಡ್ ಡಿಸೋಜಾ ಇವರುಗಳನ್ನೊಳಗೊಂಡ ಅಧ್ಯಕ್ಷೀಯ ಮಂಡಳಿಯನ್ನು ಆಯ್ಕೆ ಮಾಡಲಾಯಿತು. ಸಮಾವೇಶದ ಉದ್ಘಾಟನೆಯನ್ನು ವೇದಿಕೆಯಲ್ಲಿದ್ದ ವಿವಿಧ ಸಂಘಟನೆಗಳ ನಾಯಕರು ಕುಂಡದಲ್ಲಿದ್ದ ಗಿಡಕ್ಕೆ ನೀರು ಹಾಕುವ ಮೂಲಕ ನೇರವೇರಿಸಿದರು. ಆ ಮೇಲೆ ಜನಶಕ್ತಿ ಪ್ರಕಾಶನ ಪ್ರಕಟಿಸಿರುವ "ಸೌಹಾರ್ದ ಕರ್ನಾಟಕದತ್ತ ...." ಪುಸ್ತಕವನ್ನು ಸಿಪಿಐ(ಎಂ) ಪ್ರಧಾನ ಕಾರ್ಯದರ್ಶಿ ಕಾ. ಸೀತಾರಾಂ ಯೆಚುರಿ ಬಿಡಗಡೆ ಮಾಡಿದರು.

ಸಮಾವೇಶದ ಪ್ರಸ್ತಾವನೆಯನ್ನು ಸಿಪಿಐ(ಎಂ) ರಾಜ್ಯ ಕಾರ್ಯದರ್ಶಿ ಕಾ.ಜಿ.ವಿ.ಶ್ರೀರಾಮರೆಡ್ಡಿ ಮಾಡಿದರು. ಸಮಾವೇಶವನ್ನು ಉದ್ದೇಶಿಸಿ ಸಿಪಿಐ(ಎಂ) ಪ್ರಧಾನ ಕಾರ್ಯದರ್ಶಿ ಕಾ. ಸೀತಾರಾಂ ಯೆಚುರಿ, ಸಿಪಿಐ ಪ್ರಧಾನ ಕಾರ್ಯದರ್ಶಿ ಎಸ್. ಸುಧಾಕರ ರೆಡ್ಡಿ, ನಿಡುಮಾಮಿಡಿ ವೀರಭದ್ರ ಚನ್ನಮಲ್ಲ ಸ್ವಾಮಿಜಿ, ಕನ್ನಡ ಅಭಿವೃದ್ಧಿ ಪ್ರಾಧಿಕಾರದ ಅಧ್ಯಕ್ಷ ಪ್ರೊ. ಎಸ್.ಜಿ.ಸಿದ್ಧರಾಮಯ್ಯ, ಕರ್ನಾಟಕ ರೈತಸಂಘದ ಅಧ್ಯಕ್ಷರಾದ ಕೆ.ಎಸ್. ಪುಟ್ಟಣ್ಣಯ್ಯ, ಎಸ್.ಯು.ಸಿ.ಐ.(ಸಿ)ಯ ರಾಷ್ಟ್ರೀಯ ನಾಯಕ ಡಾ. ಕೆ. ರಾಧಾಕೃಷ್ಣ, ಕುವೆಂಪು ಭಾಷಾಭಾರತಿ ಪ್ರಾಧಿಕಾರದ ಅಧ್ಯಕ್ಷ ಡಾ. ಕೆ. ಮರುಳಸಿದ್ದಪ್ಪ, ಸಿಪಿಐ(ಎಂ.ಎಲ್.-ಲಿಬರೇಶನ್) ರಾಜ್ಯ ಕಾರ್ಯದರ್ಶಿ ಭಾರದ್ವಾಜ್, ದಲಿತ ನಾಯಕ ಕಲಾವಿದ ಗೊಲ್ಲರಹಳ್ಳಿ ಶಿವಪ್ರಸಾದ್, ಚಿಂತಕ ಕನ್ನಡ ಅಭಿವೃದ್ಧಿ ಪ್ರಾಧಿಕಾರದ ಮಾಜಿ ಅಧ್ಯಕ್ಷ ಪ್ರೊ. ಚಂದ್ರಶೇಖರ ಪಾಟೀಲ, ಚಿಂತಕರಾದ ಪ್ರೊ. ಜಿ.ಕೆ.ಗೋವಿಂದ ರಾವ್, ಡಾ. ಜಿ. ರಾಮಕೃಷ್ಣ, ಸುನ್ನಿ ಜಮಾತ್ ಕರ್ನಾಟಕದ ಅಧ್ಯಕ್ಷ ಅಮೀರ್ ಜಾನ್ ಖಾದಿ?, ಫಾದರ್ ಮನೋಹರ ಚಂದ್ರ ಪ್ರಸಾದ್, ಟಿಪ್ಪು ಸುಲ್ತಾನ್ ಸಂಯುಕ್ತ ರಂಗದ ಅಧ್ಯಕ್ಷ ಸರದಾರ್ ಅಹ್ಮದ್ ಖುರೇಷಿ, ಮಾನವ ಬಂಧುತ್ವ ವೇದಿಕೆಯ ಸಂಚಾಲಕರಾದ ವಿಲ್ಫ್ರೆಡ್ ಡಿಸೋಜಾ ಮುಂತಾದವರು ಸಮಾವೇಶವನ್ನು ಉದ್ದೇಶಿಸಿ ಮಾತನಾಡಿದರು.

ಎಸ್.ಯು.ಸಿ.ಐ.(ಸಿ)ನ ಡಾ. ಕೆ. ಉಮಾ ಅವರು ಸಮಾವೇಶದ ನಿರ್ಣಯವನ್ನು ಮಂಡಿಸಿದರು. ಕರ್ನಾಟಕ ರಾಜ್ಯ ರೈತ ಸಂಘದ ವೀರಗಂಗಯ್ಯ? ಸಮಾವೇಶದ ನಿರ್ಣಯವನ್ನು ಅನುಮೋದಿಸಿ ಮಾತನಾಡಿದರು. ಕಾ. ಕಾ.ವಿ.ಜೆ. ಕೆ.ನಾಯರ್ ಮಾತನಾಡಿ ಸಮಾವೇಶದ ನಿರ್ಣಯ ಸರ್ವಾನುಮತದಿಂದ ಅಂಗೀಕೃತವಾಗಿದೆ ಎಂದು ಘೋಷಿಸಿದರು.

ಸಮಾವೇಶದ ನಿರ್ಣಯದ ಪೂರ್ಣಪಾಠ ಮತ್ತು ಸಮಾವೇಶದಲ್ಲಿ ಆಡಿದ ಮಾತುಗಳ ಸಾರಾಂಶ ಮುಂದೆ ಇದೆ.





ಭಾವ ರಾಗ ತಾಳಗಳ ಸಂಗಮವೇ ಭಾರತ: ಯೆಚುರಿ

ಸಮಾವೇಶಕ್ಕೆ ಆಗಮಿಸಿದ್ದ ವಿವಿಧ ಸಂಘಟನೆಗಳ ನಾಯಕರನ್ನು ಸ್ವಾಗತಿಸಿ, ಪ್ರಾಸ್ತಾವಿಕವಾಗಿ ಮಾತನಾಡಿದ ಕಾ. ಜಿ.ವಿ. ಶ್ರೀರಾಮರೆಡ್ಡಿ ಅವರು ಕರ್ನಾಟಕದಲ್ಲಿ ಕೋಮುವಾದ ಶಕ್ತಿಗಳು ದಿನೇ ಹೆಚ್ಚೆಚ್ಚು ಆಕ್ರಮಣಕಾರಿಯಾಗುತ್ತಿರುವುದರ ಮತ್ತು ಅದರಿಂದ ರಾಜ್ಯದ ಜನತೆಯ ಶಾಂತಿ ಮತ್ತು ಸೌಹಾರ್ದಯುತ ಸಹಬಾಳುವೆಗೆ ಭಂಗ ತರುವುತ್ತಿರುವುದರ ಬಗ್ಗೆ ಗಮನ ಸೆಳೆದರು. ಗೋರಖಪುರ್ ನಲ್ಲಿ 10 ಲಕ್ಷ ವಿದ್ಯಾರ್ಥಿಗಳನ್ನು ಹಿಂದುತ್ವದ ಕಾಲಾಳುಗಳಾಗಿ ಪರಿವರ್ತಿಸುವ 3 ಹಂತದ ಬಿಜೆಪಿಯ ಯೋಜನೆ, ಅಬ್ಬರದ ಬೈಕ್ ರ್‍ಯಾಲಿಗಳೊಂದಿಗೆ 'ಮಂಗಳೂರು ಚಲೊ', 3800 ಆರೆಸೆಸ್ ಕಾರ್ಯಕರ್ತರು ವ್ಯಾಪಕವಾಗಿ ಕೋಮುಗಲಭೆ ಹಬ್ಬಿಸಲೆಂದೇ ರಾಜ್ಯಕ್ಕೆ ಬಂದಿರುವ ಉದಾಹರಣೆಗಳನ್ನು ಕೊಟ್ಟರು. ಚುನಾವಣೆ ಹತ್ತಿರ ಬರುತ್ತಿದ್ದಂತೆ ಈ ಆಕ್ರಮಣಕಾರಿತನ ಇನ್ನಷ್ಟು ಹೆಚ್ಚಲಿದೆ. ಹಿಂದೆ ಆರೆಸ್ಸೆಸ್ ಬಿಜೆಪಿಗೆ ರಾಜಕೀಯ ನಿರ್ದೇಶನಗಳನ್ನು ಗುಟ್ಟಾಗಿ ಕೊಡುತ್ತಿತ್ತು. ಬಿಜೆಪಿ ಉಸ್ತುವಾರಿ ಮತ್ತು ಕೇಂದ್ರ ಸಚಿವ ಜಾವಡೇಕರ್ ರಾಜ್ಯದ ಬಿಜೆಪಿ ನಾಯಕರ ಕಾರ್ಯಕರ್ತರ ಸಭೆಯಲ್ಲಿ ಬಹಿರಂಗವಾಗಿಯೇ ಇನ್ನು ಮೇಲೆ ಪ್ರತಿ ವಿಷಯ ನಡೆಗಳಲ್ಲಿ ಆರೆಸ್ಸೆಸ್ ನಿರ್ದೇಶನ ಮಾರ್ಗದರ್ಶನ ಪಡೆಬೇಕು ಎಂದು ಬಹಿರಂಗವಾಗಿಯೇ ಕಟ್ಟಪ್ಪಣೆ ಮಾಡಿದರು. ದೇಶದ ಪ್ರಜಾಪ್ರಭುತ್ವ, ಸಂಸ್ಕೃತಿ, ಸಂವಿಧಾನ ಎಲ್ಲವನ್ನೂ ನಾಶ ಮಾಡಹೊರಟಿರುವ ರಾಷ್ಟ್ರೀಯ ಸರ್ವನಾಶ ಸಂಘದ ವಿರುದ್ಧ ಐಕ್ಯ ಹೋರಾಟ ನಡೆಸಲು ಈ ಸಮಾವೇಶ ಸಂಘಟಿಸಲಾಗಿದೆಯೆಂದು ವಿವರಿಸಿದರು.

ಸಮಾವೇಶವನ್ನು ಉದ್ದೇಶಿಸಿ ಮಾತನಾಡಿದ ಸಿಪಿಐ(ಎಂ) ಪ್ರಧಾನ ಕಾರ್ಯದರ್ಶಿ ಸೀತಾರಾಂ ಯೆಚುರಿ ಭಾರತದಲ್ಲಿ ನಡೆದ ಪ್ರತಿಯೊಂದು ಕೋಮುದಂಗೆಯ ಕಾರಣಗಳನ್ನು ಕಂಡು ಹಿಡಿಯಲು ನೇಮಕವಾದ ನ್ಯಾಯಾಂಗ ತನಿಖಾ ಕಮಿಶನ್, ದಂಗೆಗಳ ಮೂಲಕಾರಣ ಆರೆಸ್ಸೆಸ್ ನತ್ತ ಬೆಟ್ಟು ಮಾಡಿದೆ. ನಮಗೆ ಪರಿಚಿತವಾದ ಭಾರತದ ಪರಿಕಲ್ಪನೆಗೆ ಆರೆಸ್ಸೆಸ್ ನಿಂದ ಅಪಾಯವಿದೆ ಎಂದರು. ಭಾರತದ ಪರಿಕಲ್ಪನೆ ಸ್ವಾತಂತ್ರ್ಯ ಚಳುವಳಿಯಲ್ಲಿ ಬೆಳೆದು ಬಂದಿದ್ದು ಧರ್ಮ, ಭಾಷೆ, ಸಂಸ್ಕೃತಿಗಳನ್ನು ಮೀರಿದ ಒಂದು ಭಾರತದ ಅಸ್ಮಿತೆಯಾಗಿ. ಈ ಅಸ್ಮಿತೆ ವಿಕಾಸವಾಗಿದ್ದು, ಭಾಷೆ ಧರ್ಮ ಸಂಸ್ಕೃತಿ ಮತ್ತು ಜಾತಿಗಳ ಅಸ್ಮಿತೆಗಳನ್ನು ಅಳಿಸಿ ಹಾಕಿಯಲ್ಲ, ಅವುಗಳ ಮೇಲೆ ಯಜಮಾನಿಕೆ ಸ್ಥಾಪಿಸಿಯೂ ಅಲ್ಲ. ಬಹು ಅಸ್ಮಿತೆಗಳನ್ನು ರಕ್ಷಿಸುತ್ತಾ, ಪೊರೆಯುತ್ತಾ ಬಂದಿದ್ದು ಅದು. 1920ರ ದಶಕದಿಂದಲೂ ಭಾರತದ ಸ್ವಾತಂತ್ರ್ಯ ಚಳುವಳಿಯಲ್ಲಿ ಮೂರು ಧಾರೆಗಳಿದ್ದವು. ಅವುಗಳಲ್ಲಿ ಕಾಂಗ್ರೆಸ್ ಮತ್ತು ಕಮ್ಯುನಿಸ್ಟ್ ಎರಡೂ ಧಾರೆಗಳಿಗೂ ಸ್ವತಂತ್ರ ಭಾರತ ಸೆಕ್ಯುಲರ್ ಪ್ರಜಾಪ್ರಭುತ್ವ ರಿಪಬ್ಲಿಕ್ ಆಗಬೇಕೆಂಬುದರ ಬಗ್ಗೆ ಸಹಮತ ಇತ್ತು. ಕಮ್ಯುನಿಸ್ಟ್ ಧಾರೆ ರಾಜಕೀಯ ಸ್ವಾತಂತ್ರ್ಯ ಜತೆ ಆರ್ಥಿಕ ಸ್ವಾತಂತ್ರ್ಯವೂ ಎಲ್ಲರಿಗೂ ದೊರೆಯಬೇಕು. ಆದ್ದರಿಂದ ಅದು ಮುಂದುವರೆದು ಸಮಾಜವಾದಿ ರಿಪಬ್ಲಿಕ್ ಆಗಬೇಕು ಎಂದು ವಾದಿಸುತ್ತಿತ್ತು. ಆದರೆ ಮೂರನೇ ಧಾರೆಯಾದ ಆರೆಸ್ಸೆಸ್ ಮತ್ತು ಆ ಮೇಲೆ ಮುಸ್ಲಿಂ ಲೀಗ್ ಧರ್ಮಾದಾರಿತ ದೇಶ (ಅನುಕ್ರಮವಾಗಿ ಹಿಂದೂ ಮತ್ತು ಇಸ್ಲಾಮಿಕ್ ರಾಷ್ಟ್ರ) ಆಗಬೇಕು ಎಂದು ವಾದಿಸಿದ್ದರು. ಇದರ ಫಲವಾಗಿಯೇ ದೇಶ ವಿಭಜನೆಯ ದುರಂತ ನಡೆಯಿತು. ಆದರೆ ಉಳಿದ ಭಾರತ ಸೆಕ್ಯುಲರ್ ಪ್ರಜಾಪ್ರಭುತ್ವ ರಿಪಬ್ಲಿಕ್ ಆಯಿತು. ಆರೆಸ್ಸೆಸ್ ತನ್ನ ಹಿಂದೂ ರಾಷ್ಟ್ರದ ಕನಸನ್ನು ಬಿಟ್ಟು ಕೊಡಲೇ ಇಲ್ಲ. ಅದೇ ಸಂಘರ್ಷ ➡

ಸೌಹಾರ್ದ ಪರಂಪರೆಯನ್ನು ಬಲಪಡಿಸಿರಿ – ಕೋಮುವಾದವನ್ನು ತೊಲಗಿಸಿರಿ ಜನವರಿ–30, 2018 ಹುತಾತ್ಮರ ದಿನದಂದು ಮಾನವ ಸರಪಳಿ ನಿರ್ಮಿಸಿ, ಪ್ರತಿಜ್ಞೆ ಸ್ವೀಕರಿಸಿರಿ ರಾಜ್ಯದ ಜನತೆಗೆ ಸಮಾವೇಶದ ಕರೆ.

ವಿವಿಧತೆಯಲ್ಲಿ ಏಕತೆಯನ್ನು ಮೆರೆಯುವ, ಭಾರತದ ಗಟ್ಟಿ ಸೌಹಾರ್ದ ಪರಂಪರೆಯನ್ನು ಹೊಂದಿದ ನಾಡು ಕರ್ನಾಟಕ. ಇಲ್ಲಿ ಹಿಂದುಗಳು, ಮುಸಲ್ಮಾನರು, ಕ್ರೈಸ್ತರು, ಜೈನರು, ಬೌದ್ಧರು, ಪಾರಸಿಗಳು, ಶರಣರು, ಸೂಫಿಗಳು, ಬುಡಕಟ್ಟು ಜನರು ಒಟ್ಟಾಗಿ ನೆಲೆಸಿದ್ದಾರೆ. ವಿಭಿನ್ನ ಆಚಾರ–ವಿಚಾರಗಳನ್ನು ಹೊಂದಿದ್ದರೂ ಸೌಹಾರ್ದ ಜೀವನ ನಡೆಸುತ್ತಿದ್ದಾರೆ. ಆದ್ದರಿಂದಲೇ, ನಮ್ಮ ನಾಡಗೀತೆ ಕರ್ನಾಟಕದ ಸೌಹಾರ್ದತೆಯನ್ನು, 'ಸರ್ವ ಜನಾಂಗದ ಶಾಂತಿಯ ತೋಟ'ವೆಂದು ಬಣ್ಣಿಸಿದೆ. ಆದರೇ ಇದೀಗ ಈ ಸೌಹಾರ್ದ ಬದುಕು, ಲೂಟಿಕೋರ ಪಟ್ಟಭದ್ರ ಹಿತಾಸಕ್ತಿಗಳ ಕೆಂಗಣ್ಣಿಗೆ ಗುರಿಯಾಗಿದೆ.

ಪರಿಣಾಮವಾಗಿ, ಕರ್ನಾಟಕದ ಮುಖ್ಯವಾಗಿ, ಕರಾವಳಿಯ ಪ್ರದೇಶವೀಗ ಈ ಸೌಹಾರ್ದತೆಯನ್ನು ಹಾಳು ಗೆಡಹುವ ಮತಾಂಧ ಶಕ್ತಿಗಳ ಪಾರಮ್ಯಕ್ಕೆ ಸಿಲುಕುವಂತಾಗಿದೆ. ಹಿಂದೂ ಹಾಗೂ ಮುಸ್ಲಿಂ ಮತಾಂಧರು ಪರಸ್ಪರರನ್ನು ತೋರಿಸಿ ಅಪಾಯಕಾರಿಯಾಗಿ ಬೆಳೆದಿದ್ದಾರೆ. ಸೌಹಾರ್ದತೆಯನ್ನು ಮೆರೆದ ರಾಜ್ಯದ ಹಲವು ಸಾಂಸ್ಕೃತಿಕ ಕೇಂದ್ರಗಳೀಗ ಮತಾಂಧತೆಯ ಕಬಂಧ ಬಾಹುಗಳಿಗೆ ಸಿಲುಕುವ ಅಪಾಯ ಬೆಳೆದಿದೆ. ಏಕ ರೀತಿಯ ಮತಾಂಧ ಸಂಸ್ಕೃತಿಯನ್ನು ಪ್ರತಿಪಾದಿಸಲಾಗುತ್ತಿದೆ. ವಿಭಿನ್ನ ಆಚಾರ–ವಿಚಾರಗಳುಳ್ಳ ಸೌಹಾರ್ದ ಪರಂಪರೆಯ ಮೇಲೆ, ಜನತೆಯ ಪ್ರಜಾಸತ್ತಾತ್ಮಕ ಹಕ್ಕುಗಳ ಮೇಲೆ, ಸ್ವತಃ ಜನತೆಯ ಮೇಲೆ ನೇರ ದಾಳಿಗಳನ್ನು ಸಂಘಟಿಸಲಾಗುತ್ತಿದೆ.

ರೈತರು, ಕೂಲಿಕಾರರು, ಕಸುಬುದಾರರು, ಕಾರ್ಮಿಕರು, ವಿದ್ಯಾರ್ಥಿಗಳು, ಯುವಜನರು, ದಲಿತರು, ಹಿಂದುಳಿದ ಜನಸಮುದಾಯಗಳ ಬಡವರು, ಅಲ್ಪಸಂಖ್ಯಾತರು, ಮಹಿಳೆಯರ ನಡುವೆ ಬೆಳೆಯುತ್ತಿರುವ ತೀವ್ರ ಅಸಂತೃಪ್ತಿ ಹಾಗೂ ಎಲ್ಲ ಭೇದಗಳನ್ನು ಮರೆತ ಅವರ ಪ್ರತಿರೋಧವನ್ನು ಹಾದಿ ತಪ್ಪಿಸಿ, ಜನತೆಯ ಗಮನವನ್ನು ನಿಜವಾದ ಸಮಸ್ಯೆಗಳಿಂದ ಬೇರೆಡೆ ಸೆಳೆಯುವ ಮತ್ತು ಅದಕ್ಕಾಗಿ ಜನತೆಯ ಸೌಹಾರ್ದ ಬದುಕಿನ ಮೇಲೆ ತಮ್ಮ ದಾಳಿಯನ್ನು ಕೇಂದ್ರೀಕರಿಸಿ ಒಡೆದಾಳುವ ಸಂಚುಗಳು ಇದರ ಹಿಂದೆ ಅಡಗಿವೆ.

ಕಳೆದ ಲೋಕಸಭಾ ಚುನಾವಣೆಯಲ್ಲಿ ಆರ್‌ಎಸ್‌ಎಸ್ ನೇತೃತ್ವದ ಬಿಜೆಪಿಗೆ ಪೂರ್ಣ ಬಹುಮತ ಬಂದು, ನರೇಂದ್ರ ಮೋದಿ ನೇತೃತ್ವದ ಎನ್‌ಡಿಎ ಸರಕಾರ ರೂಪುಗೊಂಡ ನಂತರ, ಈ ಪ್ರಕ್ರಿಯೆಯು ಮತ್ತಷ್ಟು ಬಲಗೊಂಡಿದೆ. ದೇಶದಾದ್ಯಂತ ಗೋರಕ್ಷಕಪಡೆ, ಮುಂತಾದ ಕ್ರಿಮಿನಲ್ ಗ್ಯಾಂಗುಗಳು ಅಲ್ಪಸಂಖ್ಯಾತರು, ದಲಿತರು, ಬುದ್ಧಿಜೀವಿಗಳು, ಪ್ರಗತಿಪರರು, ಎಡ ವಿಚಾರವಾದಿಗಳ ಮೇಲೆ ದಾಳಿ ನಡೆಸುತ್ತಿವೆ. ಈಚೆಗೆ ಈ ಸರಕಾರ ಹೊರಡಿಸಿದ ಹತ್ಯೆಗಾಗಿ ಜಾನುವಾರು ಮಾರಾಟ ನಿಷೇಧದ ಆದೇಶವು, ದೇಶದ ಎಲ್ಲ ಜನ ಸಮುದಾಯಗಳ ಮೇಲೆ ನಡೆಸಿದ ಭಾರೀ ದಾಳಿಯ ಒಡೆದಾಳುವ ಸಂಚಿನ ಮುಂದುವರಿಕೆಯಾಗಿದೆ.

ಸೌಹಾರ್ದತೆಗೆ ಭಂಗ ತರುವುದರ ವಿರುದ್ಧ ಚಳುವಳಿಯಲ್ಲಿ ತೊಡಗಿರುವ ಮತ್ತು ಸೌಹಾರ್ದತೆಯನ್ನು ಬಲ ಪಡಿಸುವ ಆಶಯವನ್ನು ಹೊಂದಿದ ಎಲ್ಲಾ ಸೌಹಾರ್ದಪರ ಜನತೆಯನ್ನು ಒಂದು ವೇದಿಕೆಗೆ ತರುವ ಮೂಲಕ ಈ ಅಪಾಯವನ್ನು ಎದುರಿಸಬೇಕಾಗಿದೆ.

ಆದ್ದರಿಂದ,

ಈ ಸಮಾವೇಶವು ಈ ಕೆಳಕಂಡ ಹಕ್ಕೊತ್ತಾಯಗಳನ್ನು ಮಂಡಿಸುತ್ತದೆ.


1. ಹತ್ಯೆಗಾಗಿ ಜಾನುವಾರು ಮಾರಾಟ ನಿಷೇಧದ ಆದೇಶವನ್ನು ಹಿಂಪಡೆಯಬೇಕು.
2. ಡಾ. ಎಂಎಂ ಕಲಬುರ್ಗಿಯವರ ಹತ್ಯೆಯಲ್ಲಿ ಪಾಲ್ಗೊಂಡವರನ್ನು ತಕ್ಷಣ ಬಂಧಿಸಬೇಕು.
3. ಗೋರಕ್ಷಕ ಮುಂತಾದ ಮತಾಂಧ ಕ್ರಿಮಿನಲ್ ಗ್ಯಾಂಗುಗಳನ್ನು ನಿಷೇಧಿಸಬೇಕು.
4. ಬಾಬಾ ಬುಡೆನ್ ಗಿರಿಯ ಸೂಫಿ ಪರಂಪರೆಯನ್ನು ಸಂರಕ್ಷಿಸಬೇಕು.


ಅದೇ ರೀತಿ, ಈ ಕೆಳಕಂಡ ಕಾರ್ಯಕ್ರಮಗಳನ್ನು ಸಂಘಟಿಸಲು ನಿರ್ಧರಿಸುತ್ತದೆ.

ರಾಜ್ಯದ ಸೌಹಾರ್ದ ಪರಂಪರೆಯನ್ನು ಎತ್ತಿ ಹಿಡಿಯಲು ಮತ್ತು ಅದನ್ನು ವ್ಯಾಪಕವಾಗಿ ಬಲಗೊಳಿಸಲು ಹಾಗೂ ಎಲ್ಲ ರೀತಿಯ ಮತಾಂಧತೆಯನ್ನು ಧಿಕ್ಕರಿಸಲು, ಇದೇ ಮತಾಂಧರಿಂದ ಹತ್ಯೆಗೊಳಗಾದ ಸ್ವಾತಂತ್ರ್ಯ ನೇತಾರ ಮಹಾತ್ಮ ಗಾಂಧಿಯವರ ಹುತಾತ್ಮರಾದ ದಿನ ಜನವರಿ 30, 2018ರಂದು ರಾಜ್ಯದ ಎಲ್ಲಾ ಜನತೆ, ರಾಜ್ಯದ ಉತ್ತರದ ತುದಿಯಲ್ಲಿರುವ ಶರಣರ ನಾಡಾದ ಬಸವಕಲ್ಯಾಣದಿಂದ ದಕ್ಷಿಣದ ಚಾಮರಾಜನಗರದ ಮಲೆಮಹದೇಶ್ವರನವರೆಗೆ ಮತ್ತು ಬೆಳಗಾವಿಯಿಂದ ಚಳ್ಳಕೆರೆಯವರೆಗೆ, ಅದೇರೀತಿ ಕರಾವಳಿಯ ಕಾರವಾರದಿಂದ ಮಡಿಕೇರಿಯವರೆಗೆ ಸುಮಾರು 2,500 ಕಿ.ಮೀ ಉದ್ದದ ಬೃಹತ್ ಅಖಂಡ ಮಾನವ ಸರಪಳಿಯನ್ನು ನಿರ್ಮಿಸಿ, ಸೌಹಾರ್ದತೆಯನ್ನು ಸಂರಕ್ಷಿಸುವ ಮತ್ತು ಮತಾಂಧತೆಯನ್ನು ತಿರಸ್ಕರಿಸುವ ಪ್ರತಿಜ್ಞಾ ವಿಧಿಯನ್ನು ಸ್ವೀಕರಿಸಲು ಈ ಸಮಾವೇಶ ಕರೆ ನೀಡುತ್ತದೆ. ಮಾತ್ರವಲ್ಲ, ಈ ಕಾರ್ಯಕ್ರಮದ ಯಶಸ್ವಿಗೆ ಅಗತ್ಯವಾದ ಎಲ್ಲ ರೀತಿಯ ನೆರವನ್ನು ನೀಡುವಂತೆ ವಿನಂತಿಸುತ್ತದೆ.

ಈ ಸಮಾವೇಶವು ರಾಜ್ಯದ ಸೌಹಾರ್ದ ಪರಂಪರೆಯನ್ನು ರಕ್ಷಿಸಿ ಮುನ್ನಡೆಸಲು ಮತ್ತು ಜನವರಿ 30, 2018 ರ ಬೃಹತ್ ಮಾನವ ಸರಪಳಿ ಕಾರ್ಯಕ್ರಮವನ್ನು ಯಶಸ್ವಿಯಾಗಿ ಸಂಘಟಿಸಲು ರಾಜ್ಯ ಸಂಚಾಲನಾ ಸಮಿತಿಯನ್ನು ರಚಿಸಿಕೊಳ್ಳಲು ಎಲ್ಲಾ ಸಮಾನ ಮನಸ್ಕ ಸಂಘಗಳ ಮುಖಂಡತ್ವಕ್ಕೆ ಅಧಿಕಾರವನ್ನು ನೀಡುತ್ತದೆ.

ಮಾನವ ಸರಪಳಿ ಹಾದು ಹೋಗುವ ಎಲ್ಲಾ ಜಿಲ್ಲೆಗಳಲ್ಲೂ ಅದರ ಯಶಸ್ವಿಗಾಗಿ ಜಿಲ್ಲಾ/ತಾಲೂಕಾ/ಗ್ರಾಮ/ವಾರ್ಡ್/ವಿವಿಧ ಸಂಸ್ಥೆಗಳ ಸಮಾವೇಶಗಳನ್ನು ಸಂಘಟಿಸಲು ಮತ್ತು ಆಯಾ ಹಂತದಲ್ಲಿ ಅಗತ್ಯತೆಯ ಆಧಾರದಲ್ಲಿ ಸ್ಥಳೀಯ ಸಂಚಾಲನಾ ಸಮಿತಿಗಳನ್ನು ರಚಿಸಲು ರಾಜ್ಯ ಸಂಚಾಲನಾ ಸಮಿತಿಗೆ ಅಧಿಕಾರವನ್ನು ನೀಡುತ್ತದೆ.











ಈಗಲೂ ಮುಂದುವರೆದಿದೆ. ಈಗ ಕೇಂದ್ರದಲ್ಲಿ ಕೇವಲ ಶೇ. 33 ಮತಗಳ (ಅವರೂ ಹಿಂದೂ ರಾಷ್ಟ್ರಕ್ಕೆ ಸಮ್ಮತಿ ಕೊಟ್ಟವರಲ್ಲ. "ಅಭಿವೃದ್ಧಿ" ಮತ್ತು "ಅಚ್ಛೇ ದಿನ್" ಘೋಷಣೆಗಳಿಗೆ ಮಾರುಹೋದವರು) ಆಧಾರದ ಮೇಲೆ ಅಧಿಕಾರ ಪಡೆದ ಅದು ಉಳಿದ ಶೇ. 67 ಜನತೆಯ ಮೇಲೆ ಹಿಂದೂ ರಾಷ್ಟ್ರದ ಕನಸನ್ನು ಹೇರುತ್ತಿದೆ ಎಂದರು ಕಾ. ಯೆಚುರಿ.

ಭಾರತದಲ್ಲಿ ಪ್ರಜಾಪ್ರಭುತ್ವ ಮತ್ತು ಜಾತ್ಯತೀತತೆಯನ್ನು ಪರಸ್ಪರ ಬೇರ್ಪಡಿಸಲು ಸಾಧ್ಯವಿಲ್ಲ. ಭಾರತೀಯತೆಯ ಅಸ್ಮಿತೆ ನಮ್ಮ ವೈವಿಧ್ಯತೆಯ ರಕ್ಷಣೆ, ಪ್ರೋತ್ಸಾಹದಲ್ಲಿಯಿದೆಯೇ ಹೊರತು ಮತ್ತೆಲ್ಲೂ ಇಲ್ಲ. ಈ ವೈವಿಧ್ಯತೆಯೇ ಭಾರತದ ಪರಿಕಲ್ಪನೆಯ ಜೀವಾಳ. ಭಾವ ರಾಗ ತಾಳಗಳ ಸಂಗಮವೇ ಭಾರತ. ಸಂಸ್ಕೃತ ಕಲಿತು ಉಪನಿಷತ್ತುಗಳನ್ನು ಯುರೋಪ್ ಮತ್ತು ಇಡೀ ಜಗತ್ತಿಗೆ ಪರಿಚಯಿಸಿದ ದಾರಾಶಿಕು, ಕರ್ನಾಟಕಕ್ಕೆ ಕಾಫಿ ಪರಿಚಯಿಸಿದ ಬಾಬಾ ಬುಡನ್ ಸೂಫಿ ಸಂತ ಸೇರಿದಂತೆ ಹಲವರು ಭಾರತೀಯ ಸಂಸ್ಕೃತಿಯ ಅವಿಭಾಜ್ಯ ಬಾಗವಾಗಿದ್ದಾರೆ. ಇಂತಹ ಹಲವು ಸಮ್ಮಿಳನವು ಭಾರತೀಯ ಸಂಸ್ಕೃತಿಯನ್ನು ರೊಪಿಸಿದೆ. ಸಂಘಿಗಳು ಇಂತಹ ದಾರಾಶಿಕುನನ್ನು "ಬಾಬರನ ಸಂತಾನ" ಎಂದು ಮೂದಲಿಸುತ್ತಾರೆ. ಬಾಬಾ ಬುಡನ್ ಸೂಫಿ ಪರಂಪರೆಯನ್ನು ಅಳಿಸಿ ಹಾಕಲು ಹೊರಟಿದ್ದಾರೆ. ಭಾರತೀಯ ರಾಷ್ಟ್ರೀಯತೆ ವಿರುದ್ಧ ಹಿಂದುತ್ವದ ರಾಷ್ಟ್ರೀಯತೆ ಜಯಗಳಿಸಲು ಅವಕಾಶ ನೀಡಬಾರದು. ಇದಕ್ಕಾಗಿ ಎಡ ಪ್ರಜಾಸತ್ತಾತ್ಮಕ ಶಕ್ತಿಗಳು ಒಂದಾಗಿ ಹೋರಾಡಲು ಸಮಾವೇಶ ಸಂಘಟಿಸಿದ ಸಂಘಟನೆಗಳನ್ನು ಅವರು ಅಭಿನಂದಿಸಿದರು.

ನಿಡುಮಾಮಿಡಿ ಸ್ವಾಮಿಜಿಯವರು ಮಾತನಾಡುತ್ತಾ ಬಹುಸಂಖ್ಯಾತರಿರುವ ಎಡ–ಪ್ರಜಾಸತ್ತಾತ್ಮಕ ಶಕ್ತಿಗಳ ಅನೈಕ್ಯತೆಯೇ ಕೋಮುವಾದಿಗಳಿಗೆ ಅಧಿಕಾರ ಹಿಡಿಯಲು ಕಾರಣ. ಅವರು ಮಾಡಹೊರಟಿರುವುದು ಕಾಂಗ್ರೆಸ್–ಮುಕ್ತ ಭಾರತ ಎಂದು ಹೇಳುತ್ತಾರೆ. ಅವರು ದಲಿತ–ಮುಕ್ತ, ಬುದ್ಧ–ಮುಕ್ತ, ಮುಸ್ಲಿಂ–ಮುಕ್ತ, ಕ್ರಿಶ್ಚಿಯನ್–ಮುಕ್ತ ಭಾರತ ಮಾಡಹೊರಟಿದ್ದಾರೆ. ಹಿಂದುತ್ವಕ್ಕೂ ಧರ್ಮಕ್ಕೂ ಯಾವುದೇ ಸಂಬಂಧ ಇಲ್ಲ. ನಮ್ಮ ರಾಷ್ಟ್ರೀಯತೆ ಯಾವುದೇ ಧರ್ಮದ ಮೇಲೆ ಆಧಾರಿತವಾದದ್ದಲ್ಲ. ನಮ್ಮ ರಾಷ್ಟ್ರೀಯತೆ ಸಂವಿಧಾನ ಆಶಯ ಆಧಾರಿತ. ನಮ್ಮ ಧರ್ಮ ದಯೆ ತೋರುವಂತಹುದು, ಭಯ ಹುಟ್ಟಿಸುವಂತಹುದು. ಕೂಡಿ ಬಾಳುವಂತಹುದು, ಹಂಚಿ ತಿನ್ನುವಂತಹುದು, ಎಂದರು. ಪ್ರಗತಿಪರ ಸ್ವಾಮಿಜಿಗಳು ಹಮ್ಮಿಕೊಂಡಿರುವ "ಮೌಢ್ಯ–ಮುಕ್ತ ಕರ್ನಾಟಕ"ಕ್ಕೆ ಸತ್ಯಾಗ್ರಹದಲ್ಲಿ ಎಲ್ಲರೂ ಪಾಲುಗೊಳ್ಳಬೇಕು. ಕರ್ನಾಟಕದಲ್ಲಿ ಕೋಮುವಾದಿಗಳು ಅಧಿಕಾರ ಹಿಡಿಯದಂತೆ ಎಡ–ಪ್ರಜಾಸತ್ತಾತ್ಮಕ ಶಕ್ತಿಗಳು ಐಕ್ಯ ಕ್ರಮ ಕೈಗೊಳ್ಳಬೇಕೆಂದು ಮನವಿ ಮಾಡಿದರು.

ಸಿಪಿಐ ಪ್ರಧಾನ ಕಾರ್ಯದರ್ಶಿ ಎಸ್ ಸುಧಾಕರ ರೆಡ್ಡಿ ಮಾತನಾಡುತ್ತಾ, ಹಿಂದುತ್ವವು ಭಾರತೀಯ ಸಮಗ್ರತೆ ಗೆ ಬಹು ದೊಡ್ಡ ಅಪಾಯವಾಗಿದೆ. ಅವರ ಅಸಹಿಷ್ಣುತೆ ಅಮರ್ತ್ಯ ಸೇನ್ ರ ಮೇಲಿನ

ಪುಟ 11 ಕ್ಕೆ

ಎಲ್ಲಾ ಅಂಗವಿಕಲರಿಗೂ ಶಿಕ್ಷಣ, ಉದ್ಯೋಗ, ಘನತೆಯ ಜೀವನಕ್ಕಾಗಿ

ಕರ್ನಾಟಕ ರಾಜ್ಯ ಅಂಗವಿಕಲರ ಹಾಗೂ ಪಾಲಕರ 2ನೇ ರಾಜ್ಯ ಸಮ್ಮೇಳನ

ಅಂಗವೈಕಲ್ಯ ಸಾಧನೆಗೆ ಅಡ್ಡಿಯಾಗಬಾರದು : ಕುಶಾಲ ದಾಸ್



ಸಮಾಜದ ಎಲ್ಲಾ ವರ್ಗದ ಜನ ತಮ್ಮ ಹಕ್ಕುಗಳು ಮತ್ತು ಬೇಡಿಕೆಗಳಿಗಾಗಿ ಬಲಾಢ್ಯವಾದ ಸಂಘಟನೆಗಳನ್ನು ಮಾಡಿಕೊಂಡು ಈ ವ್ಯವಸ್ಥೆ ಮತ್ತು ಸರ್ಕಾರದ ವಿರುದ್ಧ ಹೋರಾಟ ನಡೆಸುತ್ತಿರುವ ವಿಚಾರವನ್ನು ನಾವು ಪ್ರತಿನಿತ್ಯ ಕಾಣುತ್ತಿದ್ದೇವೆ. ಸಮಾಜದ ಸಕಾಲಾಂಗ ವರ್ಗದ ಜನ ತಮ್ಮ ಬದುಕಿನ ಬಗ್ಗೆ ವ್ಯವಸ್ಥಿತವಾದ ಹೋರಾಟ ನಡೆಸುತ್ತಿರುವಾಗ ವ್ಯವಸ್ಥೆಯ ಮುಂದೆ ಬಡ ಅಂಗವಿಕಲರ ಸಂಘಟನೆಯ ಹೋರಾಟ ಶೂನ್ಯವಾಗಿದೆ.

ಮೂಲಭೂತ ಸೌಕರ್ಯಗಳಿಂದ ವಂಚಿತರಾಗಿರುವ ಗ್ರಾಮಾಂತರ ಪ್ರದೇಶದ ಜನ ಬಡತನ, ಅನಕ್ಷರತೆ, ಅಸಹಾಯಕತೆ, ಹಸಿವು ಇವೆಲ್ಲರೊಂದಿಗೆ ಮಾನವ ಕುಲವನ್ನು ನಡುಗಿಸುವಂತಹ ಅಂಗವಿಕಲತೆ ಎಂಬ ಮಾರಕ ರೋಗಕ್ಕೆ ಬಲಿಯಾಗಿ ಜೀವನ ನಡೆಸಲು ಕ್ಷಣಕ್ಷಣವು ಸತ್ತು ಬದುಕುತಿರುವ ಅಂಗವಿಕಲರ ರಕ್ಷಣೆಗಾಗಿ ಹೋರಾಡಲು ಸಂಘಟನೆಯೊಂದು ಅತೀ ಅಗತ್ಯವಾಗಿದೆ. ಅಂಗವಿಕಲರಾದ ನಾವು ನಮ್ಮ ಸಮಸ್ಯೆಗಳಿಗೆ ಪರಿಹಾರ ಮಾರ್ಗವನ್ನು ನಾವೇ ಕಂಡುಕೊಂಡು ಆ ಮಾರ್ಗದ ಮುಖಾಂತರ ವ್ಯವಸ್ಥಿತ ಹೋರಾಟವನ್ನು ನಡೆಸಿ, ಸಫಲತೆಯನ್ನು ಪಡೆಯಬೇಕಾಗಿದೆ.

ಅಂಗವಿಕಲರಲ್ಲಿ ಅರ್ಹತೆಯನ್ನು ಹುಡುಕುವುದಕ್ಕಿಂತ ಅಂಗವಿಕಲತೆಯೇ ಒಂದು ಅರ್ಹತೆ ಎಂಬ ಅಳತೆಗೋಲಿನ ಮೇಲೆ ಸೌಲಭ್ಯಗಳನ್ನು ಕಡ್ಡಾಯವಾಗಿ ಪಡೆಯುವಂತಾಗಬೇಕು. ಅಸಹಾಯಕರಾದ ಎಲ್ಲಾ ಅಂಗವಿಕಲರನ್ನು ರಕ್ಷಣೆ ಮಾಡುವುದರೊಂದಿಗೆ ಸರ್ಕಾರದಿಂದ ಸಿಗುವ ಸೌಲಭ್ಯಗಳನ್ನು ವ್ಯವಸ್ಥಿತವಾಗಿ ಒದಗಿಸಿಕೊಡುವುದಕ್ಕೆ ಸರ್ಕಾರದೊಂದಿಗೆ ಚರ್ಚಿಸಿ, ಬೇಡಿಕೆಗಳನ್ನು ಅನುಷ್ಠಾನಕ್ಕಾಗಿ ಸರ್ಕಾರದೊಂದಿಗೆ ನಮ್ಮ ಸಂಘಟನೆ ಒತ್ತಾಯಿಸಬೇಕಾಗಿದೆ.

ಈ ಹಿನ್ನೆಲೆಯಲ್ಲಿ ಅಂಗವಿಕಲರ ಹಕ್ಕುಗಳ ರಾಷ್ಟ್ರೀಯ ವೇದಿಕೆ (NPRD) ನವದೆಹಲಿಗೆ ಸಂಯೋಜಿಸಲ್ಪಟ್ಟ ಕರ್ನಾಟಕ ರಾಜ್ಯ ಅಂಗವಿಕಲರ ಹಾಗೂ ಪಾಲಕರ ಒಕ್ಕೂಟದ 2ನೇ ರಾಜ್ಯ ಸಮ್ಮೇಳನ 30 ಮತ್ತು 31 ಆಗೋಸ್ಟ್ 2017 ರಂದು ಐತಿಹಾಸಿಕ ಪ್ರವಾಸಿ ತಾಣ ವಿಜಯಪುರ ನಗರದ ನೀಲಕಂಠೇಶ್ವರ ಮಂಗಲ ಕಾರ್ಯಾಲಯ ದಿವಂಗತ ಎಂ.ಎಸ್. ಖೇಡ ವೇದಿಕೆಯಲ್ಲಿ ಯಶಸ್ವಿಯಾಗಿ ಜರುಗಿತ್ತು. ಧ್ವಜಾ ರೋಹಣ ಮಾಡಿ ಸಮ್ಮೇಳನ ಉದ್ಘಾಟಿಸಿದ ಬಿ.ಎಲ್.ಡಿ.ಇ. ವೈದ್ಯಕೀಯ ಕಾಲೇಜು ಉಪನ್ಯಾಸಕ ಕುಶಾಲ ಕೆ. ದಾಸ ಮಾತನಾಡಿ ಅಂಗವೈಕಲ್ಯ ಸಾಧನೆಗೆ ಅಡ್ಡಿಯಾಗಬಾರದು ಅಂಗವಿಕಲರ ಸಾಧನೆಗೆ ಸಮಾಜದ ಎಲ್ಲೆಡೆಯಿಂದ ಅವಕಾಶ ಮತ್ತು ಪ್ರೋತ್ಸಾಹ ದೊರೆಯುವಂತಾಗಬೇಕು. ಅಂಗವೈಕಲ್ಯವಾದಾಗ ನನ್ನ ತಾಯಿ ನನ್ನ ಸಾಧನೆಗೆ ಎಲ್ಲಾ ರೀತಿಯ ಅವಕಾಶ ಕಲ್ಪಿಸಿದ್ದರು. ಇದರಿಂದಾಗಿ ನನ್ನ ಜೀವನದಲ್ಲಿ ಕನಿಷ್ಠ ಸಾಧನೆ ಮಾಡಲು ಸಾಧ್ಯವಾಗಿದೆ. ಇಂದಿಗೂ ಅಂಗವಿಕಲರು ಅನೇಕ ಸಮಸ್ಯೆಗಳನ್ನು ಎದುರಿಸುತ್ತಿದ್ದಾರೆ. ಹಲವು ಬಾರಿ ಕುಟುಂಬದ ಬೆಂಬಲ ಮತ್ತು ಸಹಕಾರ ಸಿಗುವುದಿಲ್ಲ. ಸಮಾಜದಲ್ಲಿ ಅನೇಕ ಅಡೆತಡೆಗಳನ್ನು ಎದುರಿಸಬೇಕಾಗುತ್ತದೆ. ಇದು ಗಮನದಲ್ಲಿಟ್ಟುಕೊಂಡು ಅಂಗವಿಕಲರು ಅಡೆತಡೆಗಳನ್ನು ಎದುರಿಸಬೇಕು ಎಂದು ಹೇಳಿದರು.

ಕರ್ನಾಟಕ ರಾಜ್ಯ ಅಂಗವಿಕಲರ ಹಾಗೂ ಪಾಲಕರ ಒಕ್ಕೂಟದ ರಾಜ್ಯ ಅಧ್ಯಕ್ಷ ಜಿ.ಎನ್. ನಾಗರಾಜ ಸಮ್ಮೇಳನದಲ್ಲಿ ಪ್ರಾಸ್ತಾವಿಕವಾಗಿ ಮಾತನಾಡಿದರು, ಅಂಗವಿಕಲರು ಇಂದು ಸಂಕಷ್ಟದ ಪರಿಸ್ಥಿತಿಯಲ್ಲಿ ಜೀವನ ಸಾಗಿಸುತ್ತಿದ್ದಾರೆ. ಶಿಕ್ಷಣ ಮತ್ತು ಉದ್ಯೋಗ ಮಾತ್ರವೇ ಅಂಗವಿಕಲರನ್ನು ಘನತೆಯಿಂದ ಜೀವನ ನಡೆಸುವಂತೆ ಮಾಡುತ್ತದೆ. ಆದರೆ ಅಂಗವಿಕಲರು ಶಿಕ್ಷಣ ಪಡೆಯಲು ಅನೇಕ ಸಮಸ್ಯೆಗಳನ್ನು ಎದುರಿಸುತ್ತಿದ್ದಾರೆ. ಇವರಿಗೆ ಅಡೆ ತಡೆ ನಿವಾರಣೆಯಾಗುವಂತಹ ಬೇಕಾದ ಸೌಲಭ್ಯಗಳು ಇಲ್ಲ. ಉದ್ಯೋಗ ಕಷ್ಟದ ಪರಿಸ್ಥಿತಿಯಲ್ಲಿದೆ. ಸರ್ಕಾರಿ ಉದ್ಯೋಗವನ್ನೇ ಅವಲಂಭಿಸಬೇಕಾದ ಪರಿಸ್ಥಿತಿ ಇದೆ. ಅಂಗವಿಕಲರ ಹಕ್ಕುಗಳ ನೂತನ ಕಾಯ್ದೆ ನಮ್ಮ ಒಕ್ಕೂಟ ಮತ್ತು ಸಂಘ ಸಂಸ್ಥೆಗಳ ನಿರಂತರ ಹೋರಾಟದ ಪ್ರಯತ್ನದ ಫಲವಾಗಿದೆ. ಈ ಕಾಯಿದೆಯನ್ನು ಸಮರ್ಪಕವಾಗಿ ಜ್ಯಾರಿ ಮಾಡುವ ಕೆಲಸ ನಮ್ಮ ಸಂಘಟನೆ ಮೇಲಿದೆ ಎಂದು ಜಿ.ಎನ್. ಹೇಳಿದರು.

ಸಮ್ಮೇಳನದ ಉದ್ಘಟನಾ ಸಮಾರಂಭದ ಅಧ್ಯಕ್ಷತೆಯನ್ನು BDPHW ಸಂಸ್ಥೆಯ ಮುಖ್ಯಸ್ಥ ಹಾಗೂ ಸ್ವಾಗತ ಸಮಿತಿಯ ಅಧ್ಯಕ್ಷರಾದ ವಿನೋದ್ ಎಂ. ಖೇಡ ವಹಿಸಿದ್ದರು. ಮಕ್ಕಳ ಸಾಹಿತಿ ಶರಣಪ್ಪ ಕಂಚ್ಯಾಣಿ ಹಿರಿಯ ನ್ಯಾಯವಾದಿ ರಘನಂದನ್ ಕೆ. ಪಾಂಡೆ, ನಿಮಿಷ ಆಚಾರ್ಯ ಬೆನ್ನುಹುರಿ ಚಿಕಿತ್ಸಾ ಸಂಘದ ಅದ–ಕ್ಷ ರಾಮದಾಸ ಎಂ.ನಾಯಕ್, ಸಭೀಯಾ ಬೇಗಂ ಮರ್ಥುರ, ಒಕ್ಕೂಟದ ರಾಜ್ಯ ಪ್ರಧಾನ ಕಾರ್ಯದರ್ಶಿ ರಂಗಪ್ಪ ದಾಸರು, ಮುಖಂಡರಾದ ಅಶೋಕ ಅ. ವಾಲೀಕಾರ, ಸುರೇಶ್ ಚೌಹ್ವಾಣ, ಭೀಮನ ಗೌಡ ಪಾಟೀಲ್, ಮಲ್ಲಿಕಾರ್ಜುನ ಬ. ಉಮಾರಾಣಿ, ಸಂತೋಷ ಮ. ಬಮ್ಮನಹಳ್ಳಿ, ಪರಶುರಾಮ ಗುನ್ನಾಪುರ, ಮೊದಲಾದವರು ವೇದಿಕೆಯಲ್ಲಿ ಉಪಸ್ಥಿತರಿದ್ದರು. ವಿಜಯಶ್ರೀ ಎಸ್. ತುಂಗಾ ಕಾರ್ಯಕ್ರಮ ನಿರೂಪಿಸಿದರು. ಸಮ್ಮೇಳನದ ಉದ್ಘಾಟನಾ ಸಮಾರಂಭದ ಪೂರ್ವದಲ್ಲಿ ವಿಜಯಪುರ ನಗರದ ಪ್ರಮುಖ ಬೀದಿಯಲ್ಲಿ ಅಂಗವಿಕಲರ ಹಾಗೂ ಪಾಲಕರ ವರ್ಣರಂಜಿತ ಬೃಹತ್ ರ್‍ಯಾಲಿ ನಡೆಸಲಾಯಿತು.


ಅಂಗವಿಕಲರ ಹಕ್ಕುಗಳ ರಾಷ್ಟ್ರೀಯ ವೇದಿಕೆ ಎನ್.ಪಿ. ಆರ್.ಡಿ.ಆರ್. 2ನೇ ರಾಷ್ಟ್ರ ಸಮ್ಮೇಳನವು ದಿನಾಂಕ : 16 ಮತ್ತು 17 ಸೆಪ್ಟೆಂಬರ್ 2017 ರಂದು ತಮಿಳು ನಾಡಿನ ವಿಧುರ ನಗರದಲ್ಲಿ ಜರಗಲಿರುವುದರ ಪೂರ್ವಭಾವಿಯಾಗಿ ಕರ್ನಾಟಕ ರಾಜ್ಯ ಅಂಗವಿಕಲರ ಹಾಗೂ ಪಾಲಕರ 2ನೇ ಸಮ್ಮೇಳನದ ಪ್ರತಿನಿಧಿ ಅಧಿವೇಶನದಲ್ಲಿ ಬೆಂಗಳೂರಿನಲ್ಲಿ ದಿನಾಂಕ 28, 29 ನವೆಂಬರ್ 2013ರಲ್ಲಿ ರಾಜ್ಯ ಪ್ರಥಮ ಸಮ್ಮೇಳನದ ನಂತರ ಒಕ್ಕೂಟದ ನೇತೃತ್ವದಲ್ಲಿ ಜರಗಿದ ಚಟುವಟಿಕೆಯ ಲಿಖಿತ ವರದಿಯನ್ನು ಪ್ರಧಾನ ಕಾರ್ಯದರ್ಶಿ ರಂಗಪ್ಪ ದಾಸ ಮಂಡಿಸಿದರು. ವರದಿಯ ಮೇಲೆ ಜಿಲ್ಲಾವಾರು 17 ಮಂದಿ ಪ್ರತಿನಿಧಿಗಳು ಸ್ವಯಂ ವಿಮರ್ಷೆ ಮಾಡಿ ಚರ್ಚೆಯಲ್ಲಿ ಭಾಗವಹಿಸಿದರು. ಅರ್ಬುದ ರಾಜನ್ ಮತ್ತು ಎಸ್. ವೆಂಕಟೇಶ ಇವರನ್ನೊಳಗೊಂಡ ಪರಿಚಯ ಪತ್ರ ಸಮಿತಿಯ ವರದಿಯನ್ನು ಸಮ್ಮೇಳನದಲ್ಲಿ ಮಂಡಿಸಲಾಯಿತು. ಒಟ್ಟು 250 ಮಂದಿ ಪ್ರತಿನಿಧಿಗಳು ಭಾಗವಹಿಸಿದರು.

ಅಂಗವಿಕಲರ ಕಾನೂನು– 2016 ಜ್ಯಾರಿಗೆ ಒತ್ತಾಯಿಸಿ ನಿರ್ಣಯ

2016 ರ ಚಳಿಗಾಲದ ಅಧಿವೇಶನದಲ್ಲಿ ಅಂಗವಿಕಲ ವ್ಯಕ್ತಿಗಳ ಹಕ್ಕುಗಳ ಮಸೂದೆ ಅಂಗೀಕಾರ ಬಿಟ್ಟು ಬೇರೆ ಯಾವುದೇ ಶಾಸನಗಳನ್ನು ಕುರಿತು ಕಲಾಪಗಳು ನಡೆದಿರಲಿಲ್ಲ. ಪಕ್ಷಬೇಧವಿಲ್ಲದೆ ಈ ಮಸೂದೆ ಕಾಯ್ದೆ ಆಗಲು ಎಲ್ಲರೂ ಬೆಂಬಲ ನೀಡಿ ಈ ಕಾಯ್ದೆ ರೂಪಿತಗೊಂಡಿದೆ. ಏಕೆಂದರೆ ವಿಶ್ವಸಂಸ್ಥೆ ಈ ಕುರಿತು ಅಧಿನಿರ್ಣಯವನ್ನು ಅಂಗೀಕರಿಸಿ ಒಂದು ದಶಕವಾದ ಮೇಲಷ್ಟೇ ಬಹಳ ವಿಳಂಬದಿಂದ ನಮ್ಮಲ್ಲಿ ಈ ಕಾಯ್ದೆ ಬಂದಿದೆ. ಈ ಕಾಯ್ದೆಯ ಅಡಿಯಲ್ಲಿ ನಿಯಮಗಳನ್ನು ರೂಪಿಸುವಾಗ ಈ ಕಾಯ್ದೆಯ ಮೂಲ ಆಶಯಗಳನ್ನು ಬಿಂಬಿಸದ ಕೆಲವು ನಿಯಮಾವಳಿಗಳನ್ನು ರಚಿಸಲಾಗಿದೆ. ಅಲ್ಲದೇ ಈ ನಿಯಮಗಳನ್ನು ರೂಪಿಸುವಾಗ ಸಮಿತಿಯಲ್ಲಿ ಈ ಕ್ಷೇತ್ರದಲ್ಲಿ ಬಹಳ ಸಮಯದಿಂದ ಸಕ್ರಿಯವಾಗಿರುವ ಸಂಘಟನೆಗಳಿಗೆ ಸರಿಯಾದ ಪ್ರಾತಿನಿಧ್ಯ ನೀಡಿಲ್ಲ ಎಂಬ ದೂರುಗಳು ಇವೆ. ನಿರ್ಧಿಷ್ಟವಾಗಿ ಮಸೂದೆಯಲ್ಲಿ ಅಂಗವಿಕಲತೆ ಆಧಾರದಲ್ಲಿ ನೇಮಕಗಳಲ್ಲಿ ಯಾವುದೇ ಪಕ್ಷಪಾತ ನಡೆಸಲು ಅವಕಾಶವಾಗದಂತೆ ನೋಡಿಕೊಳ್ಳಲು ಎಡಪಕ್ಷಗಳ ಮುಖಂಡರು ತಿದ್ದುಪಡಿ ಸೂಚಿಸಿದರು. ಇದು ನಮ್ಮ ಸಮಾಜದಲ್ಲಿ ಅತ್ಯಂತ ಅಂಚಿಗೆ ತಳ್ಳಲ್ಪಟ್ಟಿರುವ ಒಂದು ವಿಭಾಗಕ್ಕೆ ಕೆಲವು ಹಕ್ಕುಗಳ ಆಶ್ವಾಸನೆ ನೀಡುವ ಸಂಬಂಧ ಪಟ್ಟಿದ್ದರಿಂದ ಅದನ್ನು ಅಂತಿಮ ಗೊಳಿಸುವ ಮೊದಲು ಸಂಬಂಧಪಟ್ಟ ಎಲ್ಲರನ್ನು ಒಳಗೊಳ್ಳುವುದು ಅಗತ್ಯ.



ಜಿ.ಎನ್. ನಾಗರಾಜ್, ಅಧ್ಯಕ್ಷರು



ರಂಗಪ್ಪ ದಾಸರ್
ಪ್ರಧಾನ ಕಾರ್ಯದರ್ಶಿ

ಅಂಗವಿಕಲರ ಕಾನೂನು 2016 ರಲ್ಲಿ ಅಂಗವಿಕಲರಿಗೆ ಅನುದಾನ ಶೇ. 50 ಏರಿಕೆ. ನಮ್ಮ ಬೇಡಿಕೆ 7% ಮೀಸಲಾತಿ ಆದರೆ 4% ಮೀಸಲಾತಿಗೆ ಕಾನೂನು ಆಗಿದೆ. ಅಂಗವಿಕಲರಿಗೆ ಅವಹೇಳನೆ ನಿಂದನೆ, ದೌರ್ಜನ್ಯ ಮಾಡಿದರೆ ಶಿಕ್ಷೆಗೆ ಗುರಿ ಪಡಿಸುವುದ ಉಚಿತ ಕಾನೂನು ನೆರವು. ವೈದ್ಯಕೀಯ ವಿದ್ಯಾರ್ಥಿಗಳಿಗೆ ಅಂಗವಿಕಲತೆ ಕುರಿತು ಒಂದು ಪಠ್ಯ ಪಾಠ, ಮೀಸಲಾತಿ ಖಾಸಗಿ ಸಂಸ್ಥೆಗಳಲ್ಲಿ ಉದ್ಯೋಗ ಕೊಡುವುದು ನ್ಯಾಯಾಧೀಶರಿಗೂ ಈ ಕಾನೂನು ಮಾಹಿತಿ ಕೊಡಬೇಕು. ಕುಟುಂಬದವರು ಅಲಕ್ಷ್ಯ ಮಾಡಿದರೆ ಜಿಲ್ಲಾಧಿಕಾರಿಗಳಿಗೆ ದೂರು ಕೊಟ್ಟು ನ್ಯಾಯ ಪಡೆಯುವುದು. ಮನೆ ಕಟ್ಟಲು ಇತರ ಸರ್ಕಾರಿ ಸೌಲಭ್ಯಕ್ಕೆ ಅಂಗವಿಕಲರಿಗೆ ಶೇ. 25 ಹೆಚ್ಚುವರಿಯಾಗಿ ಸೌಲಭ್ಯ ಇತ್ಯಾದಿ ಈ ಎಲ್ಲಾ ಕಾನೂನುಗಳು ಪುಸ್ತಕದಲ್ಲಿ ಇರುವುದನ್ನು ಜ್ಯಾರಿ ಮಾಡಲು ಸಂಘಟಿತ ಹೋರಾಟ ನಡೆಸಲು ಸಮ್ಮೇಳನದಲ್ಲಿ ನಿರ್ಣಯಿಸಲಾಗಿದೆ.

ಸಮ್ಮೇಳನದಲ್ಲಿ ಕೈಗೊಂಡ ಇತರ ನಿರ್ಣಯಗಳು :

1. ಪದವೀದರ ಹಾಗೂ ಅಕ್ಷರಸ್ಥ ಅಂಗವಿಕಲರ ಸಮೀಕ್ಷೆ ನಡೆಸಲು ನಿರ್ಣಯ.
2. ಅಂಗವಿಕಲರಿಗೆ ಶೇ. 3 ಅನುದಾನ ಸಮರ್ಪಕವಾಗಿ ಜ್ಯಾರಿ ಮಾಡಲು ಒತ್ತಾಯಿಸಿ
3. ಕರಾವಳಿ ಜಿಲ್ಲೆಯ ಎಂಡೋಸಲ್ಫಾನ್ ಪೀಡಿತ ಅಂಗವಿಕಲರನ್ನು ಪುನರ್ ಸಮೀಕ್ಷೆ ಮಾಡಬೇಕು. ಮತ್ತು ಸ್ವತಂತ್ರ ಪುನರ್‌ವಸತಿ ಕೇಂದ್ರ ಸ್ಥಾಪಿಸಬೇಕೆಂದು ಒತ್ತಾಯಿಸಿ ನಿರ್ಣಯ.
4. ಅಂಗವಿಕಲರಿಗೆ ರೈಲು ಪ್ರಯಾಣಕ್ಕೆ ಪಾಸು ಮಂಜೂರು ಮಾಡುವಲ್ಲಿ ಇರುವ ತೊಡಕನ್ನು ಪರಿಹರಿಸಲು ಒತ್ತಾಯಿಸಿ ನಿರ್ಣಯ.
5. ಅಂಗವಿಕಲರಿಗೆ, ಮಹಿಳೆಯರಿಗೆ ತೀವ್ರತರದ ಅಂಗವಿಕಲರಿಗೆ ಉಚಿತ ಸರ್ಕಾರಿ ಜಮೀನು 5 ಎಕ್ರೆ ಮಂಜೂರು ಮಾಡಲು ಒತ್ತಾಯಿಸಿ ನಿರ್ಣಯ.
6. ಗ್ರಾಮೀಣ ಅಂಗವಿಕಲರ ಪುನರ್‌ವಸತಿ ಕಾರ್ಯಕರ್ತರು ವಿ.ಆರ್.ಡಬ್ಲ್ಯು, ಎಂ.ಆರ್. ಡಬ್ಲ್ಯು ಗಳಿಗೆ ಕನಿಷ್ಠ ವೇತನ ಜ್ಯಾರಿ, ಇವರ ಕೆಲಸ ಖಾಯಂಗೊಳಿಸಲು ಒತ್ತಾಯಿಸಿ ನಿರ್ಣಯ.
7. ಸಮ್ಮೇಳನದಲ್ಲಿ ಒಟ್ಟು ನೂತನ ರಾಜ್ಯ ಸಮಿತಿಗೆ 41 ಮಂದಿ ಸದಸ್ಯರನ್ನೊಳಗೊಂಡಂತೆ ಪದವೀದರ ಉಪಸಮಿತಿ, ಅಂಧರ ಉಪಸಮಿತಿಗಳನ್ನು ಆಯ್ಕೆ ಮಾಡಲಾಗಿತು. ರಾಷ್ಟ್ರ ಸಮ್ಮೇಳನಕ್ಕೆ 21 ಮಂದಿ ಪ್ರತಿನಿಧಿಗಳನ್ನು ಆಯ್ಕೆ ಮಾಡಲಾಯಿತು.

ಪದಾಧಿಕಾರಿಗಳಾಗಿ ಜಿ.ಎನ್. ನಾಗರಾಜ್ ಅಧ್ಯಕ್ಷ, ರಂಗಪ್ಪ ದಾಸರ್ ಪ್ರಧಾನ ಕಾರ್ಯದರ್ಶಿ, ಉಸ್ಮಾನ್ ಪಾಷಾ (ಬಳ್ಳಾರಿ) ಉಪಾಧ್ಯಕ್ಷ, ಸುರೇಶ್ ಬಳ್ಳಾರಿ ಉಪಾಧ್ಯಕ್ಷ, ಮಂಜುನಾಥ ಹೆಬ್ಬಾರ್ (ಉಡುಪಿ) ಉಪಾಧ್ಯಕ್ಷ, ವೆಂಕಟೇಶ ಕೋಣಿ (ಉಡುಪಿ) ಉಪಾಧ್ಯಕ್ಷ, ಕರಿಯಪ್ಪ ಅಚ್ಚುವಳ್ಳಿ (ರಾಯಚೂರು) ಉಪಾಧ್ಯಕ್ಷ, ಕುಮಾರ (ಮಂಡ್ಯ) ಉಪಾಧ್ಯಕ್ಷ, ಅರ್ಬುದ ರಾಜನ್ (ಕಥೇರಿ) ಕಾರ್ಯದರ್ಶಿ, ದೊಡ್ಡ ಮರಿಗೌಡ (ಮಂಡ್ಯ) ಕಾರ್ಯದರ್ಶಿ, ಜಿ.ಎನ್. ಯಶಸ್ವಿ (ಬೆಂಗಳೂರು) ಕಾರ್ಯದರ್ಶಿ, ಎಸ್. ವೆಂಕಟೇಶ (ಬೆಂಗಳೂರು) ಕಾರ್ಯದರ್ಶಿ, ಪ್ರವೀಣ್ ಕುಮಾರ್ (ಉತ್ತರ ಕನ್ನಡ) ಕಾರ್ಯದರ್ಶಿ, ಇವರುಗಳನ್ನು ಸರ್ವಾನುಮತದಿಂದ ಆಯ್ಕೆ ಮಾಡಲಾಯಿತು.

ವರದಿ : ವೆಂಕಟೇಶ ಕೋಣಿ



ಬಿಜೆಪಿ ಹುನ್ನಾರ ವಿಫಲಗೊಳಿಸಿದ ಸರಕಾರ



"ಮಂಗಳೂರು ಚಲೋ" ಹೆಸರಿನಲ್ಲಿ ಕರಾವಳಿಯಲ್ಲಿ ಮತ್ತು ರಾಜ್ಯದ ತುಂಬಾ ಶಾಂತಿ–ಸೌಹಾರ್ದತೆಗಳನ್ನು ಕದಡುವ ಮತ್ತು ಕೋಮು ದಳ್ಳುರಿ ಹರಡುವ ಬಿಜೆಪಿ ಯುವ ಮೋರ್ಚಾ ಹಾಕಿಕೊಂಡಿದ್ದ ಯೋಜನೆಯನ್ನು ರಾಜ್ಯ ಸರಕಾರ ವಿಫಲಗೊಳಿಸಿರುವುದು ಒಂದು ಸಕಾರಾತ್ಮಕ ಬೆಳವಣಿಗೆ. ಬೆಂಗಳೂರು, ಹುಬ್ಬಳ್ಳಿ, ಮೈಸೂರು, ಶಿವಮೊಗ್ಗ ಚಿಕ್ಕಮಗಳೂರುಗಳಿಂದ ಸಾವಿರಾರು ಯುವಕರು ಬೈಕ್ ರ್ಯಾಲಿ ನಡೆಸಿ ಮಂಗಳೂರಿಗೆ ಬಂದು ಅಲ್ಲೂ ಬೈಕ್ ರ್ಯಾಲಿ ನಡೆಸಿ ಹಿಂಸಾಚಾರ ಪ್ರಚೋದಿಸುವುದು ಬಿಜೆಪಿ ಗುರಿಯಾಗಿತ್ತು. ಕರಾವಳಿಯಲ್ಲಿ ಹಿಂದೂ ಕಾರ್ಯಕರ್ತರ ಕೊಲೆ ಪ್ರಕರಣಗಳನ್ನು ಸಿಬಿಐ ತನಿಖೆಗೆ ಒಪ್ಪಿಸಬೇಕು. ಕೆ.ಡಿ.ಎಫ್., ಎಸ್.ಡಿ.ಪಿ.ಐ., ಪಿ.ಎಫ್.ಐ, ಸಂಘಟನೆಗಳನ್ನು ನಿಷೇಧಿಸಬೇಕು. ರಮಾನಾಥ ರೈ ಅವರನ್ನು ಸಂಪುಟದಿಂದ ಕೈ ಬಿಡಬೇಕು – ಎಂಬುದು ಅವರ ಮುಖ್ಯ ಒತ್ತಾಯಗಳಾಗಿದ್ದವು.

ಸರಕಾರ ಬೆಂಗಳೂರು, ಹುಬ್ಬಳ್ಳಿ, ಮೈಸೂರು, ಶಿವಮೊಗ್ಗ ಚಿಕ್ಕಮಗಳೂರುಗಳಿಂದ ಮಂಗಳೂರಿಗೆ ಬೈಕ್ ರ್ಯಾಲಿಗೆ ನಡಸುವ ಬಿಜೆಪಿ ಯುವ ಮೋರ್ಚಾ ಕಾರ್ಯಕ್ರಮಕ್ಕೆ ಅನುಮತಿ ನಿರಾಕರಿಸಿತ್ತು. ಮಂಗಳೂರಿನಲ್ಲೂ ದಕ್ಷಿಣ ಕನ್ನಡದ ಇತರ ಭಾಗಗಳಿಂದ ಮಂಗಳೂರಿಗೆ ಬೈಕ್ ರ್ಯಾಲಿಗೂ ಅನುಮತಿ ನಿರಾಕರಿಸಿತ್ತು. ಪಾದಯಾತ್ರೆ ಮತ್ತು ಸಮಾವೇಶಕ್ಕೆ ಅನುಮತಿ ಕೇಳಿದರೆ ಕೊಡಲಾಗುವುದು ಎಂದು ಸರಕಾರ ಹೇಳಿತ್ತು. ಅನುಮತಿ ಪಡೆಯದೆ ಬೆಂಗಳೂರು, ಹುಬ್ಬಳ್ಳಿ, ಮೈಸೂರು, ಶಿವಮೊಗ್ಗ ಚಿಕ್ಕಮಗಳೂರುಗಳಲ್ಲಿ ಬೈಕ್ ರ್ಯಾಲಿ ನಡೆಸುವ ಬಿಜೆಪಿ ಯುವ ಮೋರ್ಚಾದ ಪ್ರಯತ್ನಗಳನ್ನು ಅದರ ನಾಯಕರು ಮತ್ತು ಕಾರ್ಯಕರ್ತರನ್ನು ಬಂಧಿಸಿ ಕಟ್ಟು ನಿಟ್ಟಿನ ಕ್ರಮಗಳನ್ನು ಕೈಗೊಳ್ಳುವ ಮೂಲಕ ವಿಫಲಗೊಳಿಸಿತು. ಮಂಗಳೂರಿನಲ್ಲೂ ಸೆಪ್ಟೆಂಬರ್ 7ರಂದು ಜ್ಯೋತಿ ಸರ್ಕಲ್ ನಿಂದ ಜಿಲ್ಲಾಧಿಕಾರಿ ಕಚೇರಿಗೆ ಬೈಕ್ ರ್ಯಾಲಿ, ಜಿಲ್ಲಾಧಿಕಾರಿ ಕಚೇರಿಗೆ ಮುತ್ತಿಗೆ ಮತ್ತು ನೆಹರೂ ಮೈದಾನದಲ್ಲಿ ಸಮಾವೇಶ ನಡೆಸಿಯೇ ತೀರುವುದಾಗಿ ಬಿಜೆಪಿ ಘೋಷಿಸಿತು. ನೆಹರೂ ಮೈದಾನದಲ್ಲಿ ಸಮಾವೇಶ ನಡೆಸಲು ಮಾತ್ರ ಅನುಮತಿ ನೀಡಲಾಗಿತ್ತು. ಸೆಪ್ಟೆಂಬರ್ 6ರ ಸಂಜೆಯಿಂದಲೇ ಮಂಗಳೂರಿನಲ್ಲಿ ನಿಷೇಧಾಜ್ಞೆ ಹೇರಲಾಯಿತು. ಗಲಭೆಕೋರರನ್ನು ಬಂಧಿಸಲಾಯಿತು. ಇತರ ನಗರಗಳಿಂದ ದಕ್ಷಿಣ ಕನ್ನಡ ಜಿಲ್ಲೆ ಪ್ರವೇಶಿಸುವ ಪ್ರಯತ್ನಗಳನ್ನೂ ವಿಫಲಗೊಳಿಸಲಾಯಿತು.

ಮಂಗಳೂರಿನಲ್ಲಿ ಜ್ಯೋತಿ ಸರ್ಕಲ್, ಜಿಲ್ಲಾಧಿಕಾರಿ ಕಚೇರಿಗೆ ಹೋಗು–ಬರುವ ದಾರಿ ಮತ್ತು ಜಿಲ್ಲಾಧಿಕಾರಿ ಕಚೇರಿಗೆ ಸುತ್ತ ಪೋಲಿಸ್ ಬಿಗಿ ಬಂದೋಬಸ್ತ್ ಮಾಡಲಾಗಿತ್ತು. ಇದಕ್ಕೆ ಪ್ರತಿಯಾಗಿ ಜ್ಯೋತಿ ಸರ್ಕಲ್ ಬಳಿಯೇ ಬಹಿರಂಗ ಸಭೆ ನಡೆಸಿ, ಆ ಬಳಿಕ ಜಿಲ್ಲಾಧಿಕಾರಿ ಕಚೇರಿಗೆ ಪಾದಯಾತ್ರೆ ಬೈಕ್ ರ್ಯಾಲಿ ನಡೆಸುವ ಪ್ರತಿತಂತ್ರವನ್ನು ಬಿಜೆಪಿ ರೂಪಿಸಿತ್ತು. ಇದಕ್ಕಾಗಿ ಜ್ಯೋತಿ ಸರ್ಕಲ್ ನಲ್ಲಿ ಬೃಹತ್ ಟ್ರಕ್ ತರಿಸಿ ಅದರ ಮೇಲೆ ವೇದಿಕೆ ಸಿದ್ದ ಪಡಿಸಲಾಗಿತ್ತು. ಇಲ್ಲಿ ಸುಮಾರು 3 ಸಾವಿರ ಜನ ಸೇರಿ ಪೋಲಿಸ್ ಕ್ರಮದ ವಿರುದ್ಧ ಪ್ರತಿಭಟಿಸಿದರು. ಯೆಡಿಯೂರಪ್ಪ, ಪ್ರತಾಪ ಸಿಂಹ ಮುಂತಾದ ಬಿಜೆಪಿ ನಾಯಕರುಗಳ ಭಾಷಣದ ನಂತರ ಅವರನ್ನೂ ಬಂಧಿಸಲಾಯಿತು. ಅದರ ನಂತರ ಪೋಲಿಸ್ ಕಾರ್ಡನ್ ಭೇಧಿಸಿ ಜಿಲ್ಲಾಧಿಕಾರಿ ಕಚೇರಿಯತ್ತ ನುಗ್ಗಲು ಕೆಲವು ಕಾರ್ಯಕರ್ತರು ಮಾಡಿದ ಪ್ರಯತ್ನವನ್ನು ವಿಫಲಗೊಳಿಸಿ ಅವರನ್ನು ಬಂಧಿಸಲಾಯಿತು. ಸುಮಾರು 850 ಕಾರ್ಯಕರ್ತರನ್ನು ಬಂಧಿಸಲಾಯಿತು ಎಂದು ವರದಿಯಾಗಿದೆ. ಈ ನಡುವೆ ಮಂಗಳೂರು ಸಂಸದ ನಳಿನ್ ಕಟೀಲ್ ಮಂಗಳೂರು ಪೂರ್ವ ಪೋಲಿಸ್ ಇನ್ಸ್‌ಪೆಕ್ಟರ್ ಮಾರುತಿ ನಾಯಕ್ ಅವರಿಗೆ ಧಮಕಿ ಹಾಕುತ್ತಿರುವ ವಿಡಿಯೋ ವೈರಲ್ ಆಗಿದೆ. ಒಂದು ಸಭಾಂಗಣದಲ್ಲಿ ಕೂಡಿಟ್ಟ ಬಂದಿಸಲಾದ ಬಿಜೆಪಿ ಕಾರ್ಯಕರ್ತರನ್ನು ಎಫ್.ಐ.ಆರ್. ಪ್ರಕ್ರಿಯೆ ನಂತರ ಬಿಡುಗಡೆ ಮಾಡುವುದಾಗಿ ಇನ್ಸ್‌ಪೆಕ್ಟರ್ ಹೇಳಿದಾಗ "ನಮ್ಮ ಜತೆಗೆ ಆಟ ಆಡ್ತೀರಾ? ಎಫ್.ಐ.ಆರ್. ಮಾಡಿದರೆ ಬಂದ್ ಕರೆ ಕೊಡ್ತೇನಿ. ನೀವೇ ಅನುಭವಿಸಬೇಕು" ಎಂದು ಸಂಸದ ಧಮಕಿ ಹಾಕುತ್ತಿರುವುದು ವಿಡಿಯೋದಲ್ಲಿ ಚಿತ್ರಿತವಾಗಿದೆ.

ಬಿಜೆಪಿ ಯುವ ಮೋರ್ಚಾದ "ಮಂಗಳೂರು ಚಲೋ" ಕಾರ್ಯಕ್ರಮ ಅಮಿತ್ ಶಾ ಬೆಂಗಳೂರು ಭೇಟಿ ನಂತರ ರೂಪಿಸಿದ ಕಾರ್ಯಕ್ರಮ. ರಾಜ್ಯ ಸರಕಾರದ ವಿರುದ್ಧ ಕಾರ್ಯಕ್ರಮಗಳು ಸಾಲದು. ಎಷ್ಟು ಜನರ ಮೇಲೆ ಕೇಸು ಹಾಕಲಾಗಿದೆ? ಎಂದು ಬಿಜೆಪಿ ಕಾರ್ಯಕರ್ತರ ಸಭೆಯಲ್ಲಿ ಶಾ ಹೇಳಿದ ನಂತರ "ಮಂಗಳೂರು ಚಲೋ" ಕಾರ್ಯಕ್ರಮ ಹಮ್ಮಿಕೊಳ್ಳಲಾಯಿತು ಎಂದು ಹೇಳಲಾಗಿದೆ. ಈಗಾಗಲೇ ಹೇಳಿದ ಹಾಗೆ ರಾಜ್ಯದ ತುಂಬಾ ಶಾಂತಿ–ಸೌಹಾರ್ದತೆಗಳನ್ನು ಕದಡುವುದು ಮತ್ತು ಕೋಮು ದಳ್ಳುರಿ ಹರಡುವುದು ಇದರ ಉದ್ದೇಶವಾಗಿತ್ತು. ಹಿಂದೂ ಕಾರ್ಯಕರ್ತರ ಕೊಲೆ ನಡೆಯುತ್ತಿದೆ. ಕೊಲೆಗಡುಕರನ್ನು ಹಿಡಿಯಲಾಗುತ್ತಿಲ್ಲ ಎಂದು ಬೊಬ್ಬೆ ಹೊಡೆಯುವ ಬಿಜೆಪಿ, ಅವರದೇ ಕಾರ್ಯಕರ್ತರಾದ ಪ್ರವೀಣ್ ಪೂಜಾರಿ, ವಿನಾಯಕ ಬಾಳಿಗ, ಕಾರ್ತಿಕ್ ಮುಂತಾದವರ ಕೊಲೆ ಬಗ್ಗೆ ತುಟಿ ಬಿಚ್ಚುತ್ತಿಲ್ಲ. ಅವರ ಕೊಲೆ ಮಾಡಿದ ಅವರದೇ ಕಾರ್ಯಕರ್ತರನ್ನು ಕಾನೂನು ಕ್ರಮದಿಂದ ಬಚಾವು ಮಾಡಲು ಹರಸಾಹಸ ಮಾಡುತ್ತಿದೆ ಎಂಬುದು ಬಹಿರಂಗ ಗುಟ್ಟು. ಅದೇ ರೀತಿ ಕಲಬುರ್ಗಿ ಮತ್ತು ಇತ್ತೀಚಿನ ಗೌರಿ ಲಂಕೇಶ್ ಕೊಲೆಗಳ ಬಗ್ಗೆ ಮಾತನಾಡುತ್ತಿಲ್ಲ. ಬದಲಾಗಿ ಹಲವು ಸಂಘ ಪರಿವಾರದ ನಾಯಕರು ಕಾರ್ಯಕರ್ತರು ಅದನ್ನು ಬೆಂಬಲಿಸಿದ್ದಾರೆ. ಸಂಭ್ರಮಿಸಿದ್ದಾರೆ. ಇತ್ತೀಚಿನ ಶರತ್ ಕೊಲೆಯಲ್ಲಿ ಈಗಾಗಲೇ ಬಂಧನಗಳು ಆಗಿರುವಾಗ ಅದನ್ನು ದೊಡ್ಡ ವಿಷಯ ಮಾಡಿ ಶಾಂತಿ ಕದಡುವುದು ಸರಿಯಲ್ಲ. ಕೋಮುವಾದಿ ಸಂಘಟನೆಗಳ ನಿಷೇಧವೇ ಕರಾವಳಿಯ ಕೋಮು ದಳ್ಳುರಿಗೆ ಮದ್ದಾದರೆ ಹಲವು ಕೊಲೆ ಮತ್ತಿತರ ಕ್ರಿಮಿನಲ್ ಪ್ರಕರಣಗಳಲ್ಲಿ ಭಾಗಿಯಾಗಿರುವ ವ್ಯಕ್ತಿಗಳು ಸದಸ್ಯರಾಗಿರುವ ನಾಯಕರಾಗಿರುವ ಭಜರಂಗ ದಳ, ಶ್ರೀರಾಮ ಸೇನೆ, ವಿಶ್ವ ಹಿಂದೂ ಪರಿಷತ್, ಆರೆಸ್ಸೆಸ್ ಮುಂತಾದ ಸಂಘಪರಿವಾರದ ಸಂಘಟನೆಗಳ ನಿಷೇಧಕ್ಕೆ ಅವರ ಒಪ್ಪಿಗೆ ಇದೆಯಾ? ಕರಾವಳಿಯ ಕೋಮುವಾದೀಕರಣ ಅಪರಾಧೀಕರಣಗಳನ್ನು ವ್ಯವಸ್ಥಿತವಾಗಿ ಮಾಡಿದ ಹಾಗೂ ಆ ಮೂಲಕ ದ್ವೇಷ ಹಿಂಸಾಚಾರದ ವಾತಾವರಣ ಸಂಘ ಪರಿವಾರವೇ ಈಗ ಬೆಳೆಯುತ್ತಿರುವ ಮುಸ್ಲಿಂ ಮತಾಂಧ ಸಂಘಟನೆಗಳ ಬೆಳವಣಿಗೆಗಳಿಗೆ ಪ್ರಮುಖ ಕಾರಣ.

ಶಾಂತಿ–ಸೌಹಾರ್ದತೆಗಳನ್ನು ಕದಡುವ ಮತ್ತು ಕೋಮು ದಳ್ಳುರಿ ಹರಡುವ ಎಲ್ಲಾ ಮತಾಂಧ ಸಂಘಟನೆಗಳ ವಿಚ್ಛಿದ್ರಕಾರಿ ಚಟುವಟಿಕೆಗಳ ಮೇಲೆ ಕಡಿವಾಣ ಹಾಕುವುದು, ತಡೆಯುವುದು, ಅಗತ್ಯ ಬಿದ್ದರೆ (ಅದು ಪರಿಣಾಮಕಾರಿಯಾಗುವುದಾದರೆ) ಅವುಗಳ ನಿಷೇಧ ಮಾಡುವುದು ಸರಕಾರದ ಜವಾಬ್ದಾರಿ ಮತ್ತು ಕರ್ತವ್ಯ. ಆದರೆ ಅದು ಆಂಶಿಕವಾಗಿರಬಾರದು. ಎಲ್ಲಾ ಮತಾಂಧರ ಮೇಲೂ ಸಮಾನವಾಗಿ ನಡೆಯಬೇಕು ಎಂಬುದು ಸೆಕ್ಯುಲರ್ ಮತ್ತು ಎಡ ಪ್ರಜಾಸತ್ತಾತ್ಮಕ ಶಕ್ತಿಗಳ ನಿಲುವು. ಅದೇ ರೀತಿ ಸಾಮಾನ್ಯವಾಗಿ ಪಾದಯಾತ್ರೆ, ರ್ಯಾಲಿ, ಸಮಾವೇಶಗಳನ್ನು ನಡೆಸುವ ಪ್ರಜಾಸತ್ತಾತ್ಮಕ ಹಕ್ಕುಗಳನ್ನು ಮೊಟಕು ಮಾಡಬಾರದು. ಆದರೆ ಅವು ಜನತೆಯ ನಿಜವಾದ ಸಮಸ್ಯೆಗಳನ್ನು ಸರಕಾರದ ಗಮನಕ್ಕೆ ತರುವ ಅದಕ್ಕೆ ಪರಿಹಾರಕ್ಕೆ ಒತ್ತಾಯ ತರುವ ಉದ್ದೇಶ ಉಳ್ಳದ್ದಾಗಿರಬೇಕು. ಮತಾಂಧ ಶಕ್ತಿಗಳು ಸಂಘಟನೆಗಳು ಅದರಲ್ಲೂ ಶಾಂತಿ ಕದಡುವ ಸೌಹಾರ್ದಕ್ಕೆ ಭಂಗ ತರುವ ಕೋಮು ಪ್ರಚೋದನೆ ಮಾಡುವ ದೀರ್ಘ ಇತಿಹಾಸ ಇರುವ ಸಂಘಟನೆಗಳ ಕಾರ್ಯಕ್ರಮಗಳಿಗೆ ಇವು ಅನ್ವಯವಾಗುವುದಿಲ್ಲ. "ಮಂಗಳೂರು ಚಲೋ"ದ ಹಿಂದೆ ಇಂತಹ ಯಾವುದೇ ಜನವಿಭಾಗಗಳ ಸಮಸ್ಯೆ–ಪರಿಹಾರದ ಒತ್ತಾಯಗಳೂ ಇರಲಿಲ್ಲ . ಬದಲಾಗಿ ನಿಜವಾದ ಸಮಸ್ಯೆಗಳಿಂದ ಜನರ ಗಮನ ಬೇರೆಡೆಗೆ ತಿರುಗಿಸುವ ಮತ್ತು ಚುನಾವಣೆಗೆ ಪೂರ್ವಭಾವಿಯಾಗಿ ಕೋಮು ದಳ್ಳುರಿ ಹರಡುವ ಉದ್ದೇಶ ಇದ್ದಿದ್ದರಿಂದ ಈ ಬಗ್ಗೆ ಸರಕಾರ ಕೈಗೊಂಡ ಆಡಳಿತಾತ್ಮಕ ಕ್ರಮಗಳು ಸರಿಯಾಗಿವೆ ಎಂಬುದು ಎಡ ಪ್ರಜಾಸತ್ತಾತ್ಮಕ ಶಕ್ತಿಗಳ ನಿಲುವು ಆಗಿದೆ.

ಆದರೆ ಕರಾವಳಿ ಮತ್ತು ಎಲ್ಲೆಡೆ ಮತಾಂಧ ಶಕ್ತಿಗಳ ವಿರುದ್ಧ ಇಂತಹ ಬಿಗಿ ಆಡಳಿತಾತ್ಮಕ ಕ್ರಮಗಳು ಬಹಳ ವಿಳಂಬವಾಗಿವೆ ಮತ್ತು ಇನ್ನೂ ಬಹಳ ಸೀಮಿತವಾಗಿವೆ. ಕಳೆದ ನಾಲ್ಕು ವರ್ಷಗಳಲ್ಲಿ ಆಡಳಿತಾತ್ಮಕವಾಗಿಯೂ ರಾಜಕೀಯವಾಗಿಯೂ ಮತಾಂಧ ಶಕ್ತಿಗಳ ವಿರುದ್ಧ ಕ್ರಮ ಕೈಗೊಳ್ಳದಿರುವ ಕಾರಣ ಇಂದಿನ ಗಂಭೀರ ಸನ್ನಿವೇಶವನ್ನು ನಾವು ಎದುರಿಸುತ್ತಿದ್ದೇವೆ. ಇನ್ನೂ ಕಾಂಗ್ರೆಸ್ ಮತಾಂಧ ಶಕ್ತಿಗಳ ವಿರುದ್ಧ ಹೋರಾಡುವ ರಾಜಕೀಯ ಇಚ್ಛಾಶಕ್ತಿ ತೋರಿಸಿಲ್ಲ ಎಂಬುದು ಅಷ್ಟೇ ಸ್ಪಷ್ಟ. ಈಗ ಕೈಗೊಂಡಿರುವ ಬಿಗಿ ಆಡಳಿತಾತ್ಮಕ ಕ್ರಮಗಳು ಸಹ ಚುನಾವಣಾ ರಾಜಕೀಯ ಉದ್ದೇಶಗಳಿಗೆ ಸೀಮಿತವಾಗಿವೆ ಎಂಬುದನ್ನೂ ಎಡ ಪ್ರಜಾಸತ್ತಾತ್ಮಕ ಶಕ್ತಿಗಳು ಗಮನಿಸಿ ಅದಕ್ಕಾಗಿ ಒತ್ತಾಯಿಸಬೇಕು.

ಭಾವ ರಾಗ ತಾಳಗಳ ಸಂಗಮವೇ ಭಾರತ.... ಪುಟ 8 ರಿಂದ

ದಾಳಿಯಿಂದ ಪ್ರಾರಂಭವಾಗಿ ವಿಶ್ವ ವಿದ್ಯಾನಿಲಯಗಳ ಮೇಲೆ ದಾಳಿವರೆಗೂ ಮುಂದುವರೆದಿದೆ. ಅವರು ಭಾರತವನ್ನು ಇನ್ನೂ ಹದಗೆಡಿಸುವತ್ತ ಬದಲಾಯಿಸಬಯಸುತ್ತಾರೆ. ನಾವು ಭಾರತವನ್ನು ಉತ್ತಮ ನಾಳೆಗಳಿಗೆ ಬದಲಾಯಿಸಲು ಅವರಿಂದ ಇಂದು ರಕ್ಷಿಸಬೇಕಾಗಿದೆ. ಅಲ್ಪಸಂಖ್ಯಾತರು, ದಲಿತರು, ಕಮ್ಯುನಿಸ್ಟರು ಒಟ್ಟಾಗಿ ಕೋಮುವಾದವನ್ನು ಸೋಲಿಸಬೇಕು. ನಾವು ನಡೆಸಬೇಕಿರುವ ಬೃಹತ್ ಹೋರಾಟವನ್ನು ದೃಷ್ಟಿಯಿಟ್ಟುಕೊಂಡು ಐಕ್ಯತೆಯನ್ನು ಬೆಸೆಯುವ ಸಂದೇಶ ಕರ್ನಾಟಕದಿಂದ ಬರುತ್ತಿರುವುದು ಅತ್ಯಂತ ಆಶಾದಾಯಕ ಮತ್ತು ಇಡೀ ದೇಶಕ್ಕೆ ಮಾದರಿ ಎಂದು ಹೇಳಿದರು.

ಕೇಂದ್ರ ಸಚಿವ ಸಂಪುಟ ವಿಸ್ತರಿಸುವಾಗ ಕರ್ನಾಟಕದಿಂದ ಪ್ರಧಾನಿ ಮೋದಿಯ ಆಯ್ಕೆ ಬಗ್ಗೆ ಇಡೀ ರಾಜ್ಯವೇ ತಲೆ ತಗ್ಗಿಸಬೇಕಾಗಿದೆ. ರಾಜ್ಯದಲ್ಲಿ ಕೋಮುವಾದವನ್ನು ಮಟ್ಟ ಹಾಕುವುದರಲ್ಲಿ ಎಷ್ಟರ ಮಟ್ಟಿಗೆ ಗಂಭೀರ ಪ್ರಯತ್ನ ಮಾಡಿದೆ ಎಂದು ಕಾಂಗ್ರೆಸ್ ಆತ್ಮಾವಲೋಕನ ಮಾಡಬೇಕು. ಬಿಜೆಪಿಯ ಹಿಂದಿ ಹೇರಿಕೆಯ ವಿರುದ್ಧ ಐಕ್ಯ ಹೋರಾಟ ನಡೆಯಬೇಕಾಗಿದೆ ಎಂದರು, ಪ್ರೊ. ಎಸ್.ಜಿ. ಸಿದ್ಧರಾಮಯ್ಯ ಅವರು.

ಕೆಟ್ಟವರು ಬಲುಬೇಗ ಒಂದಾಗುತ್ತಾರೆ. ಆದರೆ ಒಳ್ಳೆಯವರು ಸುಲಭವಾಗಿ ಒಂದಾಗುವುದಿಲ್ಲ. ಎಮ್ಮೆ ಧರ್ಮ–ಜಾತಿ ನೋಡದೆ ಹಾಲು ಕೊಡುತ್ತದೆ. ಆದ್ದ–ರಿಂದ ಎಮ್ಮೆಯನ್ನು ನಮ್ಮ ಪ್ರಧಾನಿ ಮಾಡೋಣ! ದೇಶಕ್ಕಾಗಿ ಮಕ್ಕಳನ್ನು ಅಡವಿಟ್ಟ ಟಿಪ್ಪು ಸುಲ್ತಾನನನ್ನು ಇವರು "ದೇಶದ್ರೋಹಿ" ಅಂತಾರೆ. ಮಕ್ಕಳಿಗಾಗಿ ದೇಶ ಅಡವಿಟ್ಟವರು ಸಿಗಬಹುದು. ದೇಶಕ್ಕಾಗಿ ಮಕ್ಕಳನ್ನು ಅಡವಿಡುವವರು ಇಲ್ಲಿ ಸಿಗುತ್ತಾರೆ? ಎಂದು ತಮ್ಮ ಎಂದಿನ ಹಾಸ್ಯಭರಿತ ಧಾಟಿಯಲ್ಲಿ ಮಾತನಾಡಿದ ಪುಟ್ಟಣ್ಣಯ್ಯ ಅವರು, ಮಾನವ ಸರಪಣಿ ಮಾಡೋಣ. ಆದರೆ ಮುಂದೇನು? ಶೇ. 67 ಬೆಂಬಲ ಇರುವವರು ಒಟ್ಟಾಗಿದ್ದರೆ, ಶೇ. 33 ಬೆಂಬಲ ಇರುವವರು ಗೆಲ್ಲುತ್ತಾರೆ. ಇದನ್ನು ಮುಂದಿನ ವಿಧಾನಸಭೆ ಚುನಾವಣೆಯಲ್ಲಿ ನೆನಪಿನಲ್ಲಿ ಇಟ್ಟುಕೊಳ್ಳಬೇಕು ಎಂದರು.

ನೋಟು ರದ್ದತಿ ಮತ್ತು ಜಿ.ಎಸ್.ಟಿ. ನೀತಿಗಳಿಂದ ಅರ್ಥವ್ಯವಸ್ಥೆ ಇನ್ನಷ್ಟು ಹದಗೆಟ್ಟಿದೆ. ಮೋದಿ ಕೊಟ್ಟ ಯಾವುದೇ ಉದ್ಯೋಗ ಆಗಲಿ, ಕಪ್ಪು ಹಣ–ಭ್ರಷ್ಟಾಚಾರಗಳ ನಿಗ್ರಹಗಳಾಗಲಿ ಭರವಸೆಗಳನ್ನು ಪೂರೈಸಲಾಗದೆ ಅದರಿಂದ ಜನರ ಗಮನ ಬೇ–ರೆಡೆಗೆ ತಿರುಗಿಸಲಿಕ್ಕೆ ಕೋಮುವಾದಿ ಅಜೆಂಡಾಗಳನ್ನು ಹೊಸೆಯಲಾಗುತ್ತಿದೆ. ಹಿಟ್ಲರ್ ಸಹ ಆರ್ಥಿಕತೆ–ಯ ಮಿಲಿಟರೀಕರಣದ ಮೂಲಕ ಜರ್ಮನಿಯ ಅರ್ಥವ್ಯವಸ್ಥೆಯನ್ನು ಗಟ್ಟಿಗೊಳಿಸಿದ್ದ. ಜನರ ಬೆಂಬಲ ಗಳಿಸಿದ್ದ. ಇಂದಿನ ನವ–ಉದಾರವಾದದಲ್ಲಿ ಮಿಲಿಟರೀಕರಣ ಅಥವಾ ಇತರ ಯಾವುದೇ ಕ್ರಮಗಳ ಮೂಲಕ ಅರ್ಥವ್ಯವಸ್ಥೆಯನ್ನು ಗಟ್ಟಿಗೊಳಿಸುವುದು ಮೋದಿ ಸರಕಾರಕ್ಕೆ ಸಾಧ್ಯವಿಲ್ಲ. ಆದ್ದರಿಂದ ಅವರು ಹೆಚ್ಚೆಚ್ಚು ಇಂತಹ ಕೋಮುವಾದಿ ಅಜೆಂಡಾಗಳಿಗೆ ಮೊರೆ ಹೋಗುತ್ತಾರೆ. ಅದನ್ನು ಬಯಲುಗೊಳಿಸಿ ಹೋರಾಟ ಮಾಡಬೇಕಾಗಿದೆ, ಎಂದವರು ಡಾ. ರಾಧಾಕೃಷ್ಣ.


ರೈತರು ಪೆರಿಯಾರರನ್ನು ಮನನ ಮಾಡಬೇಕು. ಮುಸ್ಲಿಮರು ಬಸವಣ್ಣನವರ ವಚನ ತಿಳಿದುಕೊಳ್ಳಬೇಕು. ಎಲ್ಲರೂ ವರ್ಗ ಸಂಘರ್ಷ ಮೂಲಭೂತ ಪ್ರಕ್ರಿಯೆ ಎಂದು ಅರ್ಥ ಮಾಡಿಕೊಳ್ಳಬೇಕು ಎಂದರು ಭಾರದ್ವಾಜ್.

ಗೊಲ್ಲರಹಳ್ಳಿ ಶಿವಪ್ರಸಾದ್ ಅವರು ಬಸವಣ್ಣನವರ ಒಂದು ವಚನ, ಕಬೀರರ ಒಂದು ದೋಹಾ, ಕೈವಾರ ತಾತಯ್ಯನವರ ಒಂದು ತತ್ವ ಪದ ಹಾಗೂ ಸತೀಶ್ ಕುಲಕರ್ಣಿಯವರ ಸೌಹಾರ್ದ ಗೀತೆ "ಕಟ್ಟತ್ತೇವ ನಾವು ಕಟ್ಟತ್ತೇವ" ಹಾಡಿನ ಮೂಲಕ ನಮ್ಮ ಸೌಹಾರ್ದ ಪರಂಪರೆ ಮತ್ತು ಅದಕ್ಕೆ ಬಂದ ಅಪಾಯದ ವಿರುದ್ಧ ಹೋರಾಟಕ್ಕೆ ಪಣ ತೊಡಬೇಕಾದ್ದರ ಬಗ್ಗೆ ಅರ್ಥಪೂರ್ಣವಾಗಿ ಪರಿಣಾಮಕಾರಿಯಾಗಿ ಹೇಳಿದರು.

ಹಿಂದುತ್ವ ಇಂದಿನ ಎಲ್ಲಾ ಕೆಡುಕುಗಳ ಪ್ರತೀಕ. ಗೋರಖಪುರ ಒಂದು ಕಡೆ ಅಮಾಯಕ ಮಕ್ಕಳ ಸಾವು ಇನ್ನೊಂದು ಕಡೆ 10 ಲಕ್ಷ ಹಿಂದುತ್ವ ಕಾಲಾಳುಗಳ ತರಬೇತಿ ಕೇಂದ್ರವಾಗಿ ಹಿಂದುತ್ವದ ಪ್ರತೀಕವಾಗಿದೆ. ಹಿಂದುತ್ವಕ್ಕೆ ಪ್ರತಿರೋಧ ಒಡ್ಡುತ್ತಿರುವ ಲಿಂಗಾಯತ ಸ್ವತಂತ್ರ ಧರ್ಮ ಚಳುವಳಿ ಸಣ್ಣ ಬೆಳವಣಿಗೆಯಲ್ಲ. ಮಹತ್ವದ ಬೆಳವಣಿಗೆ. ಇಲ್ಲಿ ಕೇಸರಿ ಬಿಟ್ಟರೆ ಎಲ್ಲಾ ಬಣ್ಣಗಳಿವೆ. ಎಡ–ಪ್ರಜಾಸತ್ತಾತ್ಮಕ ಶಕ್ತಿಗಳ ಐಕ್ಯತೆ ಇಂದಿನ ಅಗತ್ಯ, ಎಂದರು ಚಂಪಾ.

ಡಾ. ರಾಮಕೃಷ್ಣ ಅವರು ಮಾತನಾಡುತ್ತಾ, ತುರ್ತು ಪರಿಸ್ಥಿತಿಯಲ್ಲಿ ಸಂಜಯ ಗಾಂಧಿಯವರನ್ನು "ಸಂವಿಧಾನೇತರ ಶಕ್ತಿ ಕೇಂದ್ರ" ಎಂದು ಕರೆಯಲಾಗಿತ್ತು. ಹಿಂದೆ ಆರೆಸ್ಸೆಸ್ ತಾನು ಸಾಂಸ್ಕೃತಿಕ ಸಂಘಟನೆ. ಎಂಬ ಮುಖವಾಡದೊಂದಿಗೆ ಬಿಜೆಪಿಯನ್ನು ನಿರ್ದೇಶಿಸುತ್ತಿತ್ತು. ಈಗ ಅಂತಹ ಸಾಂಸ್ಕೃತಿಕ ಮುಖವಾಡವನ್ನು ಕಳಚಿ ಹಾಕಿ ನೀಚ ರಾಜಕಾರಣವನ್ನೂ ಮಾಡುತ್ತಿದೆ. ಸಂಸ್ಕೃತಿಯನ್ನು ಹದಗೆಡಿಸುತ್ತಿದೆ. ಮಂಗಳೂರು ಚಲೋದ ಬೈಕ್ ರ್ಯಾಲಿಯಲ್ಲಿ ಬೈಕುಗಳ ಅಹಂಕಾರದ ಅಬ್ಬರದಲ್ಲಿ ಯಾರೂ ಪ್ರಶ್ನೆ ಕೇಳದಂತೆ ಮಾಡುತ್ತಿದೆ. ಇನ್ನೊಂದು ಕಡೆ ಎಲ್ಲವನ್ನೂ ಮರೆಸಲು ಯುದ್ಧೋನ್ಮಾದವನ್ನೂ ಮೆರೆಸುತ್ತಿದೆ. ಇದನ್ನು ಎದುರಿಸಬೇಕಾದರೆ ಜನವರಿ 30 ರಂದು ಮಾನವ ಸರಪಣಿಮಾಡಲು ಕ್ರಿಯಾತ್ಮಕ ಐಕ್ಯತೆ ಮತ್ತು ಆ ಮೇಲೆ ರಾಜಕೀಯ ಐಕ್ಯತೆ ಬೇಕಾಗುತ್ತದೆ ಎಂದರು. ●

ಈ ವರ್ಷ ಯುವಜನರಿಗೆ ಇನ್ನಷ್ಟು ಉದ್ಯೋಗಹೀನತೆ ಕಾದಿದೆಯೇ?



2016ರಲ್ಲಿ ದೇಶದ ಪ್ರಮುಖ ಉತ್ಪಾದನಾ ಕಂಪನಿಗಳು ತಮ್ಮ ಸಿಬ್ಬಂದಿಯಲ್ಲಿ 30% ಕಡಿತ ಮಾಡಿದ್ದವು, ಈ ಕಡಿತ 2017ರಲ್ಲಿ 40% ತಲುಪಲಿದೆ ಎಂದು ದೇಶದ ಅತಿ ದೊಡ್ಡ ಮಾನವ ಸಂಪನ್ಮೂಲ(ಹೆಚ್‌ಆರ್) ಸೇವಾ ಕಂಪನಿ ಟೀಂಲೀಸ್ ಸರ್ವಿಸಸ್ ಹೇಳಿರುವುದಾಗಿ 'ಬಿಸಿನೆಸ್ ಸ್ಟಾಂಡರ್ಡ್' ಪತ್ರಿಕೆ ವರದಿ ಮಾಡಿದೆ(ಸಪ್ಟಂಬರ್ 8).

ದೇಶದ 2500ಕ್ಕೂ ಹೆಚ್ಚು ಕಾರ್ಪೊರೇಟ್‌ಗಳನ್ನು ಗಿರಾಕಿಯಾಗುಳ್ಳ ಈ ಹೆಚ್‌ಆರ್ ಕಂಪನಿಯ ಮಾಡಿರುವ ಆಂತರಿಕ ಅಂದಾಜಿನ ಪ್ರಕಾರ ಈ ಕಡಿತದ ಅತಿ ಹೆಚ್ಚು ಅಪಾಯ ಇರುವುದು ಆರಂಭ ಹಂತದ ಉದ್ಯೋಗಗಳಲ್ಲಿ. ಕಂಪನಿಗಳು ಮಂದಗತಿಯ ಬೆಳವಣಿಗೆಯ ಸಂದರ್ಭದಲ್ಲಿ ತಮ್ಮ ಖರ್ಚು ಕಡಿತದ ಕ್ರಮಗಳನ್ನು ಮುಂದುವರೆಸುತ್ತಿರುವುದು ಇದಕ್ಕೆ ಕಾರಣ. ಅಂದರೆ ಹೊಸದಾಗಿ ಉದ್ಯೋಗ ಮಾರುಕಟ್ಟೆಯನ್ನು ಪ್ರವೇಶಿಸುವ ಯುವ ಜನರಿಗೆ ನಿರುದ್ಯೋಗದ ಭೀತಿ ಈ ವರ್ಷ ಮತ್ತಷ್ಟು ಹೆಚ್ಚಲಿದೆಯೇ?

ನೋಟು ರದ್ಧತಿ ಮತ್ತು ಜಿಎಸ್‌ಟಿಯ ಪ್ರಾರಂಭದ ಮೊದಲು ದಾಸ್ತಾನು ತೀರುವಳಿ ನಡೆಸುವ ಬೃಹತ್ ಪ್ರಕ್ರಿಯೆಯಿಂದಾಗಿ ಸರಕು ಉತ್ಪಾದನಾ ವಲಯ ಪ್ರಸಕ್ತ ಹಣಕಾಸು ವರ್ಷದ ಮೊದಲ ತ್ರೈಮಾಸಿಕದಲ್ಲಿ ಕೇವಲ 1.2% ಬೆಳವಣಿಗೆ ದಾಖಲಿಸಿದೆ. ಇದರ ಹಿಂದಿನ ತ್ರೈಮಾಸಿಕದಲ್ಲಿ ಇದು 5.3% ಇತ್ತು. 2015 ರ ವರೆಗೆ ಅತ್ಯಂತ ಹೆಚ್ಚು, 75–80ಶೇ. ಹೊಸ ಉದ್ಯೋಗಾವಕಾಶಗಳನ್ನು ಕೊಟ್ಟದ್ದು ಈ ವಲಯವೇ. ಇದು 2016ರಲ್ಲಿ 50–60ಶೇ.ಕ್ಕೆ ಇಳಿಯಿತು. ಒಂದೆಡೆಯಲ್ಲಿ ಕಂಪ್ಯೂಟರೀಕರಣ ಮತ್ತು ಇನ್ನೊಂದೆಡೆಯಲ್ಲಿ ಕಡಿಮೆ ಬೇಡಿಕೆ ಮತ್ತು ಹೆಚ್ಚಿನ ಖರ್ಚುಗಳಿಂದಾಗಿ ಎಂದು ಈ ಸಂಸ್ಥೆಯ ಹಿರಿಯ ಅಧಿಕಾರಿ ಹೇಳಿರುವುದಾಗಿ ಈ ವರದಿ ತಿಳಿಸುತ್ತದೆ. 'ಅಚ್ಛೇ ದಿನ್' ಸರಕಾರದ ಮಂದಿ ಏನೇ ಹೇಳಲಿ, ಖಾಸಗಿ ಹೂಡಿಕೆ ಕಳೆದ ಎರಡು ವರ್ಷಗಳಲ್ಲಿ ಇಳಿಮುಖವಾಗುತ್ತಿದ್ದು ನೋಟುರದ್ಧತಿ ಇದಕ್ಕೆ ಮತ್ತಷ್ಟು ಪ್ರಹಾರ ಮಾಡಿದೆ ಎಂಬುದು ಅವರ ಅಭಿಪ್ರಾಯ ಕೂಡ ಇದ್ದಂತಿದೆ.

ಇನ್ನೊಂದೆಡೆಯಲ್ಲಿ, ಅಸಂಘಟಿತ ವಲಯದಲ್ಲೂ, ಸಣ್ಣ ಉತ್ಪಾದನಾ ಘಟಕಗಳ ಸಂಖ್ಯೆ 45% ಹೆಚ್ಚಿದ್ದರೂ, ಅದಕ್ಕೆ ಅನುಗುಣವಾಗಿ ಉದ್ಯೋಗಾವಕಾಶ ಹೆಚ್ಚಳ ಆಗಿಲ್ಲ ಎಂದು ಸಣ್ಣ ಮತ್ತು ಮಧ್ಯಮ ಗಾತ್ರದ ಉದ್ದಿಮೆಗಳ ಇಲಾಖೆಯ ಒಬ್ಬ ಹಿರಿಯ ಅಧಿಕಾರಿಯೂ ಹೇಳಿದ್ದಾರಂತೆ.

ನೋಟುರದ್ಧತಿ ಮತ್ತು ಜಿಎಸ್‌ಟಿ ಆರಂಭದ ನಂತರ ಸರಕಾರ ಕೆಲವು ಬದಲಾವಣೆಗಳನ್ನು ಪ್ರಕಟಿಸಬಹುದು ಎಂಬ ನಿರೀಕ್ಷೆಯಿತ್ತು, ಸದ್ಯಕ್ಕೆ ಅಂತಹ ಯೋಜನೆಗಳೇನೂ ಇದ್ದಂತಿಲ್ಲವಂತೆ.

ಪ್ರಧಾನ ಮಂತ್ರಿಗಳಿಗೆ ಹೀಗೆ ಉದ್ಯೋಗನಷ್ಟವಾಗುತ್ತಿದೆ ಎಂದು ತಿಳಿದಿಲ್ಲವೇ? ಧರ್ಮಾಂಧತೆ, ದ್ವೇಷ ಮತ್ತು ಹುಸಿಮಾತುಗಳು ಎಷ್ಟು ಉದ್ಯೋಗಗಳನ್ನು ಸೃಷಿಸಿಯಾವು ಎಂದು ಸಿಪಿಐ(ಎಂ) ಪ್ರಧಾನ ಕಾರ್ಯದರ್ಶಿ ಸೀತಾರಾಮ್ ಯೆಚುರಿ ಈ ಬಗ್ಗೆ ಟಿಪ್ಪಣಿ ಮಾಡಿದ್ದಾರೆ.

ಗೋಕಾವಲುಕೋರತನವನ್ನು ನಿಲ್ಲಿಸಲು ತುರ್ತು ಕ್ರಮಗಳನ್ನು ಕೈಗೊಳ್ಳಿ –ಕೇಂದ್ರ ಮತ್ತು ರಾಜ್ಯ ಸರಕಾರಗಳಿಗೆ ಸುಪ್ರಿಂ ಕೋರ್ಟ್ ತಾಕೀತು

ಕೇಂದ್ರ ಮತ್ತು ರಾಜ್ಯ ಸರಕಾರಗಳು ಹಸುಗಳ ಹೆಸರಿನಲ್ಲಿ ಕಾವಲುಕೋರತನವನ್ನು ನಿಲ್ಲಿಸಲು ತುರ್ತು ಹೆಜ್ಜೆಗಳನ್ನು ಕೈಗೊಳ್ಳಬೇಕು ಎಂದು ದೇಶದ ಸರ್ವೋಚ್ಚ ನ್ಯಾಯಾಲಯ ಹೇಳಿದೆ. ಪ್ರತಿಯೊಂದು ಜಿಲ್ಲೆಯಲ್ಲಿ ಒಬ್ಬ ಹಿರಿಯ ಪೋಲೀಸ್ ಅಧಿಕಾರಯನ್ನು ಇದಕ್ಕೆ ನೋಡಲ್ ಆಫೀಸರ್ ಆಗಿ ನೇಮಿಸಬೇಕು ಎಂದು ಪ್ರತಿಯೊಂದು ರಾಜ್ಯಕ್ಕೆ ಅದು ಹೇಳಿದೆ.

ಈ ಕಾವಲುಕೋರತನದ ಹಾವಳಿಯ ವಿರುದ್ಧ ತುಷಾರ್ ಗಾಂಧಿಯವರು ಸುಪ್ರಿಂ ಕೋರ್ಟ್ ಮುಂದೆ ಅರ್ಜಿ ಹಾಕಿದ್ದು ಅವರ ಪರವಾಗಿ ಹಿರಿಯ ಮತ್ತು ಪ್ರಸಿದ್ಧ ವಕೀಲರಾದ ಇಂದಿರಾ ಜೈಸಿಂಗ್ ಮತ್ತು ಕೊಲಿನ್ ಗೊನ್ಸಾಲ್ವೆಸ್ ವಾದಿಸುತ್ತಿದ್ದಾರೆ. ತಾನು ಈ ಕಾವಲುಕೋರತನವನ್ನು ಬೆಂಬಲಿಸುವುದಿಲ್ಲ ಎಂದು ಕೇಂದ್ರ ಸರಕಾರ ಹೇಳುತ್ತಿದ್ದರೂ ದೇಶಾದ್ಯಂತ ಇಂತಹ ಪ್ರಕರಣಗಳು ಹೆಚ್ಚುತ್ತಲೇ ಇವೆ, ಈಗಾಗಲೇ ಇಂತಹ 66 ಪ್ರಕರಣಗಳು ನಡೆದಿವೆ ಎಂಬುದನ್ನು ನ್ಯಾಯಾಲಯದ ಗಮನಕ್ಕೆ ತಂದಿದ್ದರು.

ನಾಲ್ಕು ರಾಜ್ಯಗಳ ಪರವಾಗಿ ವಾದಿಸುತ್ತ ಅಡಿಶನಲ್ ಸಾಲಿಸಿಟರ್ ಜನರಲ್, ಎಫ್‌ಐಆರ್‌ಗಳನ್ನು ದಾಖಲಿಸಲಾಗಿದೆ, ಕಾನೂನು ತನ್ನ ದಾರಿಯಲ್ಲಿ ಹೋಗುತ್ತದೆ ಎಂದಾಗ ಅದಕ್ಕೆ ಪತ್ರಿಕ್ರಿಯಿಸಿದ ಇಂದಿರಾ ಜೈಸಿಂಗ್ "ನಾನಿಲ್ಲಿ ಎಫ್‌ಐಆರ್‌ಗಾಗಿ ಬಂದಿಲ್ಲ, ನನ್ನ ಆಶಯ ತಡೆಯುವುದು. ಜನ ಸತ್ತ ಮೇಲೆ ಕೋರ್ಟಿಗೆ ಬರುವುದು ನಮಗೆ ಬೇಕಿಲ್ಲ, ಅವರು ಸಾಯದಂತೆ ತಡೆಯಬಯಸುತ್ತೇವೆ" ಎಂದರು.

ಇದಕ್ಕೆ ಸ್ಪಂದಿಸಿದ ನ್ಯಾಯಪೀಠದಲ್ಲಿದ್ದ ದೇಶದ ಮುಖ್ಯ ನ್ಯಾಯಾಧೀಶರು "ಜನಗಳು ಕಾನೂನನ್ನು ತಮ್ಮ ಕೈಗಳಲ್ಲಿ ತಗೊಳ್ಳದಂತೆ ಮಾಡುವ ಯಾವುದಾದರೂ ವಿಧಾನ ಇರಬೇಕಾಗುತ್ತದೆ. ಇದು ನಿಲ್ಲಬೇಕು. ಇದು ಬೆಳೆಯದಂತೆ ಮಾಡಲು ಯೋಜಿತ ಕಾರ್ಯಾಚರಣೆಗಳು ಬೇಕಾಗಿದೆ" ಎಂದರು.

ಆಗ ತಮ್ಮ ವಾದವನ್ನು ಮುಂದುವರೆಸಿದ ಇಂದಿರಾ ಜೈಸಿಂಗ್ ಸಂವಿಧಾನದ ಕಲಮು 256 ಮತ್ತು ಸಹಕಾರಿ ಒಕ್ಕೂಟ ತತ್ವ ಕೇಂದ್ರ ಸರಕಾರ ರಾಜ್ಯಗಳಿಗೆ ನಿರ್ದೇಶನಗಳನ್ನು ಕೊಡಬೇಕು ಎಂದು ತಿಳಿಸುತ್ತದೆ ಎಂಬುದನ್ನು ನೆನಪಿಸುತ್ತ ಕಲಮು 256 ನ್ನು ಚಲಾಯಿಸಲು ಇದು ಸೂಕ್ತ ಪ್ರಕರಣ, ಕೇಂದ್ರ ಸರಕಾರ ನಿರ್ದೇಶನಗಳನ್ನು ಕೊಡಲಿ, ರಾಜ್ಯ ಸರಕಾರಗಳು ಹೇಗೆ ಸ್ಪಂದಿಸುತ್ತವೆ ನೋಡೋಣ.

ಈ ಬಗ್ಗೆ ಉತ್ತರ ನೀಡುವಂತೆ ಕೇಂದ್ರ ಸರಕಾರಕ್ಕೆ ಹೇಳಿದ ನ್ಯಾಯಪೀಠ, ಈಗ ಆಗಿರುವ ಹಲ್ಲೆಗಳನ್ನು ಗಮನದಲ್ಲಿಟ್ಟುಕೊಂಡು ಪ್ರತಿಯೊಂದು ರಾಜ್ಯದ ಕಾರ್ಯದರ್ಶಿಗಳು ರಾಜ್ಯ ಡಿಜಿಪಿಗಳೊಂದಿಗೆ ಸಮಾಲೋಚಿಸಿ ಹೆದ್ದಾರಿಗಳನ್ನು ಕಾವಲುಕೋರ ಗುಂಪುಗಳಿಂದ ಸುರಕ್ಷಿತಗೊಳಿಸಬೇಕು ಎಂದೂ ಹೇಳಿರುವುದಾಗಿ ವರದಿಯಾಗಿದೆ. ಸಪ್ಟಂಬರ್ 22ರಂದು ವಿಚಾರಣೆ ಮುಂದುವರೆಯಲಿದೆ.

ಮೂರು ವರ್ಷಗಳಲ್ಲಿ ಮೂರನೇ ಸಂಪುಟ ಪುನರ್ರಚನೆ- ಮಂತ್ರಿಗಳ ಸಂಖ್ಯೆ 46ರಿಂದ 76ಕ್ಕೆ

ಅಚ್ಛೇ ದಿನ್‌ಗಳ ಮೂರು ವರ್ಷಗಳಲ್ಲಿ ಮೂರನೇ ಸಂಪುಟ ಪುನರ್ರಚನೆ ನಡೆದಿದೆ. ಐದು ಮಂತ್ರಿಗಳನ್ನು ಕೈಬಿಟ್ಟು ಒಂಭತ್ತು ಮಂತ್ರಿಗಳನ್ನು ಸೇರಿಸಿಕೊಳ್ಳಲಾಗಿದೆ. ಅದರಲ್ಲಿ ನಾಲ್ವರು ಅಧಿಕಾರಶಾಹಿಗಳು. ಇವರಲ್ಲಿ ಇಬ್ಬರು ಸಂಸತ್ತಿನ ಯಾವ ಸದನದ ಸದಸ್ಯರೂ ಅಲ್ಲ.

ಕನಿಷ್ಟ ಸರಕಾರ, ಗರಿಷ್ಟ ಶಾಸನ' ಎಂಬ ಅಚ್ಛೇದಿನ್ ಮತ್ತು 'ಕಾಂಗ್ರೆಸ್ ಮುಕ್ತ ಭಾರತ'ದ ಘೋಷಣೆಯಲ್ಲಿ ಇನ್ನೂ ನಂಬಿಕೆ ಉಳಿಸಿಕೊಂಡವರಿಗೆ ಪ್ರಧಾನಿಗಳು ಹೊಸ ಸವಾಲುಗಳನ್ನೇ ಇಟ್ಟಿದ್ದಾರೆ. ಮೇ 2014ರಲ್ಲಿ 46 ಮಂತ್ರಿಗಳೊಂದಿಗೆ ಕೆಲಸ ಆರಂಭಿಸಿದ ಸಂಪುಟದ ಗಾತ್ರ 76 ತಲುಪಿದೆ, ಗರಿಷ್ಟ ಮಿತಿ 82 ರ ಬಳಿ ಸಾಗುತ್ತಿದೆ.

ಮಂತ್ರಿ ಸಂಪುಟದಲ್ಲಿ ಉತ್ತಮ ಕೆಲಸ ಮಾಡಿದವರನ್ನು ಪುರಸ್ಕರಿಸಲಾಗಿದೆ, ಕೆಟ್ಟ ಪ್ರದರ್ಶನ ತೋರಿದವರನ್ನು ಶಿಕ್ಷಿಸಲಾಗಿದೆ ಎಂದು ಡಂಗುರ ಸಾರಲಾಗುತ್ತಿದೆ. ಆದರೆ ಕೈಬಿಟ್ಟ ಮತ್ತು ಸೇರಿಸಿಕೊಂಡವರ ಹಿನ್ನೆಲೆಗಳನ್ನು ನೋಡಿದರೆ ಬಹಳಷ್ಟು ಮಂದಿಗೆ ಹಾಗನಿಸುತ್ತಿಲ್ಲ. (ಪುಟ 7ರಲ್ಲಿ ಪ್ರಕಟವಾಗಿರುವ ಲೇಖನ ನೋಡಿ). ಕರ್ನಾಟಕದಿಂದ, ಕೇರಳದಿಂದ, ಸೇರಿಸಿಕೊಂಡವರ ಮತ್ತಿತರ ಹಲವರ ಪೂರ್ವಾಪರಗಳನ್ನು ನೊಡಿದರೆ ಮಾನದಂಡ ಯಾವುದಿರಬಹುದೆಂಬ ಒಂದು ಸಂಕೇತವಂತೂ ಸಿಗುತ್ತದೆ.

ಹಿಂದಿನ ರೈಲ್ವೆ ಮಂತ್ರಿಗಳು ರಾಜೀನಾಮೆಗೆ ಸಿದ್ಧರಾಗಿದ್ದರೂ ಅವರ ಖಾತೆ ಬದಲಾವಣೆ ರೈಲು ಅಪಘಾತಗಳಿಗೆ ಆ ಮಂತ್ರಿಗಳು ಕಾರಣ ಎಂದು ಒಪ್ಪಿಕೊಂಡಿರುವುದರ ಸಂಕೇತವೇ? ಹೊಸ ಮಂತ್ರಿಗಳು ಅಧಿಕಾರ ವಹಿಸಿಕೊಂಡ ಕೂಡಲೇ ಮೂರು ಹಳಿ ತಪ್ಪಿದ ಘಟನೆಗಳು ವರದಿಯಾಗಿವೆ. ಇದಕ್ಕೆ ಯಾರನ್ನು ಹೊಣೆ ಮಾಡಲಾಗುತ್ತದೆ, ಮಂತ್ರಿಗಳನ್ನೋ ಈ ಸರಕಾರದ ಒಟ್ಟು ಧೋರಣೆಗಳನ್ನೋ?

ಹಿಂದಿನ ಕಾರ್ಮಿಕ ಮಂತ್ರಿಗಳನ್ನು ಕೈಬಿಟ್ಟ ನಂತರ ಹೊಸ ಸಂಪುಟದಲ್ಲಿ ಸಂಪುಟ ದರ್ಜೆಯ ಕಾರ್ಮಿಕ ಮಂತ್ರಿ ಇರದಿರುವುದು ಏನನ್ನು ಸೂಚಿಸುತ್ತದೆ? ಅದಕ್ಕೆ ಅರ್ಹರಾದ ವ್ಯಕ್ತಿ ಇಲ್ಲ ಎಂದೋ, ಅಥವ ಈ ಸರಕಾರದ ಧೋರಣೆಯನ್ನೋ?

ಮಹಿಳೆಯೊಬ್ಬರಿಗೆ ರಕ್ಷಣಾ ಮಂತ್ರಾಲಯವನ್ನು ವಹಿಸಲಾಗಿದೆ, ಸಂಪುಟದ ನಾಲ್ಕು ಪ್ರಮುಖ ಸ್ಥಾನಗಳಲ್ಲಿ ಇಬ್ಬರು ಮಹಿಳೆಯರಿದ್ದಾರೆ, ಇದೀಗ ಅಚ್ಛೇದಿನಗಳ ಸಂಕೇತ ಎನ್ನಲಾಗುತ್ತಿದೆ. ಹಾಗಿದ್ದರೆ 33% ಮೀಸಲಾತಿ ಕೊನೆಗೂ ಕಾನೂನಾಗುತ್ತದೆಯೇ, ವೈವಾಹಿಕ ಬಲಾತ್ಕಾರದ ವಿರುದ್ಧ ಸರಕಾರ ನಿಲುವು ತಳೆಯುತ್ತದೆಯೇ ಎಂದು ಹಲವರು ಕೇಳುತ್ತಿದ್ದಾರೆ.

ಅದರೆ ಮೋದಿ ಸರಕಾರದಲ್ಲಿ ಪ್ರಧಾನ ಮಂತ್ರಿಗಳು ಮತ್ತು ಪಕ್ಷದ ಅಧ್ಯಕ್ಷರು ಬಿಟ್ಟರೆ 'ಹೊಸಮುಖ'ಗಳಿಗೆ ಅವಕಾಶವಿದೆಯೇ ಇನ್ನು ಕೆಲವರು ಕೇಳುತ್ತಿದ್ದಾರೆ.ಇಂತಹ ಹಲವಾರು ಪ್ರಶ್ನೆಗಳನ್ನು ಈ ಪನಾರಚನೆ ಎತ್ತಿದೆ.



ವ್ಯಂಗ್ಯಚಿತ್ರ: ಸಂದೀಪ ಅಧ್ವರ್ಯು, ಟೈಂಸ್ ಆಫ್ ಇಂಡಿಯ

ಅಡುಗೆ ಅನಿಲ 7ರೂ. ಏರಿಕೆ: ಸಬ್ಸಿಡಿ ಕಡಿತ ಆರಂಭ

ಅಡುಗೆ ಅನಿಲದ ಮೇಲಿನ ಸಬ್ಸಿಡಿಯನ್ನು ಸೊನ್ನೆಗೆ ಇಳಿಸುವ ಪ್ರಕ್ರಿಯೆ ಭರದಿಂದಲೇ ಆರಂಭವಾಗಿದೆ. ತಿಂಗಳಿಗೆ 4ರೂ. ಬದಲು 7ರೂ. ಏರಿಸಲಾಗಿದೆ. ಇದಕ್ಕೆ ಕಾರಣ ಅಗಸ್ಟ್ 1ರಂದು ಸಿಲಿಂಡರಿಗೆ 'ಕೇವಲ' 2.31 ರೂ. ಏರಿಸಿದ್ದಂತೆ. ಮುಂದಿನ ಮಾರ್ಚ್ ತಿಂಗಳೊಳಗೆ ಸಬ್ಸಿಡಿಯನ್ನು ಸಂಪೂರ್ಣವಾಗಿ ತೆಗೆಯಲು ಹೀಗೆ ಮಾಡಲಾಗುತ್ತಿದೆಯಂತೆ.

ಈ ನಡುವೆ ಸಬ್ಸಿಡಿಯಿಲ್ಲದ ಸಿಲಿಂಡರ್‌ನ ಬೆಲೆಯಲ್ಲಿಯೂ 73.50 ರೂ. ಹೆಚ್ಚಳ ಮಾಡಲಾಗಿದೆ. ಅಂದರೆ ಮುಂದಿನ ಮಾರ್ಚ್ ನಂತರ ಹೆಚ್ಚಳದ ಪ್ರಮಾಣ ಎಷ್ಟಿರುತ್ತದೆ ಎಂಬುದರ ಒಂದು ಚಿತ್ರ.

ಈ ನಡುವೆ ಈ ಸುದ್ದಿ ನೋಡಿ. ದಕ್ಷಿಣ ಏಶ್ಯಾದ ದೇಶಗಳಲ್ಲಿ ಭಾರತದಲ್ಲೇ ಪೆಟ್ರೋಲಿಯಂ ಉತ್ಪನ್ನಗಳ ಬೆಲೆಗಳು ಅತಿ ಹೆಚ್ಚು.

ಸಪ್ಟಂಬರ್ 1 ರಂದು ಪೆಟ್ರೋಲ್, ಡೀಸೆಲ್ ಬೆಲೆಗಳ ಪಟ್ಟಿ ನೋಡಿ:

ದೇಶ	ಡೀಸೆಲ್	ಪೆಟ್ರೋಲ್
ಭಾರತ	57.13	69.26
ಬಾಂಗ್ಲಾದೇಶ	51.05	69.91
ಭೂತಾನ	56.05	62.21
ಇಂಡೋನೇಸ್ಯ	40.58	43.36
ಮಲೇಷ್ಯ	31.59	32.19
ನೇಪಾಳ	46.24	61.24
ಪಾಕಿಸ್ತಾನ	46.93	42.14

ಇದಕ್ಕೆ ಈಗಾಗಲೇ ಹಲವು ಬಾರಿ ಹೇಳಿರುವಂತೆ ಕಾರಣ ವಿಪರೀತ ತೆರಿಗೆ ಭಾರ. ನಾವು ತೆರುವ ಬೆಲೆಗಳಲ್ಲಿ 45% ದಿಂದ 52% ಭಾರ ಈ ತೆರಿಗೆಗಳದ್ದೇ ಎನ್ನಲಾಗಿದೆ.

ಅಚ್ಛೇ ದಿನ್ ಸರಕಾರ 2014–15 ಮತ್ತು 2015–16ರಲ್ಲಿ ಒಟ್ಟು 9 ಬಾರಿ ಪೆಟ್ರೋಲಿಯಂ ಉತ್ಪನ್ನಗಳ ಮೇಲಿನ ಅಬಕಾರಿ ಸುಂಕವನ್ನು ಏರಿಸಿ ಅಂತರ್ರಾಷ್ಟ್ರೀಯ ಮಾರುಕಟ್ಟೆಯಲ್ಲಿ ಕಚ್ಚಾತೈಲದ ಬೆಲೆ ಇಳಿಕೆಯ ಪ್ರಯೋಜನ ಬಳಕೆದಾರರಿಗೆ ಸಿಗದಂತೆ ಮಾಡಿದೆ.

ಈಗ ಸಬ್ಸಿಡಿಯನ್ನು ತೆಗೆದು ಹಾಕುತ್ತಿರುವಾಗ ಅಬಕಾರಿ ಸುಂಕ ಏರಿಕೆಯ ಮೂಲಕ ಮಾಡಿದ್ದ ಆ ಲೂಟಿಯನ್ನು ಇಳಿಸಬೇಕು ಎಂದು ನಿರೀಕ್ಷಿಸಬಹುದೇ? ಜಿಎಸ್‌ಟಿಯಲ್ಲಿ ಗರಿಷ್ಟ ತೆರಿಗೆ ದರವಾದ 28%ಕ್ಕೆ ಇಳಿಸಬಾರದೇಕೆ?



ವ್ಯಂಗ್ಯಚಿತ್ರ: ಕೀರ್ತಿಶ್, ಬಿಬಿಸಿ ಹಿಂದಿ

ಈಗಲೂ ನೋಟು ರದ್ಧತಿ ಯಶಸ್ವಿಯಾಗಿದೆ ಎನ್ನುವುದು ದಿಗ್ಭ್ರಮೆಗೊಳಿಸುವ ಅಪ್ರಾಮಾಣಿಕತೆ-ಪ್ರೊ. ಪ್ರಭಾತ್ ಪಟ್ನಾಯಕ್



ಕೆ.ಎಂ.ನಾಗರಾಜ್

ಕಳೆದ ಸಂಚಿಕೆಯಲ್ಲಿ ಹೇಳಿರುವಂತೆ, ಭಾರತೀಯ ರಿಝರ್ವ್ ಬ್ಯಾಂಕ್(ಆರ್‌ಬಿಐ) ಕೊನೆಗೂ ಹಲವು ತಿಂಗಳ ಮೀನಾಮೇಷದ ನಂತರ ಬ್ಯಾಂಕಿಂಗ್ ವ್ಯವಸ್ಥೆಗೆ ಮರಳಿ ಬಂದ ರದ್ದಾದ ನೋಟುಗಳ ಮೊತ್ತ ಎಷ್ಟು ಎಂಬುದನ್ನು ತಿಳಿಸಿದೆ. ನವಂಬರ್ 8, 2016ರಂದು ನೋಟು ರದ್ಧತಿ ಮಾಡಿದಾಗ ರದ್ದುಗೊಳಿಸಿದ 500ರೂ. ಮತ್ತು 1000ರೂ. ಗಳ ನೋಟುಗಳ ಒಟ್ಟು ಮೊತ್ತ 15.44 ಲಕ್ಷ ಕೋಟಿ ರೂ. ಅವುಗಳಲ್ಲಿ 15.28ಲಕ್ಷ ಕೋಟಿ ರೂ. ಗಳಷ್ಟುಮೊತ್ತದ ನೋಟುಗಳು ಅಂದರೆ 98.96% ಹಿಂದಿರುಗಿ ಬಂದಿವೆಯಂತೆ. ಇನ್ನೂ ಕೆಲವು ಸಣ್ಣ ಮೂಲಗಳಿಂದ ನೋಟುಗಳು ಬರಲಿಕ್ಕಿವೆಯಂತೆ– ಉದಾ: ಕೆಲವು ಸಹಕಾರಿ ಬ್ಯಾಂಕುಗಳಿಂದ ಮತ್ತು ನೆರೆ–ಯ ನೇಪಾಳ ಮತ್ತು ಭೂತಾನದಲ್ಲಿ ಚಲಾವಣೆಯಲ್ಲಿ ಇದ್ದ ನೋಟುಗಳು. ಇವು ಕಪ್ಪು ಹಣವಲ್ಲ. ಇವು ಬಂದ ಮೇಲೆ 99%ವನ್ನೂ ಖಂಡಿತಾ ದಾಟುತ್ತದೆ. ಇನ್ನೂ ಉಳಿದಿರುವ ಹಣ ವಯಸ್ಸಾದವರು, ಕಾಯಿಲೆಯವರು ಮರೆವಿನಿಂದಲೋ ಅಥವ ಜಮಾ ಮಾಡಲು ಸಾಧ್ಯವಾಗದೆಯೋ ಬಾರದ್ದು. ಇವು ಖಂಡಿತ ಖೋಟಾ ನೋಟುಗಳಲ್ಲ, ಕಪ್ಪು ಹಣವೂ ಅಲ್ಲ. ಅಂದರೆ ಬ್ಯಾಂಕಿಂಗ್ ವ್ಯವಸ್ಥೆಗೆ ಸುಮಾರಾಗಿ ಎಲ್ಲ ರದ್ದಾದ ಹಣ ವಾಪಾಸಾದಂತಾಗಿದೆ ಎಂದು ಕೆಲವು ಆರ್ಥಿಕ ತಜ್ಞರು ಹೇಳುತ್ತಾರೆ.

ಇದರರ್ಥ ನೋಟು ರದ್ಧತಿಯ ಮೊದಲ ಘೋಷಿತ ಉದ್ದೇಶ–ಕಪ್ಪು ಹಣವನ್ನು ಹೊರಗೆಳೆಯುವುದು– ಖಂಡಿತಾ ಈಡೇರಿಲ್ಲ, ಎಂದು ಪ್ರೊ. ಪ್ರಭಾತ್ ಪಟ್ನಾಯಕ್ ಹೇಳುತ್ತಾರೆ.

ಕಪ್ಪು ಹಣದ ನೋಟುಗಳಿದ್ದವರು ಅವನ್ನು ಬ್ಯಾಂಕುಗಳಲ್ಲಿ ಜಮಾ ಮಾಡಲು ತರುವುದಿಲ್ಲ, ಏಕೆಂದರೆ ಆಗ ಅವರ ಅಪ್ರಾಮಾಣಿಕತೆ ಬಯಲಿಗೆ ಬರುತ್ತದೆ ಎಂಬದು ನೋಟುರದ್ಧತಿಯ ತರ್ಕ. ಈ ಕಾರಣದಿಂದ ಸುಮಾರು 3.5ಲಕ್ಷ ಕೋಟಿ ರೂ. ಗಳು ಬ್ಯಾಂಕಿಂಗ್ ವ್ಯವಸ್ಥೆಗೆ ಹಿಂದಿರುಗಿ ಬರುವುದಿಲ್ಲ ಎಂಬುದು ಸರಕಾರದ ನಿರೀಕ್ಷೆಯಾಗಿತ್ತು. ಎಷ್ಟು ಹಣ ಹಿಂದಿರುಗಿ ಬರುವುದಿಲ್ಲ ಎಂಬುದೇ ನೋಟುರದ್ಧತಿ ಕ್ರಮದ ಯಶಸ್ಸಿನ ಮಾಪಕ ಎಂದೂ ಸರಕಾರದ ವಕ್ತಾರರು ಹೇಳುತ್ತಿದ್ದರು.

ಈ ಲೆಕ್ಕಾಚಾರದ ಮೇಲೆಯೇ ಆರ್‌ಬಿಐನ 'ಬಾಧ್ಯತೆ' 3.5ಲಕ್ಷ ಕೋಟಿ ರೂ.ಗಳಷ್ಟು ಕಡಿಮೆಯಾಗಿ ಅಷ್ಟು ಹಣಕ್ಕೆ ನೋಟುಗಳನ್ನು ಮುದ್ರಿಸಬಹುದು, ಅವನ್ನು ಸರಕಾರಕ್ಕೆ ಅಥವ ಜನಗಳಿಗೆ ಕೊಡಬಹುದು ಎಂದೂ ಹೇಳಲಾಗಿತ್ತು. ಆದರೆ ಈಗ ಆರ್‌ಬಿಐ ವರದಿ ಪ್ರಕಾರ ಹೆಚ್ಚೆಂದರೆ 16ಸಾವಿರ ಕೋಟಿ ರೂ. ಮಾತ್ರ ಹಿಂದಿರುಗಿ ಬಂದಿಲ್ಲ. ಇದರಲ್ಲಿ ಬಹುಪಾಲು ಮೇಲೆ ಹೇಳಿದ ಕಾರಣಕ್ಕಾಗಿ ಹಿಂದಿರುಗಿ ಬಂದಿರದ ಪ್ರಾಮಾಣಿಕ ವ್ಯಕ್ತಿಗಳ ಹಣವೇ.

ಅಂದರೆ ನೋಟುಗಳ ರೂಪದಲ್ಲಿ ಸರಕಾರದ ಲೆಕ್ಕಾಚಾರದಂತೆ 3.5ಲಕ್ಷ ಕೋಟಿ ರೂ. ಕಪ್ಪು ಹಣ ಇದ್ದಿದ್ದರೆ, ಅವನ್ನೆಲ್ಲ 'ಹೊರಗೆಳೆಯುವ' ಬದಲು, ಈಗ 'ಬಿಳಿ' ಮಾಡಲಾಗಿದೆ ಎಂದಾಗುತ್ತದೆ.

ಅಲ್ಲದೆ ಆರ್‌ಬಿಐ 'ಬಾಧ್ಯತೆ' ಹೆಚ್ಚೆಂದರೆ 16,000 ಕೋಟಿ ರೂ. ಮಾತ್ರ. ಹಗುರಗೊಂಡಿದೆ. ಅದು ಕೂಡ ನಿಜವಾಗಿ ಉಳಿದಿಲ್ಲ. ಏಕೆಂದರೆ ಹೊಸ ನೋಟುಗಳನ್ನು ಮುದ್ರಿಸಲು, ಮತ್ತು ಬ್ಯಾಂಕಿಂಗ್ ವ್ಯವಸ್ಥೆಗೆ ಹೆಚ್ಚಾಗಿ ಹರಿದು ಬಂದ ಹಣದಿಂದಾಗಿ ಬಡ್ಡಿ ನೀಡಿಕೆಯಲ್ಲಿ ಆಗಿರುವ ಹೆಚ್ಚಳದಿಂದಾಗಿ ಆರ್‌ಬಿಐ ಗೆ 30,000 ಕೋಟಿ ರೂ.ಗಳಷ್ಟು ಹೆಚ್ಚು ಖರ್ಚಾಗಿದೆ., ಅಂದರೆ ಕನಿಷ್ಟ 14,000 ಕೋಟಿ ರೂ. ಗಳಷ್ಟು ಹಣವನ್ನು ಜನಗಳಿಂದಲೇ ನೋಟುರದ್ಧತಿಯ ಮೂಲಕ ಲೂಟಿ ಮಾಡಲಾಗಿದೆ.

ಕೋಟ್ಯಂತರ ಜನಗಳಿಗೆ ಮೂರು ತಿಂಗಳುಗಳ ಕಾಲ ಅತ್ಯಂತ ಅನಾನುಕೂಲತೆಗಳನ್ನು ಹೇರಿ, 103 ಜನಗಳ ಪ್ರಾಣ ತೆಗೆದುಕೊಂಡ, ಅನೌಪಚಾರಿಕ ಆರ್ಥಿಕ ವಲಯದ ಸೊಂಟ ಮುರಿದು ಅಪಾರ ನಿರುದ್ಯೋಗ ಸೃಷ್ಟಿಸಿದ ನೋಟುರದ್ದತಿಯ ಅಂತಿಮ ಸಾಧನೆ ಇದೇನಾ ಎಂದು ಕೇಳುವಂತಾಗಿದೆ

ನೋಟುರದ್ಧತಿ ಕಪ್ಪು ಹಣದ ವ್ಯವಸ್ಥೆಯನ್ನು ಕಿತ್ತು ಹಾಕುತ್ತದೆ ಎಂಬುದೇ ಒಂದು ದೊಡ್ಡ ಬೋಗಸ್ ತರ್ಕ ಎಂದು ಪ್ರೊ.ಪ್ರಭಾತ್ ಪಟ್ನಾಯಕ್ ಕಳೆದ ನವಂಬರ್‌ನಲ್ಲೇ ಹೇಳಿದ್ದರು. ಆರ್‌ಬಿಐನ ವರದಿ ಅದನ್ನು ಈಗ ಸಾಬೀತು ಮಾಡಿದೆ.

ಮೊಂಡುತನಕ್ಕೆ ಪಾರವೇ ಇಲ್ಲ

ಆದರೂ ಇದುವರೆಗೆ ಎಷ್ಟು ಪ್ರಮಾಣದಲ್ಲಿ ನೋಟುಗಳು ವಾಪಾಸು ಬರುವುದಿಲ್ಲ ನೋಡಿ ಎನ್ನುತ್ತಿದ್ದ ಹಣಕಾಸು ಮಂತ್ರಿಗಳು ಆರ್‌ಬಿಐ ವರದಿ ಬಂದ ಮೇಲೆ ತಿಪ್ಪರಲಾಗ ಹಾಕಿ, ಬಹಳಷ್ಟು ನೋಟುಗಳು ವಾಪಾಸು ಬಂದಿರುವುದೇ ನೊಟುರದ್ಧತಿಯ ಸಾಧನೆ ಎಂದು ಬೆನ್ನು ತಟ್ಟಿಕೊಳ್ಳುತ್ತಿದ್ದಾರೆ! ಏಕೆಂದರೆ ಈ ಕ್ರಮದಿಂದಾಗಿ ಕಪ್ಪು ಹಣ ಇಟ್ಟುಕೊಂಡಿದ್ದವರಿಂದ ಅದನ್ನು 'ಹೊರಗೆಳೆದು' ಬ್ಯಾಂಕಿಂಗ್ ವ್ಯವಸ್ಥೆಯೊಳಕ್ಕೆ ತರಲು ಸಾಧ್ಯವಾಗಿದೆ ಎಂದು ಅವರು ತರ್ಕ ಹೂಡಿದ್ದಾರೆ.

ಇದು ಅಪ್ರಾಮಾಣಿಕತೆಯ ಪರಮಾವಧಿ, ನಿಜಕ್ಕೂ ದಿಗ್ಭ್ರಮೆಗೊಳಿಸುವ ತರ್ಕ, ಈ ಸರಕಾರದ ಮೊಂಡುತನಕ್ಕೆ ಪಾರವೇ ಇದ್ದಂತಿಲ್ಲ ಎಂದು ಈ ಬಗ್ಗೆ ಪ್ರೊ. ಪಟ್ನಾಯಕ್ ಟಿಪ್ಪಣಿ ಮಾಡುತ್ತಾರೆ.

ಏಕೆಂದರೆ ಕಪ್ಪು ಹಣದಲ್ಲಿ ವ್ಯವಹರಿಸುವವರು ಹಳೆಯ ನೋಟುಗಳನ್ನು ಕೊಟ್ಟು ಹೊಸ ನೋಟುಗಳನ್ನು ಪಡೆಯಲು ಸಾಧ್ಯವಾಗಿದ್ದರೆ, ಅದ–ರಿಂದ ಕಪ್ಪು ಆರ್ಥಿಕಕ್ಕೇನೂ ಬಾಧೆ ಉಂಟಾಗುವುದಿಲ್ಲ.



ವ್ಯಂಗ್ಯಚಿತ್ರ: ಅಲೋಕ್ ನಿರಂತರ್, ಸಕಾಳ್ ಮಿಡಿಯಾ ಗ್ರುಪ್

ಹಣಕಾಸು ಮಂತ್ರಿಗಳ ತರ್ಕಕ್ಕೆ ಏನಾದರೂ ಆಧಾರ ಇರುವುದಾದರೆ ಅದು ಎರಡು ಶರತ್ತುಗಳ ಮೇಲೆ ಮಾತ್ರ ಸಾಧ್ಯ.

1. ಸಮಸ್ತ ಕಪ್ಪು ವ್ಯವಹಾರಗಳು ಕೇವಲ ನೋಟುಗಳಲ್ಲೇ ಅಂದರೆ ನಗದಾಗಿಯೇ ನಡೆಯುತ್ತವೆ, ಮತ್ತು
2. ಅವರಿಗೆ ತಾವು ಬ್ಯಾಂಕುಗಳಿಗೆ ಜಮಾ ಮಾಡಿದ ರದ್ದು ಮಾಡಿದ ಹಳೆನೋಟುಗಳ ಮೌಲ್ಯಕ್ಕಿಂತ ಕಡಿಮೆ ಮೌಲ್ಯದ ಹೊಸ ನೋಟುಗಳು ಮಾತ್ರ ಸಿಗುವಂತಾಗಿರಬೇಕು. ಅಂದರೆ ನಗದಿನ ಕೊರತೆಯಾಗಿರಬೇಕು.

ಆದರೆ ಇವೆರಡೂ ಶರತ್ತುಗಳು ಸರಕಾರದ ವರದಿಗಳ ಪ್ರಕಾರವೇ ಈಡೇರಿಲ್ಲ ಎನ್ನುತ್ತಾರೆ ಪ್ರೊ.ಪಟ್ನಾಯಕ್.

ಮೊದಲನೆಯದಾಗಿ, ಕಪ್ಪು ಅರ್ಥಿಕವ ವ್ಯವಹಾರ ನಡೆಸುವವರು ಕೇವಲ ನಗದು ವ್ಯವಹಾರವನ್ನೇ ಮಾಡುವುದಿಲ್ಲ. ಉದಾ: ಇಂತವರು ವಿಮಾನ ಟಿಕೆಟ್ಟನ್ನು ನೋಟುಗಳ ಕಂತೆಗಳನ್ನು ಕೊಟ್ಟು ಖರೀದಿಸುವುದಿಲ್ಲ, ಇಂಟರ್ನೆಟ್ ಮೂಲಕ, ಅಂದರೆ ಬ್ಯಾಂಕ್ ವರ್ಗಾವಣೆ ಮೂಲಕ ಖರೀದಿಸುತ್ತಾರೆ. ಮತ್ತು 'ಕಪ್ಪು' ವ್ಯವಹಾರ ಮತ್ತು 'ಬಿಳಿ' ವ್ಯವಹಾರ ಎಂಬದು ಎರಡು ಸಂಪೂರ್ಣ ಪ್ರತ್ಯೇಕ ವ್ಯವಹಾರಗಳಲ್ಲ. ಒಬ್ಬ ವ್ಯಕ್ತಿಯೇ ಕೆಲವು ವ್ಯವಹಾರಗಳನ್ನು ಲೆಕ್ಕ ಕೊಡದ 'ಕಪ್ಪು' ದಾರಿಯಲ್ಲಿ ಮಾಡಬಹುದು, ಇನ್ನು ಕೆಲವನ್ನು "ಬಿಳಿ' ದಾರಿಯಲ್ಲಿ ಮಾಡಬಹದು. ಸಾಮಾನ್ಯವಾಗಿ ಇವರು 'ಕಪ್ಪು' ಮತ್ತು 'ಬಿಳಿ'ಯನ್ನು ತಮ್ಮ ಅನುಕೂಲಕ್ಕೆ ತಕ್ಕಂತೆ ಬೆರೆಸುತ್ತಾರೆ. ಉದಾ: ಒಬ್ಬ ಗಣಿ ಮಾಲಿಕ ಕಾನೂನು ಪ್ರಕಾರ ಅಗೆಯಬಹುದಾದಕ್ಕಿಂತ ಹೆಚ್ಚಿನ ಖನಿಜ ಸಂಪನ್ಮೂಲಗಳನ್ನು ಅಗೆಸುವಾಗ 'ಕಪ್ಪು' ಮತ್ತು 'ಬಿಳುಪು' ಎರಡರಲ್ಲೂ ಕಾಲಿಟ್ಟಿರುತ್ತಾನೆ ಎನ್ನುತ್ತಾರೆ ಪ್ರೊ. ಪ್ರಬಾತ್ ಪಟ್ನಾಯಕ್.

ಎರಡನೆಯದಾಗಿ, ಸರಕಾರದ ಆರ್ಥಿಕ ಸರ್ವೆಯ ಪ್ರಕಾರ ಹೊಸ ನೋಟು ಮುದ್ರಣ ಸುಮಾರಾಗಿ ಪೂರ್ಣವಾಗಿದೆ, ನೋಟುಗಳ ಕೊರತೆ ಎಂಬುದು ಈಗ ಇಲ್ಲ. ಅಂದರೆ ಕಪ್ಪು ವ್ಯವಹಾರಗಳಲ್ಲಿ ತೊಡಗಿರುವವರಿಗೆ ನಗದಿನ ಕೊರತೆಯೇನೂ ಉಂಟಾಗಿಲ್ಲ. ಹಾಗಿದ್ದರೆ ಅವರ ಕಪ್ಪು ವ್ಯವಹಾರಕ್ಕೆ ಏನೇನೂ ತೊಂದರೆಯಾಗಿಲ್ಲೆಂದೇ ಅರ್ಥ ತಾನೇ? ಹಾಗಿದ್ದರೆ ಕಪ್ಪು ಆರ್ಥಿಕದ ನಾಶ ಎಲ್ಲಾಗಿದೆ?

ವಾಸ್ತವವಾಗಿ, ಹಣಕಾಸು ಮಂತ್ರಿಗಳ ತರ್ಕ ಆರ್‌ಬಿಐ ವರದಿಯಲ್ಲಿ ಹೊರಬಂದಿರುವ ಅಂಕಿ–ಅಂಶಗಳಿಮದ ಉಂಟಾಗಿರುವ ಮುಜುಗರದಿಂದ ಹೊರಬರಲು ಒಂದು ಹತಾಶ ಪ್ರಯತ್ನ ಎನ್ನುತ್ತಾರೆ ಪ್ರೊ. ಪ್ರಭಾತ್ ಪಟ್ನಾಯಕ್.

ಮತ್ತೊಂದು ಅಸಂಬದ್ಧ ತರ್ಕ

ನೋಟುರದ್ಧತಿಯಿಂದಾಗಿ ಎಲ್ಲಾ ನಗದು ಬ್ಯಾಂಕ್ ವ್ಯವಸ್ಥೆಯೊಳಕ್ಕೆ ಬಂದಿರುವುದು ಒಂದು ದೂರಗಾಮಿ ಸಕಾರಾತ್ಮಕ ಕ್ರಮ ಎಂಬುದು ಸರಕಾರದ ವಕ್ತಾರರ ಮತ್ತು ಅವರ ಬೆಂಬಲಿಗರ ಮತ್ತೊಂದು ತರ್ಕ. ಆದಾಯ ತೆರಿಗೆ ಜಾಲದೊಳಕ್ಕೆ ಹೆಚ್ಚೆಚ್ಚು ಮಂದಿ ಬರುತ್ತಿರುವುದು ಇದಕ್ಕೆ ಒಂದು ನಿದರ್ಶನ ಎಂದು ಅವರು ಹೇಳುತ್ತಿದ್ದಾರೆ.

ಇದು ಮತ್ತೊಂದು ಅಸಂಬದ್ಧ ತರ್ಕ ಎನ್ನುತ್ತಾರೆ ಪ್ರೊ. ಪಟ್ನಾಯಕ್. ಮೊದಲನೆಯದಾಗಿ ಆದಾಯ ತೆರಿಗೆ ವ್ಯವಸ್ಥೆಯೊಳಕ್ಕೆ ಎಷ್ಟು ಹೊಸ ಪ್ರವೇಶವಾಗಿದೆ ಎಂಬ ಬಗ್ಗೆ ಸರಕಾರ ವಿವಿಧ ಸಂದರ್ಭಗಳಲ್ಲಿ ಕೊಟ್ಟಿರುವ ಅಂಕಿ–ಅಂಶಗಳಲ್ಲೇ ಅಪಾರ ಅಂತರವಿದೆ.

* ಪ್ರಧಾನ ಮಂತ್ರಿಗಳ ಆಗಸ್ಟ್ 15ರ ಕೆಂಪುಕೋಟೆ ಭಾಷಣದ ಪ್ರಕಾರ 56 ಲಕ್ಷ.
* ಹಣಕಾಸು ಮಂತ್ರಿಗಳು ಮೇ 2017ರಲ್ಲಿ ಕೊಟ್ಟ ಸಂಖ್ಯೆ 91 ಲಕ್ಷ.
* ಸರಕಾರದ ಆರ್ಥಿಕ ಸರ್ವೆ, ಸಂಪುಟ 2ರಲ್ಲಿ ಕೊಟ್ಟಿರುವ ಸಂಖ್ಯೆ 5.4 ಲಕ್ಷ.
* ಆಗಸ್ಟ್ 1ರಂದು ಹಣಕಾಸು ಇಲಾಖೆ ಸಂಸತ್ತಿಗೆ ತಿಳಿಸಿದ ಸಂಖ್ಯೆ 33 ಲಕ್ಷ.

ಇಷ್ಟೊಂದು ಅಸಂಗತತೆ ಏಕೆ? ಏಕೆಂದ–ರೆ ನೋಟುರದ್ಧತಿ ವಿಫಲವಾಗಿದೆ ಎಂಬುದನ್ನು ಮುಚ್ಚಿಕೊಳ್ಳಲು ಬ್ಯಾಂಕಿಂಗ್ ವ್ಯವಸ್ಥೆಯಲ್ಲಿ ಜಮೆಯಾದ ಹಣದ ಸರಿಯಾದ ಅಂಕಿ–ಅಂಶ ತಿಳಿಯದಂತೆ ಸುಮಾರು 9 ತಿಂಗಳ ಕಾಲ ಹೇಗೋ ತಳ್ಳಿಕೊಂಡು ಬಂದ ಸರಕಾರವೇ ನೋಟುರದ್ಧತಿ ಯಶಸ್ವಿಯಾಗಿದೆ ಎಂದು ಬಿಂಬಿಸಲು ಹಿಂದಿನ ವರ್ಷಗಳಿಗೆ ಹೋಲಿಸಬಹುದಾದ ಅಂಕಿ–ಅಂಶಗಳು ಬರುವ ವರೆಗೆ ಕಾಯಲು ಸಿದ್ಧವಿರಲಿಲ್ಲ ಎಂದು ಹಣಕಾಸು ವ್ಯವಹಾರಗಳ ವಿಶ್ಲೇಷಕ ಜೇಮ್ಸ್ ವಿಲ್ಸನ್ (ವೈರ್.ಇನ್, ಸಪ್ಟಂಬರ್ 4) ಅಭಿಪ್ರಾಯ ಪಡುತ್ತಾರೆ.

ಅವರು ಮಾಡಿರುವ ಸರಕಾರೀ ಅಂಕಿ–ಅಂಶಗಳ ವಿಶ್ಲೇಷಣೆಯ ಪ್ರಕಾರಾದಾಯ ತೆರಿಗೆ ವ್ಯವಸ್ಥೆಯೊಳಕ್ಕೆ ಪ್ರವೇಶಿಸುವವರ ಸಂಖ್ಯೆ ಕಳೆದ ಕೆಲವು ವರ್ಷಗಳಿಂದ ಹೆಚ್ಚುತ್ತ ಬಂದಿದೆ. ಮೋದಿ ಸರಕಾರದ ಆಳ್ವಿಕೆಯ ಮೂರು ವರ್ಷಗಳನ್ನೇ ತೆಗೆದುಕೊಳ್ಳುವುದಾದರೆ,

2014–15	78.38 ಲಕ್ಷ
2015–16	99.98 ಲಕ್ಷ
2016–17	126.0 ಲಕ್ಷ

ಅಂದರೆ ನೋಟು ರದ್ಧತಿಯಿಲ್ಲದ 2015–16ರಲ್ಲಿ ಹಿಂದಿನ ವರ್ಷಕ್ಕೆ ಹೋಲಿಸಿದರೆ 27.6% ಹೆಚ್ಚಳವಾಗಿದ್ದರೆ, ನೋಟುರದ್ಧತಿಯ ನಂತರವೂ 2016–17ರಲ್ಲಿ ಈ ಹೆಚ್ಚಳ 26% ಮಾತ್ರ! ವಾಸ್ತವವಾಗಿ ಕೇಂದ್ರ ನೇರ ತೆರಿಗೆ ಮಂಡಳಿ(ಸಿಬಿಡಿಟಿ)ಯ ಆಗಸ್ಟ್ 7ರ ಹೇಳಿಕೆ 25% ಎಂದಿದೆ!

ಅದೇನೇ ಇರಲಿ, ಆದಾಯ ತೆರಿಗೆ ರಿಟರ್ನ್‌ಗಳನ್ನು ಸಲ್ಲಿಸುವವರ ಸಂಖ್ಯೆಯಲ್ಲಿ ಹೆಚ್ಚಳದಿಂದ ಆದಾಯ ತೆರಿಗೆ ಸಂಗ್ರಹದಲ್ಲೂ ಅಷ್ಟೇ ಹೆಚ್ಚಳ ಆಗಬೇಕೆಂದೇನಿಲ್ಲ.

ಕಳೆದ ವರ್ಷವಂತೂ 7ನೇ ವೇತನ ಆಯೋಗದ ಶಿಫಾರಸುಗಳ ಜಾರಿಯಿಂದಾಗಿ ಸಹಜವಾಗಿಯೇ ಆದಾಯ ತೆರಿಗೆ ತೆರಬೇಕಾದವರ ಸಂಖ್ಯೆ ಹೆಚ್ಚಾಗಿರುತ್ತದೆ. ಆದ್ದರಿಂದ ಆದಾಯ ತೆರಿಗೆ ರಿಟರ್ನ್‌ಗಳ ಸಂಖ್ಯೆಯಲ್ಲಿ ಹೆಚ್ಚಳಕ್ಕೂ ನೋಟುರದ್ದತಿಗೂ ಸಂಬಂಧ ಕಲ್ಪಿಸುವುದು ಅಸಂಬದ್ಧ ತರ್ಕ ಎನ್ನುತ್ತಾರೆ ಪ್ರೊ. ಪ್ರಭಾತ್ ಪಟ್ನಾಯಕ್.

ಸಂವೇದನಾಶೂನ್ಯತೆಯ ಪ್ರದರ್ಶನ

ನೋಟು ರದ್ಧತಿ ನಗದು ರಹಿತ ಆರ್ಥಿಕತೆ–ಯತ್ತ ಸಾಗಲು ಅನುವು ಮಾಡಿಕೊಟ್ಟಿದೆ ಎಂಬುದು ಮತ್ತೊಂದು ತರ್ಕ.

ಆದರೆ ನಗದುರಹಿತ ಆರ್ಥಿಕತೆಯತ್ತ ಸಾಗಲು ನೋಟು ರದ್ಧತಿಯ ಅಗತ್ಯವೇನಿಲ್ಲ. ಅದಕ್ಕಾಗಿ ನೋಟುರದ್ದತಿ ಒಂದು ಸರ್ವಾಧಿಕಾರಶಾಹಿ ಕ್ರಮ ಎಂದು ನೋಬೆಲ್ ಪ್ರಶಸ್ತಿ ಪುರಸ್ಕೃತ ಅರ್ಥಶಾಸ್ತ್ರಜ್ಞ ಅಮರ್ತ್ಯ ಸೇನ್‌ರವರ ಅಭಿಪ್ರಾಯವನ್ನು ಅನುಮೋದಿಸುತ್ತ, ಬಹುರಾಷ್ಟ್ರೀಯ ಡಿಜಿಟಲ್ ಹಣದ ಕಂಪನಿಗಳ ಲಾಭಕ್ಕಾಗಿ ನಗದುರಹಿತ ವ್ಯವಹಾರ ನಡೆಸಿ ಎಂದು ಜನಸಾಮಾನ್ಯರನ್ನು ತಳ್ಳುವ ಇಂತಹ ಕ್ರೂರ ಕ್ರಮ ಕೈಗೊಂಡಿರುವ ಬಗ್ಗೆ ಈ ಸರಕಾರ ನಾಚಿಕೆ ಪಡಬೇಕು.

ಅದರ ಬದಲು, ಇದೇ ತನ್ನ ಸಾಧನೆ ಎಂದು ಬೆನ್ನು ತಟ್ಟಿಕೊಳ್ಳುತ್ತಿರುವುದು ಈ ಸರಕಾರ ಜನಸಾಮಾನ್ಯರ ಸಂಕಟಗಳ ಬಗ್ಗೆ ಎಷ್ಟು ಸಂವೇದನಾಶೂನ್ಯವಾಗಿದೆ ಎಂಬುದನ್ನೇ ತೋರಿಸುತ್ತದೆ ಎಂದು ಪ್ರೊ. ಪ್ರಭಾತ್ ಪಟ್ನಾಯಕ್ ಖೇದ ವ್ಯಕ್ತ ಪಡಿಸುತ್ತಾರೆ.

(ನ್ಯೂಸ್‌ಕ್ಲಿಕ್‌ನಲ್ಲಿ ಸಂದರ್ಶನದಲ್ಲಿ, ಸಪ್ಟಂಬರ್ 1).

ದಲಿತ ವಿದ್ಯಾರ್ಥಿನಿ ಅನಿತಾಗೆ ನ್ಯಾಯ: ತಮಿಳುನಾಡಿನಾದ್ಯಂತ ನೀಟ್-ವಿರೋಧಿ ಪ್ರತಿಭಟನೆ



ಕಠಿಣ ಶ್ರಮದ ನಂತರವೂ ವೈದ್ಯಕೀಯ ಶಿಕ್ಷಣ ಪಡೆಯಬೇಕೆಂಬ ಹಂಬಲ ಕೇಂದ್ರ ಸರಕಾರದ ವಿನಾಶಕಾರಿ ಕ್ರಮ ಮತ್ತು ತಮಿಳುನಾಡು ಸರಕಾರದ ವಿಫಲತೆಯಿಂದಾಗಿ ಈಡೇರದ್ದರಿಂದ ಹತಾಶಳಾಗಿ ಆತ್ಮಹತ್ಯೆ ಮಾಡಿಕೊಂಡಿರುವ ಅನಿತಾಳಿಗೆ ನ್ಯಾಯ ಒದಗಿಸಬೇಕೆಂದು ತಮಿಳುನಾಡಿನಾದ್ಯಂತ ವಿದ್ಯಾರ್ಥಿಗಳು ಪ್ರತಿಭಟನೆ ನಡೆಸುತ್ತಿದ್ದಾರೆ.

ವೈದ್ಯಕೀಯ ಕಾಲೇಜುಗಳಲ್ಲಿ ಪ್ರವೇಶ ಪಡೆಯಲು ರಾಷ್ಟ್ರೀಯ ಅರ್ಹತೆ-ಪ್ರವೇಶ ಪರೀಕ್ಷೆ(ಎನ್‌ಇಇಟಿ-ನೀಟ್) ಏಕೈಕ ಮಾನದಂಡವಾಗಬೇಕೆಂಬ ಕೇಂದ್ರ ಸರಕಾರದ ಧೋರಣೆಗೆ ಹಲವು ರಾಜ್ಯಗಳಿಂದ ಆಕ್ಷೇಪಣೆ ಬಂದಿತ್ತು. ಇದು ಅತ್ಯುತ್ತಮ ಶಿಕ್ಷಣ ಪಡೆಯುವ ಕೇಂದ್ರೀಯ ಬೋರ್ಡ್‌ಗಳ ವಿದ್ಯಾರ್ಥಿಗಳಿಗೆ ಪ್ರಯೋಜನಕಾರಿಯಾಗಿದ್ದು ರಾಜ್ಯ ಶಿಕ್ಷಣ ಮಂಡಳಿಗಳು ಮತ್ತು ಹಿಂದುಳಿದ ವಿಭಾಗಗಳಿಂದ ಬಂದಿರುವ ವಿದ್ಯಾರ್ಥಿಗಳನ್ನು ಹೊರಗಿಡುವಂತದ್ದು ಎಂಬುದು ಮುಖ್ಯ ಆಕ್ಷೇಪ. ಅಲ್ಲದೆ ತಮಿಳುನಾಡು ಮತ್ತು ಪಶ್ಚಿಮ ಬಂಗಾಲದಲ್ಲಿ ಭಿನ್ನ ಪರಿಕ್ಷಾ ಪತ್ರಗಳನ್ನು ಕೊಡಲಾಗಿದೆ ಎಂದೂ ಹೇಳಲಾಗಿದೆ. ಕಳೆದೆರಡು ವರ್ಷಗಳ ಅನುಭವ ಈ ಪ್ರವೇಶ ಪರಿಕ್ಷೆಯ ಬಗ್ಗೆ ಎದ್ದಿರುವ ವಿವಾದಗಳಲ್ಲಿ ಸತ್ಯಾಂಶ ಇರುವುದನ್ನು ತೋರಿಸಿದೆ ಯಾದರೂ ಕೇಂದ್ರ ಸರಕಾರ ಇಂತಹ ವಿದ್ಯಾರ್ಥಿಗಳ ಅಹವಾಲಿಗೆ ಕಿವಿಗೊಡಲೂ ನಿರಾಕರಿಸಿದೆ.

ಎಸ್.ಅನಿತಾ ಅರಿಯಲೂರ್ ಜಿಲ್ಲೆಯ ಒಬ್ಬ ವಿದ್ಯಾರ್ಥಿನಿ. ಬಡ ದಲಿತ ಕುಟುಂಬಕ್ಕೆ ಸೇರಿದ ಈಕೆ ಮೆಡಿಕಲ್ ಕಾಲೇಜು ಸೇರುವ ಹಂಬಲದಿಂದ ತನ್ನ ಅತ್ಯಂತ ಕಷ್ಟಕರ ಸನ್ನಿವೇಶದಲ್ಲೂ ಶ್ರಮ ವಹಿಸಿ ಓದಿ ತಮಿಳುನಾಡು ಬೋರ್ಡ್ ಪರೀಕ್ಷೆಯಲ್ಲಿ 1200 ರಲ್ಲಿ 1176 ಅಂಕಗಳನ್ನು ಪಡೆದು ನೀಟ್ ಕಡ್ಡಾಯವಿರದಿದ್ದ ಸಮಯದ ಪ್ರವೇಶ ವಿಧಾನದಲ್ಲಿ ತಮಿಳುನಾಡಿನ ಅತ್ಯುತ್ತಮ ಮೆಡಿಕಲ್ ಕಾಲೇಜುಗಳಲ್ಲಿ ಸುಲಭವಾಗಿ ಪ್ರವೇಶ ಪಡೆಯಬಹುದಾಗಿತ್ತು. ಆದರೆ ಕೇಂದ್ರ ಸರಕಾರ ದೇಶದ ಎಲ್ಲೆಡೆಗಳಲ್ಲಿ ಸಮಾನ ಗುಣಮಟ್ಟದ ಶಿಕ್ಷಣ ಕೊಡಲಾಗದಿದ್ದರೂ, ಮೆಡಿಕಲ್ ಕಾಲೇಜ್ ಪ್ರವೇಶಕ್ಕೆ ಮಾತ್ರ ನೀಟ್ ನ್ನು ಏಕಮಾತ್ರ ಅರ್ಹತೆಯೆಂದು ವಿಧಿಸಿದ್ದರಿಂದ ಅದು ಸಾಧ್ಯವಾಗಿಲ್ಲ.

ಈ ನೀಟ್ ವಿರುದ್ಧ ಸುಪ್ರಿಂ ಕೋರ್ಟಿನಲ್ಲಿ ಹಲವು ಅರ್ಜಿಗಳಿವೆ, 17 ವರ್ಷದ ಅನಿತಾ ಕೂಡ ಅರ್ಜಿದಾರಳಲ್ಲಿ ಒಬ್ಬಳು. ಜಯಲಲಿತಾ ಸಾವಿನ ನಂತರ ಅತಂತ್ರ ಸ್ಥಿತಿಯಲ್ಲಿರುವ ತಮಿಳುನಾಡಿನ ಎಐಡಿಎಂಕೆ ಸರಕಾರ ತಮಿಳುನಾಡಿಗೆ ಈ ವರ್ಷಕ್ಕೆ ಈ ಪರೀಕ್ಷೆಯಿಂದ ವಿನಾಯ್ತಿ ಪಡೆಯುವುದಾಗಿ ಭರವಸೆ ನಿಡಿದ್ದರೂ, ತಮಿಳುನಾಡಿನಲ್ಲಿ ಕಾಲೂರಲು ಪ್ರಯತ್ನಿಸುತ್ತಿರುವ ಕೇಂದ್ರದ ಆಳುವ ಪಕ್ಷದ ಮುಖಂಡರೂ ಈ ಬಗ್ಗೆ ಆಸೆ ಹುಟ್ಟಿಸಿದ್ದರೂ ಕೊನೆಗೂ ಅನಿತಾ ಪಕ್ಷಪಾತಪೂರ್ಣ ನೀಟ್ ಪರೀಕ್ಷೆ ಬರೆಯಲೇ ಬೇಕಾಗಿ ಬಂತು. ಆದರೆ ಉತ್ತಮ ಅಂಕಗಳು ದೊರೆಯದ್ದರಿಂದ ಮೆಡಿಕಲ್ ಸೀಟ್ ಸಿಗಲಿಲ್ಲ, ವೆಟೆರಿನರಿ ಕಾಲೇಜಿನಲ್ಲಿ ಸೀಟು ಸಿಕ್ಕಿತು. ಇದರಿಂದ ಹತಾಶಳಾದ ಆಕೆ ಆತ್ಮಹತ್ಯೆ ಮಾಡಿಕೊಂಡಳು.

ಈ ಆತ್ಮಹತ್ಯೆಯಿಂದಾಗಿ ಈಗ ಈ ಪರಿಕ್ಷೆಯಲ್ಲಿನ ಪಕ್ಷಪಾತಗಳ ಬಗ್ಗೆ ಪರಾಮರ್ಶೆ ನಡೆಸುವಂತೆ ಒತ್ತಾಯ ಗಟ್ಟಿಗೊಳ್ಳುವಂತಾಗಿದೆ.

ಅನಿತಾಳ ಸಾವಿಗೆ ಕೇಂದ್ರಮತ್ತು ರಾಜ್ಯ ಸರಕಾರಗಳು ಹೊಣೆ ಎಂದಿರುವ ಸಿಪಿಐ(ಎಂ) ತಮಿಳುನಾಡು ರಾಜ್ಯಸಮಿತಿ ಇದರ ವಿರುದ್ಧ ಪ್ರತಿಭಟನೆ ನಡೆಸಲು ಕರೆ ನೀಡಿತ್ತು.

ಎಸ್‌ಎಫ್‌ಐನ ಕೇಂದ್ರೀಯ ಕಾರ್ಯಕಾರಿ ಮಂಡಳಿ ಇನ್ನಷ್ಟು ಅನಿತಾಗಳ ಸಾವನ್ನು ತಡೆಯಲು ಈ ಪರೀಕ್ಷೆಯ ಸರಿಯಾದ ಪರಾಮರ್ಶೆ ನಡೆಸಬೇಕು ಎಂದು ಆಗ್ರಹಿಸಿದೆ. ಭಾಷೆ ಮತ್ತಿತರ ಪಕ್ಷಪಾತದ ಮೂಲಗಳನ್ನು ಪರಿಶೀಲಿಸಬೇಕು. ತಮ್ಮ ಆರ್ಥಿಕ ಮತ್ತು ಸಾಮಾಜಿಕ ಅಡೆತಡೆಗಳನ್ನು ದಾಟಿ ಬರಲು ಹೋರಾಡಬೇಕಾದ ವಂಚಿತ ವಿಭಾಗಗಳ ವಿದ್ಯಾರ್ಥಿಗಳಿಗೆ ನೀಟ್‌ನ್ನು ದಾಟಲು ಮತ್ತು ನೀಟ್ ಉಂಟು ಮಾಡಿರುವ ಅನಿರ್ದಿಷ್ಟತೆಯನ್ನು ಮೀರಿ ನಿಲ್ಲಲು ಆಗುತ್ತಿಲ್ಲ ಎಂದು ಅಭಿಪ್ರಾಯ ಪಟ್ಟಿರುವ ಅದು ಅನಿತಾಳ ಆತ್ಮಹತ್ಯೆ ಹೇಗೆ ನಮ್ಮ ವ್ಯವಸ್ಥೆ ವಿದ್ಯಾರ್ಥಿಗಳನ್ನು ಕೊಲ್ಲುತ್ತಿದೆ ಎಂಬುದಕ್ಕೆ ಉದಾಹರಣೆಯಾಗಿದೆ ಎಂದು ಖೇದ ವ್ಯಕ್ತಪಡಿಸಿದೆ.

ಹರ್ಯಾಣ ಕಾನೂನು ಅವ್ಯವಸ್ಥೆ-ಕೇರಳದಲ್ಲಿ ಸುವ್ಯವಸ್ಥೆ ಕೆಡಿಸುವ ಬಿಜೆಪಿ 'ಯಾತ್ರೆ'ಗೆ ಪೇಚು!

ಸೆಪ್ಟಂಬರ್ 7 ರಂದು ಬಿಜೆಪಿ ಅಧ್ಯಕ್ಷ ಅಮಿತ್ ಷಾ ಕೇರಳದಲ್ಲಿ 'ಕಾನೂನು ಹೀನತೆ'ಯ ವಿರುದ್ಧ 'ಜನರಕ್ಷಾ ಯಾತ್ರಾ' ಆರಂಭಿಸುವ ಯೋಜನೆ ಇತ್ತು. ಆದರೆ ಹರ್ಯಾಣದಲ್ಲಿ ಕಳೆದ ವಾರ 36 ಜನರನ್ನು ಬಲಿ ತೆಗೆದುಕೊಂಡು, 200ಕ್ಕೂ ಹೆಚ್ಚು ಮಂದಿಯನ್ನು ಗಂಭೀರವಾಗಿ ಗಾಯಗೊಳಿಸಿದ ವ್ಯಾಪಕ ಗಲಭೆಗಳು 'ಕಾನೂನು-ಸುವ್ಯವಸ್ಥೆ' ನಿಜವಾಗಿಯೂ ಸಂಪೂರ್ಣ ಕೆಟ್ಟಿರುವುದು ಬಿಜೆಪಿ ಆಳ್ವಿಕೆಯ ರಾಜ್ಯಗಳಲ್ಲೇ ಹೊರತು, ಕೇರಳದಲ್ಲಂತೂ ಖಂಡಿತಾ ಅಲ್ಲ ಎಂದು ಬಿಜೆಪಿ ಬೆಂಬಲಿಗರ ಮುಖಕ್ಕೂ ರಾಚುವಂತೆ ಪ್ರದರ್ಶಿಸಿದರಿಂದ ಮುಜುಗರಕ್ಕೆ ಒಳಗಾದ ಬಿಜೆಪಿ ಈ ಕೇರಳ ಯಾತ್ರೆಯನ್ನು ಮುಂದೂಡಬೇಕಾಗಿ ಬಂದಿದೆ ಎಂದು ವರದಿಯಾಗಿದೆ.

ಕಣ್ಣೂರಿನ ಪಯ್ಯನೂರಿನಿಂದ ಆರಂಭವಾಗಿ ರಾಜಧಾನಿ ತಿರುವನಂತಪುರದಲ್ಲಿ ಕೊನೆಗೊಳ್ಳಬೇಕಾಗಿದ್ದ ಈ ಯಾತ್ರೆಯ ಮೊದಲ ಎರಡು ದಿನಗಳಲ್ಲಿ ಸ್ವತಃ ಬಿಜೆಪಿ ಅಧ್ಯಕ್ಷರು, ರಾಜ್ಯ ಬಿಜೆಪಿ ಅಧ್ಯಕ್ಷರೊಂದಿಗೆ ಎರಡು ದಿನ 'ಯಾತ್ರೆ' ನಡೆಸುವ ಯೋಜನೆಯಿತ್ತಂತೆ. ಆದರೆ ಈಗ ಬಿಜೆಪಿ ಅಧ್ಯಕ್ಷರ ಅನಾನುಕೂಲತೆಯಿಂದಾಗಿ ಅದನ್ನು ಮುಂದೂಡಲಾಗಿದೆ ಎಂದು ಪಕ್ಷ ಹೇಳಿದೆ. ಆದರೆ ಇದು ಹರ್ಯಾಣ ದಲ್ಲಿ ಅದರ ಸರಕಾರದ ಶೋಚನೀಯ ವಿಫಲತೆ, ಮಾತ್ರವಲ್ಲ ಮತ್ತು ಕಾನೂನು ಮುರಿಯುವವರೊಂದಿಗೆ ಶಾಮೀಲು ಉಂಟು ಮಾಡಿದ ರಾಜಕೀಯ ಅನಾನುಕೂಲತೆ ಎಂಬುದು ಎಲ್ಲರಿಗೂ ತಿಳಿದಿರುವ ಸಂಗತಿ.

ಬಿಜೆಪಿ ಅಧ್ಯಕ್ಷರು ಕಾನೂನು-ಸುವ್ಯವಸ್ಥೆ ಕೆಡಿಸಲು ಕೇರಳಕ್ಕೆ 'ಯಾತ್ರೆ' ಬರುವ ಬದಲು ಉತ್ತರಪ್ರದೇಶ, ಮಧ್ಯಪ್ರದೇಶ ಮತ್ತು ಹರ್ಯಾಣದಲ್ಲಿ ತಮ್ಮ ಯಾತ್ರೆ ನಡೆಸಲಿ ಎಂದು ಸಿಪಿಐ(ಎಂ) ಕಣ್ಣೂರು ಜಿಲ್ಲಾ ಕಾರ್ಯದರ್ಶಿ ಪಿ.ಜಯರಾಜನ್ ಕಿವಿಮಾತು ಹೇಳಿದ್ದಾರೆ.

ಅಸ್ಸಾಂನಲ್ಲಿ ಲೂಯಿ ಬರ್ಗರ್ ಲಂಚ ಪ್ರಕರಣ-ಹೈಕೋರ್ಟ್ ಆದೇಶದಿಂದ ಬಿಜೆಪಿ ನಿಜ ಚಾರಿತ್ರ್ಯ ಮತ್ತೆ ಬಯಲಿಗೆ

ಲೂಯಿ ಬರ್ಗರ್ ಎಂಬುದು ಅಮೆರಿಕಾದ ನ್ಯೂಜೆರ್ಸಿಯಲ್ಲಿರುವ ಒಂದು ಸಲಹಾ ಕಂಪನಿ. ಅದು ಭಾರತದ ಅಸ್ಸಾಂ ಮತ್ತು ಗೋವಾ ಸರಕಾರಗಳ ಜಲನಿರ್ವಹಣಾ ಪ್ರಾಜೆಕ್ಟುಗಳಲ್ಲಿ ಸಲಹೆಯ ಕಾಂಟ್ರಾಕ್ಟ್ ಪಡೆಯಲು ಅಪಾರ ಪ್ರಮಾಣದ ಲಂಚವನ್ನು ಕೊಟ್ಟಿತ್ತು ಎಂದು ಅದರ ಅಧಿಕಾರಿಗಳು ಅಮೆರಿಕಾದ ನ್ಯಾಯಾಲಯವೊಂದರಲ್ಲಿ ವಿಚಾರಣೆಯ ವೇಳೆಗೆ 2015ರಲ್ಲಿ ಒಪ್ಪಿಕೊಂಡಿದ್ದರು.

ಇವು ಎರಡೂ ರಾಜ್ಯಗಳಲ್ಲಿ ಕಾಂಗ್ರೆಸ್ ಸರಕಾರಗಳಿದ್ದ ಸಮಯದ ಪ್ರಕರಣಗಳು. ಆದ್ದರಿಂದ ಅಮೆರಿಕನ್ ನ್ಯಾಯಾಂಗ ಅಧಿಕಾರಿಗಳ ಕೋರಿಕೆ ಬಂದಾಗ ಗೋವಾದ ಬಿಜೆಪಿ ಸರಕಾರ ತನಿಖೆಗೆ ಆದೇಶ ನೀಡಿತು. ಅಸ್ಸಾಂನಲ್ಲೂ ಬಿಜೆಪಿ ಆಗ ಅಧಿಕಾರದಲ್ಲಿ ಇಲ್ಲದ್ದರಿಂದ ಈ ಬಗ್ಗೆ ತಕ್ಷಣ ತನಿಖೆ ನಡೆಸಬೇಕು ಎಂದು ಗಲಾಟೆ ಎಬ್ಬಿಸಿತ್ತು.

ಆದರೆ ಅಧಿಕಾರಕ್ಕೆ ಬಂದ ಮೇಲೆ ಈ ನಿಟ್ಟಿನಲ್ಲಿ ಯಾವ ಕ್ರಮವನ್ನೂ ಕೈಗೊಳ್ಳಲಿಲ್ಲ. ಏಕೆಂದರೆ ಆ ಹಗರಣದಲ್ಲಿ ಸಿಲುಕಿಕೊಂಡಿರುವ ಹಿಮಂತ ಬಿಸ್ವಾಸ್ ಶರ್ಮ ಕಳೆದ ವಿಧಾನಸಭಾ ಚುನಾವಣೆಯ ವೇಳೆಗೆ ಕಾಂಗ್ರೆಸಿನಿಂದ ಬಿಜೆಪಿಗೆ ಹಾರಿ ಈಗ ಬಿಜೆಪಿ ಸರಕಾರದಲ್ಲಿ ಮಂತ್ರಿಯಾಗಿದ್ದಾರೆ!

ಈ ನಡುವೆ ಗೌಹಾಟಿ ಹೈಕೋರ್ಟಿನಲ್ಲಿ ಈ ಕುರಿತು ಸ್ವತಂತ್ರ ತನಿಖೆ ನಡೆಸುವಂತೆ ಸಾರ್ವಜನಿಕ ಹಿತಾಸಕ್ತಿಯ ಅರ್ಜಿಯ ವಿಚಾರಣೆ ಆರಂಭವಾಯಿತು. ಆದರೆ ರಾಜ್ಯ ಸರಕಾರದ ಸಿಐಡಿ ವಿಚಾರಣೆ ಮಂದಗತಿಯಲ್ಲೇ ಸಾಗಿತು. ಈ ನಡುವೆ ತನಿಖೆ ನಡೆಸುತ್ತಿದ್ದ ತಂಡದ ಮುಖ್ಯಸ್ಥರಾಗಿದ್ದ ಐಪಿಎಸ್ ಅಧಿಕಾರಿಯನ್ನು ಬೇರಾವುದೋ ಕೇಸಿಗೆ ಸಂಬಂಧಿಸಿದಂತೆ ಅಮಾನತು ಮಾಡಿ ತನಿಖೆಯ ನೇತೃತ್ವವನ್ನು ವಹಿಸಿದ ಪೋಲಿಸ್ ಅಧಿಕಾರಿ ಈ ಮಂತ್ರಿಯ ಪಕ್ಷಪಾತಿ ಎಂಬ ಆಪಾದನೆ ಬಂದುದರಿಂದ ಅವರನ್ನೂ ಬದಲಿಸಲಾಗಿದೆ. ಅವರ ಸ್ಥಾನದಲ್ಲಿ ನೇಮಿಸಿದ ಅಧಿಕಾರಿ ಇನ್ನೂ ತನಿಖೆಯ ನೇತೃತ್ವ ವಹಿಸಿಕೊಂಡಿಲ್ಲ. ಹೈಕೋರ್ಟಿಗೆ ತನಿಖೆಯ ಪ್ರಗತಿಯನ್ನು ತಿಳಿಸುವಲ್ಲಿ ಮೂರು ಬಾರಿ ವಿಫಲವಾಗಿದೆ

ಈ ಹಿನ್ನೆಲೆಯಲ್ಲಿ ಗೌಹಾಟಿ ಹೈಕೋರ್ಟ್ ಸಪ್ಟಂಬರ್ 1ರಂದು ನೀಡಿದ ಆದೇಶದಲ್ಲಿ "ತನಿಖಾ ಸಂಸ್ಥೆ ಸಿಐಡಿ ಪ್ರಾಮಾಣಿಕತೆಯಿಂದ ಕೆಲಸ ಮಾಡುತ್ತಿಲ್ಲ, ಪಕ್ಷಪಾತದಿಂದ ಕೆಲಸ ನಡೆಸುತ್ತಿದೆ ಎಂಬುದು ಸ್ಫಟಿಕ ಸ್ಪಷ್ಟ. ಅಗಾಧ ಮೊತ್ತದ ಸಾರ್ವಜನಿಕ ಹಣದ ದುರ್ಬಳಕೆಯ ಆಪಾದನೆಗಳ ರಹಸ್ಯ ರಾಜ್ಯದ ಜನತೆಯನ್ನು ಅನಿರ್ದಿಷ್ಟವಾಗಿ ಕಾಡುವಂತಾಗಬಾರದು, ಇದಕ್ಕೊಂದು ತಾರ್ಕಿಕ ಅಂತ್ಯ ತರಬೇಕು" ಎಂದು ಖಾರವಾಗಿ ಹೇಳಿರುವುದಾಗಿ ವೈರ್. ಇನ್ ವರದಿ ಮಾಡಿದೆ. ಸಿಐಡಿ ರಾಜ್ಯ ಸರಕಾರದ ಅಡಿಯಿರುವುದರಿಂದ ಮತ್ತು ರಾಜ್ಯಸರಕಾರದ ಉನ್ನತ ವ್ಯಕ್ತಿಗಳು ಈ ಅಪಾರ ಪ್ರಮಾಣದ ಲಂಚದ ಹಗರಣದಲ್ಲಿ ಇರುವುದರಿಂದ ಸಿಐಡಿ ಸ್ವತಂತ್ರ ತನಿಖೆ ನಡೆಸಿ ನ್ಯಾಯಯುತ ತೀರ್ಮಾನಕ್ಕೆ ಬರುವ ಸ್ಥಿತಿಯಲ್ಲಿ ಇಲ್ಲವಾದ್ದರಿಂದ ಈ ತನಿಖೆಯನ್ನು ಸಿಬಿಐಗೆ ವಹಿಸುವಂತೆ ಹೈಕೋರ್ಟ್ ಆದೇಶಿಸಿದೆ.

ಬಿಜೆಪಿಯ 'ಸುಶಾಸನ'ದ ಮತ್ತು ಭ್ರಷ್ಟಾಚಾರಕ್ಕೆ ವಿರೋಧದ ಮಾತುಗಳು ಎಷ್ಟು ಹುಸಿ ಎಂದು ಈ ಮೂಲಕ ಮತ್ತೊಮ್ಮೆ ಬಯಲಿಗೆ ಬಂದಿದೆ.

ಉತ್ತರಪ್ರದೇಶ: ಭಯೋತ್ಪಾದಕ ಪಿತೂರಿಯೇನೂ ಇರಲಿಲ್ಲ

ಉತ್ತರಪ್ರದೇಶದ ವಿಧಾನಸಭೆಯಲ್ಲಿ ಜುಲೈ12ರಂದು ಪೊಲಿಥೀನ್ ಚೀಲವೊಂದರಲ್ಲಿ ಇದ್ದ ಹುಡಿ ಅಲ್ಲಿನ ಮುಖ್ಯಮಂತ್ರಿಗಳು ಟಾಂಟಾಂ ಮಾಡಿದಂತೆ ಭಾರೀ ಅಪಾಯಕಾರಿ ಪಿಇಟಿಎನ್ ಸ್ಫೋಟಕವೇನೂ ಅಲ್ಲ, ಬದಲಿಗೆ ಅದು ಗಾಜು ಮತ್ತು ಮಿಶ್ರಲೋಹ ಮಾಡಲು ಬಳಸುವ ಯಾವುದೇ ರೀತಿಯಲ್ಲಿ ಅಪಾಯಕಾರಿಯಲ್ಲದ 'ಕ್ವಾರ್ಟ್ಜ್' ಅಷ್ಟೇ ಎಂದು ಸ್ವತಃ ಎನ್‌ಐಎ (ರಾಷ್ಟ್ರೀಯ ತನಿಖಾ ಸಂಸ್ಥೆ)ಯೇ ಹೇಳಿದೆ ಎಂದು ವರದಿಯಾಗಿದೆ.

ಈ ಚೀಲ ಪ್ರತಿಪಕ್ಷದ ಮುಖಂಡರ ಆಸನದ ಕೆಳಗೆ ಕಂಡು ಬಂದಾಗ 'ಇದೊಂದು ಅಪಾಯಕಾರಿ ಭಯೋತ್ಪಾದಕ ಪಿತೂರಿ' ಎಂದು ಹೊಸ ಮುಖ್ಯಮಂತ್ರಿಗಳು ಹಾರಾಡಿದ್ದರು. "ಇದು ಪಿಇಟಿಎನ್, ಒಂದು ಅಪಾಯಕಾರಿ ವಸ್ತು. ಇದರ ಹಿಂದೆ ಯಾರಿದ್ದಾರೆ ಎಂದು ಬಯಲಾಗುತ್ತದೆ. ಪ್ರತಿಯೊಬ್ಬ ಭದ್ರತಾ ಸಿಬ್ಬಂದಿಯ ಪೋಲೀಸ್ ತನಿಖೆ ನಡೆಸಬೇಕು" ಎಂದು ಅವರು ಹೇಳಿರುವುದಾಗಿ ವರದಿಯಾಗಿತ್ತು. ಇದನ್ನನುಸರಿಸಿ ವಿಧಾನ ಭವನಕ್ಕೆ ಮಾಜಿ ಶಾಸಕರ ಪ್ರವೇಶವನ್ನು ನಿಷೇಧಿಸಲಾಯಿತು.

ಲಕ್ನೌನ ಫೋರೆನ್ಸಿಕ್ ಪ್ರಯೋಗಾಲಯ ಇದರಲ್ಲಿ ಪಿಇಟಿಎನ್ ಅಂಶವನ್ನು ಪತ್ತೆ ಮಾಡಿದೆ ಎಂದೂ ಮುಖ್ಯಮಂತ್ರಿಗಳು ಹೇಳಿರುವುದಾಗಿ ವರದಿಯಾಗಿತ್ತು. ಆಗ್ರಾದ ಫೋರೆನ್ಸಿಕ್ ಪ್ರಯೋಗಾಲಯ ಇಂತಹ ಸ್ಫೋಟಕವೇನೂ ಕಂಡು ಬಂದಿಲ್ಲ ಎಂದು ಹೇಳಿರುವುದಾಗಿ ಸುದ್ದಿ ಬಂದಾಗ ಆ ಪ್ರಯೋಗಾಲಯಕ್ಕೆ ಪರೀಕ್ಷಣೆಗೆ ಯಾವುದೇ ಸ್ಯಾಂಪಲನ್ನು ಕಳಿಸಿಯೇ ಇಲ್ಲ, ಆ ವಸ್ತು ಪಿಇಟಿಎನ್ ಖಂಡಿತ ಎಂದು ರಾಜ್ಯದ ಪ್ರಮುಖ ಕಾರ್ಯದರ್ಶಿ ಹೇಳಿದ್ದುದಾಗಿಯೂ ವರದಿಯಾಗಿತ್ತು.

ಎನ್‌ಐಎ ಕಾನೂನುಬಾಹಿರ ಚಟುವಟಿಕೆಗಳು (ತಡೆ) ಕಾಯ್ದೆಯ ಅಡಿಯಲ್ಲಿ ಪ್ರಕರಣವನ್ನು ದಾಖಲಿಸಿಕೊಂಡು ಪರೀಕ್ಷಣೆ, ತನಿಖೆ ನಡೆಸಿ ಮೇಲೆ ಹೇಳಿದಂತೆ ಅದು ಪಿಇಟಿಎನ್ ಸ್ಫೋಟಕ ಅಲ್ಲ, ನಿರಪಾಯಕಾರಿಯಾದ 'ಕ್ವಾರ್ಟ್ಜ್' ಎಂಬ ತೀರ್ಮಾನಕ್ಕೆ ಬಂದು ಎಲ್ಲ ಪಿತೂರಿ ಊಹಾಪೋಹಗಳನ್ನು ಕೊನೆಗೊಳಿಸಿದೆ.

ರಾಜ್ಯಗಳ ಸುತ್ತ



ಕಾಂ. ಸುಬೋಧ್ ಮೆಹ್ತಾ ನಿಧನ



ಗುಜರಾತಿನ ಹಿರಿಯ ಕಾರ್ಮಿಕ ಮುಂದಾಳು, ಸ್ವಾತಂತ್ರ್ಯ ಹೋರಾಟಗಾರ ಕಾಂ. ಸುಬೋಧ ಮೆಹ್ತಾ ಸಪ್ಟಂಬರ್ 2ರಂದು ನಿಧನರಾಗಿದ್ದಾರೆ.

ಅವರು ಸಿಐಟಿಯುನ ಗುಜರಾತ್ ರಾಜ್ಯ ಅಧ್ಯಕ್ಷರಾಗಿ, ಸಿಪಿಐಎಂ)ನ ರಾಜ್ಯ ಕಾರ್ಯದರ್ಶಿ ಮತ್ತು ಕೇಂದ್ರ ಸಮಿತಿ ಸದಸ್ಯರಾಗಿ ರಾಜ್ಯದ ದುಡಿಯುವ ಜನರ ಹೋರಾಟಗಳಿಗೆ ನೇತೃತ್ವ ನೀಡಿದವರು. ರಾಜ್ಯದಲ್ಲಿ ಕಾರ್ಮಿಕ-ರೈತ ಮೈತ್ರಿ ಕಟ್ಟುವಲ್ಲಿ, ಕೋಮುವಾದಿ ಶಕ್ತಿಗಳಿಗೆ ಪ್ರತಿರೋಧ ಕಟ್ಟುವಲ್ಲಿ ಅವರ ಕೊಡುಗೆ ಅಪಾರ ಎಂದು ಅಖಿಲ ಭಾರತ ಕಿಸಾನ್ ಸಭಾ ತನ್ನ ಶ್ರದ್ಧಾಂಜಲಿಯಲ್ಲಿ ನೆನಪಿಸಿಕೊಂಡಿದೆ.

ಕೇರಳ ಸಿಪಿಐ(ಎಂ) ಮುಖಂಡರ ವಿರುದ್ಧ ಸಿಬಿಐನಿಂದ ಯುಎಪಿಎ ದುರುಪಯೋಗ

ಕಾನೂನು ಬಾಹಿರ ಚಟುವಟಿಕೆಗಳ ತಡೆ ಕಾಯ್ದೆ, ಯುಎಪಿಎ ಭಯೋತ್ಪಾದಕ ಕೃತ್ಯಗಳ ಸಂದರ್ಭದಲ್ಲಿ ಬಳಸಬೇಕಾದ ಕಾಯ್ದೆ. ಇದನ್ನು ಸಿಪಿಐ(ಎಂ) ಕೇರಳ ರಾಜ್ಯಸಮಿತಿ ಸದಸ್ಯ ಮತ್ತು ಕಣ್ಣೂರು ಜಿಲ್ಲಾಸಮಿತಿ ಕಾರ್ಯದರ್ಶಿ ಪಿ. ಜಯರಾಜನ್ ವಿರುದ್ಧ ಪಿತೂರಿಯ ಆಪಾದನೆ ಹಾಕಲು ಸಿಬಿಐ ಬಳಸಿರುವುದನ್ನು ಸಿಪಿಐ(ಎಂ) ಪೊಲಿಟ್‌ಬ್ಯುರೊ ಬಲವಾಗಿ ಖಂಡಿಸಿದೆ. ಇದು ಒಬ್ಬ ರಾಜಕೀಯ ಮುಖಂಡರ ಮೇಲೆ ಗುರಿಯಿಡುವ ದುರುದ್ದೇಶ ಪೂರ್ಣ ಕ್ರಮ ಎಂದು ಅದು ಹೇಳಿದೆ.



ಜಿನೀವಾದಲ್ಲಿ 106ನೇ ಐಎಲ್‌ಸಿ ಅಧಿವೇಶನ:

ಒಂದು ಸಮರಶೀಲ ಅಂತರ್‌ರಾಷ್ಟ್ರೀಯ ಕಾರ್ಮಿಕ ಸಂಘಟನೆಯ ಅಗತ್ಯ



ಜಿನೀವಾದಲ್ಲಿ 106ನೇ ಅಂತರರಾಷ್ಟ್ರೀಯ ಕಾರ್ಮಿಕ ಸಮ್ಮೇಳನವು (ಐ.ಎಲ್.ಸಿ) ಕಳೆದ ಜೂನ್ ತಿಂಗಳಲ್ಲಿ ನಡೆಯಿತು. ಇದರ ಆಡಳಿತ ಮಂಡಳಿಯಾದ ಅಂತರರಾಷ್ಟ್ರೀಯ ಕಾರ್ಮಿಕ ಸಂಘಟನೆ (ಐ.ಎಲ್.ಒ)–ವರ್ಷದುದ್ದಕ್ಕೂ ಹಲವಾರು ಸುತ್ತುಗಳ ಸಭೆಯನ್ನು ನಡೆಸಿ, ನಾಲ್ಕು ವಿಷಯಗಳನ್ನು ಚರ್ಚೆಗೆ ತೆಗೆದುಕೊಳ್ಳಲು ಅಂತಿಮವಾಗಿ ನಿರ್ಣಯ ಕೈಗೊಂಡಿತು.

ಅವುಗಳೆಂದರೆ, 1) ಕಾರ್ಮಿಕರ ವಲಸೆ 2) ಶಾಂತಿ ಮತ್ತು ಚೇತರಿಕೆಗೆ ಉದ್ಯೋಗ ಮತ್ತು ಮರ್ಯಾದಸ್ಥ ಕೆಲಸ 3) ಕೆಲಸದಲ್ಲಿ ಮೂಲಬೂತ ನೀತಿಗಳು ಮತ್ತು ಹಕ್ಕುಗಳ ಆಯಕಟ್ಟಿನ ಗುರಿಗಳ ಕುರಿತು ಮರುಕಳಿಸುವ ಚರ್ಚೆ 4) ಕೆಲವು ಹಳೆಯ ಅಧಿನಿರ್ಣಯಗಳನ್ನು ರದ್ದು ಮಾಡುವುದು.

ಮಹಾನಿರ್ದೇಶಕರ ಆತಂಕಕಾರಿ ಭಾಷಣ

ಐ.ಎಲ್.ಒ. ದ ಮಹಾನಿರ್ದೇಶಕ ಗೈ ರೈಡರ್ ರವರು ಉತ್ಪಾದನೆಯನ್ನು 'ಹಸಿರು' ಗೊಳಿಸುತ್ತಿರುವುದರಿಂದ ಭವಿಷ್ಯದಲ್ಲಿ ಹಸಿರು ಉದ್ಯೋಗಗಳ ಸೃಷ್ಟಿಯಗುವ ಬಗ್ಗೆ ಹೇಳಿದರು. ಆದರೆ 'ಹವಮಾನ ಬದಲಾವಣೆ' ಕುರಿತ 'ಪ್ಯಾರಿಸ್ ಒಪ್ಪಂದ' ದಿಂದ ಅಮೇರಿಕಾವು ಹಿಂದಕ್ಕೆ ಸರಿದ ಇತ್ತೀಚಿನ ನಿರ್ಧಾರದ ಬಗ್ಗೆ ಏನೂ ಹೇಳಲಿಲ್ಲ. 'ಂಘರ್ಷ, ವಿಪತ್ತು ಮತ್ತು ಬಿಕ್ಕಟ್ಟು ಇತ್ಯಾದಿಗಳಲ್ಲಿ ಎಷ್ಟೊಂದು ಬದಲಾವಣೆಯಾಗಿರುವಾಗ ಮರ್ಯಾದಸ್ಥ ಕೆಲಸ ಕುರಿತ ಐ.ಎಲ್.ಒ. ಶಿಫಾರಸ್ಸು ಸಂಖ್ಯೆ 71 ರ ಬಗ್ಗೆ ಈಗ ಅಗತ್ಯವೇ ಎಂದು ಪ್ರಶ್ನಿಸಿದರು. ಇಂದಿನ ಯುದ್ಧದ ಪ್ರಮುಖ ಅಂಶಗಳನ್ನು ಪ್ರಸ್ತಾಪಿಸಲಿಲ್ಲ, ಏಕೆಂದರೆ ಈ ಬಗ್ಗೆ ವಿಮರ್ಶಾತ್ಮಕತೆ ಅವರಿಂದ ಸಾಧ್ಯವಿಲ್ಲ. 90ರ ದಶಕದ ಕೊನೆಯ ಹೊತ್ತಿಗೆ ನವ–ಉದಾರವಾದ ಜಾಗತೀಕರಣವನ್ನು ಐ.ಎಲ್.ಒ. 'ನ್ಯಾಯಯುತ ಜಾಗತೀಕರಣ' ಎಂದು ವ್ಯಾಖ್ಯಾನಿಸಿ ಸಮರ್ಥಿಸಿಕೊಂಡಿದ್ದನ್ನು ನಾವಿಲ್ಲಿ ನೆನಪು ಮಾಡಿಕೊಳ್ಳಬೇಕು.

ಅವರ ಭಾಷಣದ ಅಂತ್ಯದಲ್ಲಿ "ಅಸಮಾನತೆ ಅಸಹನೀಯವಾದಾಗ ಹಾಗೂ ಸಾಮಾಜಿಕ ನ್ಯಾಯದ ನಿರಾಕರಣೆ ವ್ಯಾಪಕವಾದಾಗ, ಅಂತರಾಷ್ಟ್ರೀಯ ಸಹಕಾರ ಮೂಲಭೂತ ತತ್ವಗಳನ್ನು ಪ್ರಶ್ನಿಸಲಾಗುತ್ತಿರುವಾಗ ವಿಶ್ವದಾದ್ಯಂತ ಉದ್ವಿಗ್ನತೆ' ಮತ್ತು ಸಂಘರ್ಷಗಳು ಹೆಚ್ಚಾಗುತ್ತಿದೆ ಎಂದು ಒಪ್ಪಿಕೊಳ್ಳುತ್ತ, ನಮ್ಮ ಮುಂದಿರುವ ಜವಾಬ್ದಾರಿಗಳನ್ನು ಪೂರೈಸಲು ಐ.ಎಲ್.ಒ. ಸಂಸ್ಥೆಯ ಇತಿಹಾಸವೇ ನಮ್ಮನ್ನು ಮೇಲೆತ್ತಬೇಕಾಗಿದೆ" ಎಂದರು.

ಸಿಐಟಿಯು – ಚರ್ಚೆಯಲ್ಲಿ ಮಧ್ಯಪ್ರವೇಶ

ಸಿಐಟಿಯು 'ಕೆಲಸದ ಮೂಲಭೂತ ತತ್ವಗಳು ಮತ್ತು ಹಕ್ಕುಗಳ' ಕುರಿತಂತೆ ಚರ್ಚೆಯಲ್ಲಿ ಪಾಲ್ಗೊಂಡಿತ್ತು. ಈ ವಿಷಯದಲ್ಲಿ ಐ.ಎಲ್.ಒ. ಹಂಚಿದ "ಥೀಮ್ ಪೇಪರ್'(ಈ ವಿಷಯ ಕುರಿತ ಪ್ರಬಂಧ) ಅನೇಕ ವಿಷಯಗಳ ಬಗ್ಗೆ ಗೊಂದಲಗಳನ್ನು ಉಂಟುಮಾಡಿತ್ತು. ಅಲ್ಲದೆ, ಅವರು ಅಮೇಕಾದ ಕಾರ್ಮಿಕ ಸಂಘಟನೆ ಐಟಿಯುಸಿ ಮುಖಂಡರು, ಎನ್.ಜಿ.ಒ. ಗಳ ಪ್ರಾಮುಖ್ಯತೆಯನ್ನು ಒತ್ತಿ ಹೇಳಿದರು. ಇದನ್ನು ಹಲವಾರು ರಾಷ್ಟ್ರಗಳ ಟ್ರೇಡ್ ಯೂನಿಯನ್ಸ್‌ಗಳ ಪ್ರತಿನಿಧಿಗಳು ಬಲವಾಗಿ ವಿರೋಧಿಸಿದರು.

ಮೂಲಭೂತ ತತ್ವಗಳ ಅನ್ವಯವನ್ನು 2012 ರಲ್ಲಿ ಕೈಗೆತ್ತಿಕೊಳ್ಳಲಾಗಿತ್ತು. ಐದು ವರ್ಷಗಳ ನಂತರ ಇದರ ಬಗ್ಗೆ ವಿಮರ್ಶೆ ಬಂದಾಗ 'ಗಣನೀಯ ಪ್ರಗತಿ ಸಾಧಿಸಲಾಗಿದೆ' ಎಂದು ಹೇಳಲಾಗಿತ್ತು. ಭಾರತವು (ಪ್ರಮುಖವಾಗಿ ಸಿಐಟಿಯು) ಒಳಗೊಂಡಂತೆ, ಹಲವು ರಾಷ್ಟ್ರಗಳು ಇದನ್ನು ಪ್ರಶ್ನಿಸಿದವು. ಗಣನೀಯ ಪ್ರಗತಿ ಸಾಧಿಸುವಲ್ಲಿ ಸಾಕಷ್ಟು ಅಂತರವಿದೆ ಎಂದು ಸೇರಿಸಲು ಒತ್ತಾಯಿಸಿದರು. ಆ ನಂತರ ಅಂತಿಮ ಕರಡಿನಲ್ಲಿ ಮೂಲಭೂತ ತತ್ವಗಳ ಅನುಷ್ಠಾನದಲ್ಲಿ ಐ.ಎಲ್.ಒ. ಕಛೇರಿ, ಸರ್ಕಾರಗಳು ಮತ್ತು ಅಧಿಕಾರಿಗಳ – ಕಾರ್ಯಗಳು ಮತ್ತು ಜವಾಬ್ದಾರಿಗಳನ್ನು ಸೇರಿಸಲಾಯಿತು. ಸಿಐಟಿಯುವಿನ ಸುಮಾರು ಆರು ಮಧ್ಯಪ್ರವೇಶಗಳಲ್ಲಿ', ಬಾಲ ದುಡಿಮೆಯನ್ನು ಸಂಪೂರ್ಣವಾಗಿ ನಿಷೇಧಿಸಬೇಕಾದ,ಅಪಾಯಕಾರಿ ಉದ್ದಿಮೆಗಳ ಪಟ್ಟಿಯನ್ನು ಸಿದ್ಧಪಡಿಸಬೇಕೆಂಬ ಸೂಚನೆ ಮಾತ್ರ ಅಂಗೀಕರಿಸಲ್ಪಟ್ಟಿತು.

ಸಕಾರಾತ್ಮಕ ನಿರ್ಣಯಗಳ ಅಂಗೀಕಾರ

ಪರಿಣಾಮಕಾರಿ ಚರ್ಚೆಗಳು ಮತ್ತು ಸಂವಾದಗಳು 'ಉದ್ಯೋಗ ಪರಿಷ್ಕರಣೆ'ಗಳ ಕುರಿತಂತೆ ನಡೆದವು. ಘರ್ಷಣೆಗಳು ಮತ್ತು ವಿಪತ್ತುಗಳಿಂದ ಉಂಟಾಗಿರುವ ಬಿಕ್ಕಟ್ಟಿನ ಪರಿಸ್ಥಿತಿಗಳಲ್ಲಿ ಉದ್ಯೋಗ ಮತ್ತು ಮರ್ಯಾದಸ್ಥ ಕೆಲಸಗಳನ್ನು ಕುರಿತಂತೆ ಕ್ರಮಗಳನ್ನು ಕೈಗೊಳ್ಳು ಮಾರ್ಗದರ್ಶನ ಗಳನ್ನು ರೂಪಿಸಲಾಯಿತು: ಚೇತರಿಕೆಯ ಕೆಲಸಗಳಲ್ಲಿ ಕಾರ್ಮಿಕರನ್ನು ಒಳಗೊಳ್ಳುವ ಮಹತ್ವವನ್ನು, ನಿರೂಪಿಸುತ್ತ, ಸಾಮಾಜಿಕ ರಕ್ಷಣೆ, ಜೀವನೋಪಾಯಕ್ಕೆ ಬೆಂಬಲ, ತಕ್ಷಣದ ಉದ್ಯೋಗದ ಕ್ರಮಗಳು ಮತ್ತು ಬಿಕ್ಕಟಿನಿಂದ ದುರ್ಬಲರಾದವರಿಗೆ ಆದಾಯ–ಸಂಪಾದನೆ ಸೇರಿದಂತೆ ಅನೇಕ ಸೇವೆಗಳನ್ನು ಒದಗಿಸುವ ಮಾರ್ಗದರ್ಶನವನ್ನು ಇದು ಹೊಂದಿದೆ. ಹಾಗೆಯೇ, ಎಲ್ಲಾ ವಲಸೆ ಕಾರ್ಮಿಕರಿಗೆ ಸಮಾನ ಅವಕಾಶಗಳನ್ನು ಒದಗಿಸಬೇಕು, ಅವರನ್ನು ಸಮಾನವಾಗಿ ಕಾಣಬೇಕು ಎಂದು ನಿರ್ಣಯ ನಿರ್ದೇಶಿಸಿದೆ.

ಇತ್ತೀಚಿನ ದಿನಗಳಲ್ಲಿ, ಮೊದಲ ಬಾರಿಗೆ ಐ.ಎಲ್.ಒ. ದೊಡ್ಡ ಪ್ರಮಾಣದಲ್ಲಿ ನಿರಾಶ್ರಿತರು ಬರುವಂತಾಗಿರುವ ಪರಿಸ್ಥಿತಿಯ ಬಗ್ಗೆ ಐಎಲ್‌ಒ ಒಂದು ನಿರ್ಣಯವನ್ನು ಅಂಗೀಕರಿಸಿತು.

ಬಾಲ ದುಡಿಮೆ ನಿಷೇಧ–

ಭಾರತ ಸರ್ಕಾರದ ಇಬ್ಬಂದ್ಧಿತನ ಬಯಲಿಗೆ

ಬಾಲದುಡಿಮೆ ನಿಷೇಧದ ಮೇಲಿನ ಐ.ಎಲ್.ಒ. ನ ಎರಡು ಅಧಿನಿರ್ಣಯಗಳನ್ನು ಭಾರತ ಸರಕಾರ ಊರ್ಜಿತಗೊಳಿಸಿದೆ ಎಂದು ಬಹಳ ಆಡಂಬರದಿಂದ ಕಾರ್ಮಿಕ ರಾಜ್ಯ ಮಂತ್ರಿಯವರು ಮಹಾನಿರ್ದೇಶಕರ ಸಮ್ಮುಖ ಪ್ರಕಟಿಸಿದರು. ಬಿಜೆಪಿ ಸರ್ಕಾರವು ಜಾರಿಗೆ ತಂದಿರುವ ಬಾಲ ಕಾರ್ಮಿಕರ ಹೊಸ ಕಾನೂನು ಬಾಲ ಕಾರ್ಮಿಕರ ನಿರ್ಮೂಲನೆ ಮಾಡುವ, ಐ.ಎಲ್.ಒ. ನಿರ್ಣಯದ ಪ್ರಮುಖ ಉದ್ದೇಶಗಳನ್ನು ವಿರೂಪಗೊಳಿಸಿದೆ ಎಂದು ತಿಳಿಯದ ಕೆಲವು ಇತರೆ ರಾಷ್ಟ್ರಗಳ ಗಣ್ಯರು ಈ ಸರ್ಕಾರವನ್ನು ಪ್ರಶಂಸೆ ಮಾಡಿದರು.

ಏಳು ದಿನಗಳ ಕಾಲ ನಡೆದ ಐ.ಎಲ್.ಸಿ. ಸಮ್ಮೇಳನದಲ್ಲಿ ನೂರಾರು ಭಾಷಣಕಾರರು ಪ್ಲೆನರಿ ಅಧಿವೇಶನದಲ್ಲಿ ಮಾತನಾಡಿದರು. ಅದರಲ್ಲಿ ಹೆಚ್ಚಿನವರು ತಮ್ಮ – ತಮ್ಮ ರಾಷ್ಟ್ರೀಯ ಪರಿಸ್ಥಿತಿಗಳ ಕುರಿತಂತೆ ಚರ್ಚೆ ನಡೆಸಿದರು.

ಡಬ್ಲ್ಯುಎಫ್‌ಟಿಯು ಪ್ರಧಾನ ಕಾರ್ಯದರ್ಶಿ ಜಾರ್ಜ್ ಮಾವ್ರಿಕೋಸ್, ಐ.ಎಲ್.ಒ. ದ ಪ್ರಧಾನ ಕಾರ್ಯದರ್ಶಿಯವರು ಕಝಾಕಿಸ್ತಾನ್, ಕೊಲಂಬಿಯಾ, ಹೊಂಡುರಾಸ್, ಮೆಕ್ಸಿಕೊ ಮತ್ತು ಅಂಗೋಲಾ ಮತ್ತು ಟರ್ಕಿಯಲ್ಲಿನ ಕಾರ್ಮಿಕರ ಹೋರಾಟಗಳ ಮೇಲೆ ನಡೆದ ದಾಳಿಗಳ ಬಗ್ಗೆ ಮಾತಾಡಿದರು, ಅಲ್ಲಿನ ಕಾರ್ಮಿಕರೊಂದಿಗೆ ಸೌಹಾರ್ದ ವ್ಯಕ್ತಪಡಿಸಿದರು. ಇಂತಹ ಸನ್ನಿವೇಶಗಳನ್ನು ಎದುರಿಸುವಲ್ಲಿ ವಿಶ್ವದ ಕಾರ್ಮಿಕ ವರ್ಗದ ಎಲ್ಲಾ ಕಾರ್ಮಿಕರು, ಸಮರ್ಥ ಹಾಗೂ ಸಕ್ರಿಯ ಟ್ರೇಡ್ ಯೂನಿಯನ್ ಚಳುವಳಿಯ ಅಗತ್ಯತೆ ಬಗ್ಗೆ ಒತ್ತಿ ಹೇಳಿದರು.

'ಕೆಲಸ ಮಾಡುವ ಮಹಿಳೆಯರಿಗೆಕೆಲಸದ ಉತ್ತಮ ಭವಿಷ್ಯ' – ಎಂಬೊಂದು ವಿಶೇಷವಾದ ಪ್ಲೆನರಿ ಅಧಿವೇಶನವು ನಡೆಯಿತು. ಮಾಲ್ಟಾ, ಮಾರಿಷಸ್ ಮತ್ತು ನೇಪಾಳದ ಗಣರಾಜ್ಯಗಳ ಮಹಿಳಾ ಅಧ್ಯಕ್ಷರುಗಳು ಅಧಿವೇಶನವನ್ನು ಉದ್ದೇಶಿಸಿ ಮಾತನಾಡಿದರು. ಇವರೆಲ್ಲರೂ ತಮ್ಮಲ್ಲಿ ಜನತಾ ಶಕ್ತಿಯನ್ನು ಸ್ಥಾಪಿಸಲು ಮತ್ತು ಮಹಿಳೆಯರೂ ಸಬಲೀಕರಣದ ತಮ್ಮ ಪ್ರಯತ್ನಗಳ ಬಗ್ಗೆ ಮಾತಾಡಿದರು '

ಸಿಎಎಸ್ ನಲ್ಲಿ ಸಿಐಟಿಯು ದೂರು

– ಮತ್ತೊಮ್ಮೆ ಚರ್ಚೆಗೆ

ವಿವಿಧ ರಾಷ್ಟ್ರಗಳ ದೂರುಗಳನ್ನು ಪರಿಶೀಲಿಸುವ ಸಿಎಎಸ್(ಮಾನಕಗಳ ಅನ್ವಯದ ಸಮಿತಿ) ಸಭೆಯಲ್ಲಿ ನಿರಂತರವಾಗಿ ಚರ್ಚಿಸಲಾಗಿದೆ. ಭಾರತ ಸರ್ಕಾರವು ಕಾರ್ಮಿಕ ತಪಾಸಣಾ ವ್ಯವಸ್ಥೆ ಯನ್ನು ರದ್ದು ಮಾಡಿ ಸಿ–81 ಅನ್ನು ಉಲಂಘಿಸಿದೆ ಎಂದು ಸಿಟಿತಿಯು 2104ರಲ್ಲಿ ದೂರುಕೊಟ್ಟಿತ್ತು. ಆ ನಂತರ 2015 ರಲ್ಲಿ ಎಸ್.ಇ.ಝುಡ್. ಕುರಿತಂತೆ ತಪಾಸಣಾ ವ್ಯವಸ್ಥೆಯ ಎಲ್ಲಾ ವಿವರವಾದ ವರದಿಯನ್ನು ಕಳುಹಿಸಲು ಭಾರತ ಸರ್ಕಾರಕ್ಕೆ ಐ.ಎಲ್.ಒ. ನಿರ್ದೇಶನವನ್ನು ಕೂಡ ನೀಡಲಾಗಿತ್ತು. ಕೇವಲ ಸಮ್ಮೇಳನ ನಡೆಯುವ ಒಂದು ವಾರಕ್ಕೆ ಮುನ್ನ ಈ ವರದಿಯನ್ನು ಭಾರತ ಸರ್ಕಾರ ಕಳುಹಿಸಿತ್ತು.

ಸಿ–81 ರ ಉಲಂಘನೆಯ ಬಗ್ಗೆ ಸಿಐಟಿಯು ವಿನ ದೂರನ್ನು ಮತ್ತೊಮ್ಮೆ ಚರ್ಚಿಸಲು ಸಿಎಎಸ್ ನಿರ್ಧರಿಸಿತು. ಭಾರತ ಕಾರ್ಮಿಕ ಪ್ರತಿನಿಧಿಗಳ ಗುಂಪಿನ ಭಾಗವಾಗಿ ಈ ಸಮ್ಮೇಳನದಲ್ಲಿ ಭಾಗವಹಿಸಿದ್ದ ಬಿಎಂಎಸ್ ಕಾರ್ಮಿಕ ಮುಖಂಡ, ಅರ್ಧ ಪುಟ್ಟದಷ್ಟು ಲಿಖಿತ ಭಾಷಣವನ್ನುಸ್ಸಿಎಎಸ್ ಸಭೆಗೆ ಸಲ್ಲಿಸಿ, ಬಿಜೆಪಿ ಸರ್ಕಾರದ ಹೊಸ ತಪಾಸಣಾ ವ್ಯವಸ್ಥೆಯ ವರದಿಯ ಬಗ್ಗೆ ಸಂಪೂರ್ಣ ತೃಪ್ತಿ ವ್ಯಕ್ತಪಡಿಸಿದರು. ಈ ವಿಚಾರವನ್ನು ಸಿಐಟಿಯು ಇತರೆ ದೇಶಗಳ ಪ್ರತಿನಿಧಿಗಳೊಂದಿಗೆ ಹಂಚಿಕೊಂಡಿದ್ದು, ಬಿಎಂಎಸ್ ಮುಜುಗರಕ್ಕೆ ಸಿಕ್ಕಿ ಹಾಕಿಕೊಂಡು ನಗೆ ಪಾಟಲಿಗೆ ಗುರಿಯಾಯಿತು.. ಸಿ–81 ರ ಉಲಂಘನೆ ಬಗ್ಗೆ ವಿವರಿಸಲು ಸಮ್ಮೇಳನದಲ್ಲಿ ಹೆಚ್ಚಿನ ಸಮಯ ಬೇಕಾಗಿದೆ ಎಂಬ ಸಿಐಟಿಯು ನ ಮನವಿಗೆ 'ಸಿಎಎಸ್' ಅನುಮತಿ ನೀಡಿ, ಏಳು ನಿಮಿಷವನ್ನು ಒದಗಿಸಿತು. ಆದರೆ ಬಿಎಂಎಸ್‌ಗೆ ಕೇವಲ ಮೂರು ನಿಮಿಷ ಕೊಡಲಾಯಿತು.

ಭಾರತ ಸರ್ಕಾರ ಸಂಪೂರ್ಣ ವರದಿಯನ್ನು ಐ.ಎಲ್.ಒ.ಗೆ ಸಲ್ಲಿಸಿದೆ. ಹಾಗಾಗಿ, ಸಿಐಟಿಯುವಿನ ದೂರು ಪ್ರಕರಣವನ್ನು ಕೈಬಿಡಬೇಕೆಂದು ಭಾರತ ಸರಕಾರ ವಾದಿಸಿತು. ಇದಕ್ಕೆ ಟರ್ಕಿ, ರಷ್ಯಾ, ಬಾಂಗ್ಲಾದೇಶ, ಶ್ರೀಲಂಕಾ ಮುಂತಾದ ದೇಶಗಳ ಸರ್ಕಾರಗಳ ಬೆಂಬಲವನ್ನೂ ಪಡೆಯಿತು. ಅಸ್ಟ್ರೇಲಿಯಾ, ಮಲೇಷಿಯಾ, ಬ್ರೆಜಿಲ್ ಮತ್ತು ಬ್ರಿಟನ್ ಮುಂತಾದ ದೇಶಗಳ ಕಾರ್ಮಿಕ ಗುಂಪುಗಳು 'ಸಿಐಟಿಯು'ವಿನ ಪ್ರಸ್ತುತಿಯನ್ನು ಬೆಂಬಲಿಸಿದವು. ಇದರಿಂದ ಜಾಗತಿಕ ಸಮುದಾಯದ ಮುಂದೆ ಭಾರತ ಸರಕಾರದ ಪಾತ್ರ ಬಯಲಾಯಿತು.

ಅಂತಿಮವಾಗಿ ಸಿಎಎಸ್ ಎಸ್‌ಇಝುಡ್‌ಗಳಲ್ಲಿ ಕಾರ್ಮಿಕ ತಪಾಸಣೆ ಬಗ್ಗೆ ಮತ್ತು ಎಸ್‌ಇಝುಡ್‌ಗಳ ಬಗ್ಗೆ ಸಾಧ್ಯವಿರುವ ಎಲ್ಲ ವಿವರವಾದ ಮಾಹಿತಿಗಳನ್ನು ಮತ್ತೊಮ್ಮೆ ಕೊಡಬೇಕೆಂದು ಭಾರತ ಸರಕಾರಕ್ಕೆ ಹೇಳಿತು. ಕಾರ್ಮಿಕರು ಅಥವ ಅವರ ಸಂಘಗಳ ಸಮ್ಮುಖ ತಪಾಸಣೆ ನಡೆಸಬೇಕು, ಕೇಂದ್ರ ಮತ್ತು ರಾಜ್ಯ ತಪಾಸಣೆ ವ್ಯವಸ್ಥೆಗಳಿಗೆ ಸಂಪನ್ಮೂಲಗಳನ್ನು ಹೆಚ್ಚಸಬೇಕು ಎಂದು ನಿರ್ದೇಶನ ನೀಡಿರುವುದಲ್ಲದೆ, ಕಾರ್ಮಿಕ ಕಾನೂನುಗಳನ್ನು ತಿದ್ದುಪಡಿ ಮಾಡುವಾಗ ಅವು ಐಎಲ್‌ಒ ಅಧಿನಿರ್ಣಯಗಳಿಗೆ ಅನುಗುಣವಾಗಿರುವಂತೆ ನೋಡಿಕೊಳ್ಳಬೇಕು ಎಂದೂ ಸರಕಾರಕ್ಕೆ ನಿರ್ದೇಶನ ನೀಡಿದೆ.

ಈಗ ಐಎಲ್‌ಒ ದಲ್ಲಿ ಬಹಳ ಪ್ರಭಾವಿಯಾಗಿರುವ, ಸುಮಾರಾಗಿ ಅದರ ಎಲ್ಲ ಸಮಿತಿಗಳು, ಉಪಸಮಿತಿಗಳಲ್ಲಿರುವ ಐಟಿಯುಸಿ(ಅಂತರ ರಾಷ್ಟ್ರೀಯ ಕಾರ್ಮಿಕ ಸಂಘ ಮಹಾ ಒಕ್ಕೂಟ) ಈ ಹಿಂದೆ ಐಸಿಎಫ್‌ಟಿಯು ಎಂಬ ಹೆಸರಿನಲ್ಲಿದ್ದ ಸಂಘಟನೆ ಹಾಗೂ ಎಎಫ್‌ಎಲ್–ಸಿಐಒ ಎಂಬ ಅಮರಿಕಾದ ಕಾರ್ಮಿಕ ಒಕ್ಕೂಟ ಸೇರಿ ರಚನೆಗೊಂಡ ಸಂಘಟನೆ. ಐಸಿಎಫ್‌ಟಿಯು ದೊಡ್ಡ ಕಾರ್ಪೊರೇಟ್‌ಗಳ ಆಣತಿಗೆ ಒಳಗಾಗಿರುವ ದೊಡ್ಡ ನಿಧಿ ನೀಡಿಕೆ ಸಂಸ್ಥೆಗಳಿಂದ ನಿಯಮಿತವಾಗಿ ಹಣ ಪಡೆಯುತ್ತಿರುವಂತದ್ದು ಎಂದು ಎಲ್ಲರಿಗೂ ತಿಳಿದಿರುವ ಸಂಗತಿ. ಆದ–ರೆ ಪೂರ್ವ ಯುರೋಪಿನಲ್ಲಿನ ಬೆಳವಣಿಗೆಗಳ ಮೊದಲು ಐಎಲ್‌ಒ ನಂತಹ ಸಂಘಟನೆಗಳಲ್ಲಿ ಡಬ್ಲ್ಯುಎಫ್‌ಟಿಯು ಈ ಐಟಿಯುಸಿ ಗೆ ಸಾಕಷ್ಟು ಸ್ಪರ್ಧೆ ನೀಡುತ್ತಿತ್ತು. ಅದರೆ ಪೂರ್ವ ಯುರೋಪ್ ಮತ್ತು ಸೋವಿಯೆತ್ ಒಕ್ಕೂಟದ ಪತನದ ನಂತರ ಡಬ್ಲ್ಯುಎಫ್‌ಟಿಯುನಲ್ಲಿದ್ದ ಈ ದೇಶಗಳ ಬಹಳಷ್ಟು ಕಾರ್ಮಿಕ ಸಂಘಟನೆಗಳು ಐಟಿಯುಸಿಗೆ ಸೇರಿದ್ದ–ರಿಂದ ಐಎಲ್‌ಒದಲ್ಲಿ ಅದರದ್ದೇ ಪ್ರಬಾವ ಹೆಚ್ಚಾಗಿದೆ. ಇದರಿಂದಾಗಿ ಕಾರ್ಮಿಕರ ಹೋರಾಟಗಳಿಗೆ ನೆರವು ನೀಡುವಲ್ಲಿ ಐಎಲ್‌ಒ ಬಹಳ ಹಿಂದಕ್ಕೆ ಜಾರಿದೆ.

ಆದರೆ ಐಎಲ್‌ಒ ರಾಷ್ಟ್ರೀಯ ಮಿತಿಗಳನ್ನು ಮೀರಿರುವ ಜಗತ್ತಿನ ಎಲ್ಲಾ ರಾಷ್ಟ್ರಗಳಿಗೂ ಸಮಾನ ಹಕ್ಕುಗಳನ್ನು ಒದಗಿಸುವ ಒಂದು ಅಂತರಾಷ್ಟ್ರೀಯ ಸಂಘಟನೆಯಾಗಿದೆ. ಇದನ್ನು ಆಳುವವರೊಂದಿಗೆ ಶಾಮೀಲಾಗುವವರ ಅಥವ ಸಹಕರಿಸುವವರ ಕೈಗಳಲ್ಲಿ ಬಿಡಲು ಸಾಧ್ಯವಿಲ್ಲ. ಈಗೀಗ ಹಲವು ದೇಶಗಳ ಕಾರ್ಮಿಕರು ಇದನ್ನು ಅರಿಯಲಾರಂಭಿಸಿದ್ದಾರೆ, ಸಮರಶೀಲ ಹೋರಾಟಗಳು ಅಗತ್ಯ ಎಂದು ಮನಗಾಣುತ್ತಿದ್ದಾರೆ. ಇಂತಹ ಸಂದರ್ಭದಲ್ಲಿ ಡಬ್ಲ್ಯುಎಫ್‌ಟಿಯು ನೇತೃತ್ವ ವಹಿಸುವುದು ಅಗತ್ಯವಾಗಿದೆ ಎಂದು ಈ ಅಧಿವೇಶನದಲ್ಲಿ ಭಾಗವಹಿಸಿದ ಸಿಐಟಿಯು ನಿಯೋಗದಲ್ಲಿದ್ದ ಅಮಿತಾವ ಗುಹ ಹೇಳುತ್ತಾರೆ.

JANASHAKTHI KANNADA VARA PATRIKE SEPTEMBER 11-17, 2017 Price : Rs. 10/- Date of Publication: 8 SEPTEMBER 2017 RNI No. KARKAN /2006/17926 Posted on every Satuarday
"REGISTERD" Postal Reg. No. RNP/KA/BGS/2078/2016-18 Posted at Bangalore PSO, BG - 560026 Licensed to Post without prepayment License No. WPP-283



"ಮಾರ್ಚ್ 22": ಧರ್ಮ–ನೀರು ಕಲಾತ್ಮಕ ಮುಖಾಮುಖಿ

ವಾಸುದೇವ ಉಚ್ಚಿಲ

ಕೊಡ್ಲು ರಾಮಕೃಷ್ಣ ನಿರ್ದೇಶನದ 'ಮಾರ್ಚ್ 22' ಸಿನಿಮಾ ರಾಜ್ಯಾದ್ಯಂತ ಪ್ರದರ್ಶನದಲ್ಲಿದೆ. ಯಾಕೆ ಈ ಹೆಸರು? ಮಾರ್ಚ್ 22 ವಿಶ್ವ ಜಲದಿನ. ಆ ದಿನದ ಮಹತ್ತ್ವವನ್ನು ಒಂದು ಕಥಾನಕದ ಮೂಲಕ ಸಿನಿಮಾ ಮಾಧ್ಯಮದಲ್ಲಿ ನಿರ್ಮಿಸಿದ ಒಂದು ಸೃಜನಾತ್ಮಕ ಪ್ರಯತ್ನ ಈ ಸಿನಿಮಾದಲ್ಲಿ ನಡೆದಿದೆ.

ಸಿನಿಮಾದ ಕಥಾಹಂದರ ಹೀಗಿದೆ : ಉತ್ತರ ಕರ್ನಾಟಕದ ರಾಯಬಾಗ ತಾಲ್ಲೂಕಿನ ಮರಡಿ ಸಮೀಪದ ಹಳ್ಳಿಯೊಂದರಲ್ಲಿ 30 ವರ್ಷಗಳ ಹಿಂದೆ ಹಿಂದೂಗಳೂ ಮುಸ್ಲಿಮರೂ ಅತ್ಯಂತ ಸೌಹಾರ್ದದಿಂದ ಬಾಳುತ್ತಿದ್ದರು. ಅವರಲ್ಲಿ ಬಾಂಧವ್ಯ ಎಷ್ಟರ ಮಟ್ಟಿಗಿತ್ತೆಂದರೆ ಹಿಂದೂ ಹುಡುಗಿಯರು ಮುಸ್ಲಿಂ ಹುಡುಗರನ್ನು ಪ್ರೀತಿಸಿ ಮದುವೆಯಾಗುವುದು ವಿಶೇಷ ಎಂದು ಅನಿಸಿರುವುದಿಲ್ಲ. ಅಲ್ಲದೆ ಮುಸ್ಲಿಂ ಹುಡುಗಿಯನ್ನು ಹಿಂದೂ ಹುಡುಗ ಪ್ರೀತಿಸಿ ಮದುವೆಯಾದರೂ ವಿಶೇಷ ಅನಿಸುತ್ತಿರಲಿಲ್ಲ. ಅಂಥ ಊರಿನಲ್ಲಿ ಆ ಊರಿಗೆ ಬಂದ ಬರಗಾಲ ನೀರಿನ ಕೊರತೆ ಹಾಗೂ ಕುಡಿಯುವ ನೀರಿಗಾಗಿ ಜನರ ಪರದಾಟ ಹೇಗೆ ಇಡೀ ಬಾಂಧವ್ಯವನ್ನು ಕೆಡಿಸಿ, ಹಿಂದೂ ಮುಸ್ಲಿಂ ಘರ್ಷಣೆಗಳ ತಾಣವಾಗಿ ಮಾಡಿತು. ಹೀಗೆ ಆಳುವ ಪಕ್ಷದ ಪುಡಾರಿ ಶಾಸಕ ಇಂಥ ಸನ್ನಿವೇಶಗಳನ್ನು ತನ್ನ ಸ್ವಾರ್ಥಕ್ಕಾಗಿ ಬಳಸಿಕೊಂಡ, ಹೇಗೆ ಅಲ್ಲಿ ವಿವೇಕದ ಮಾತುಗಳೂ ಮತಾಂಧತೆಯಿಂದಾಗಿ ಜನರ ದ್ವೇಷಭಾವಗಳನ್ನು ತಣಿಸಲಾರದೆ ಹೋದವು. ಹೇಗೆ ಒಮ್ಮೆ ಒಪ್ಪಿಗೆಯಾಗಿದ್ದಂಥ ಯುವ ಗಂಡು–ಹೆಣ್ಣುಗಳ ನಿರ್ಮಲ ಪ್ರೇಮಕ್ಕೂ ಬೆಂಕಿ ಬೀಳುವಂತಾಯಿತು ಇತ್ಯಾದಿ ವಿವರಗಳನ್ನು ಸಿನಿಮಾದ ಕಥೆ ನಿರೂಪಿಸುತ್ತದೆ. ಅದೇ ಹಳ್ಳಿಯಲ್ಲಿ ನೀರಿನ ಸೆಲೆಯನ್ನು ಹುಡುಕಿ ಕೊಡುವ ಜೀವ ವಿಜ್ಞಾನಿ, ಪ್ರಾರ್ಥನಾ ಮಂದಿರದ ಜಾಗದಲ್ಲಿ ಮಾತ್ರ ನೀರಿನ ಸೆಲೆ ಇರುವುದನ್ನು ಗುರುತಿಸಿರಾಗ, ಆಗಷ್ಟೇ ತಮ್ಮ ಮತೀಯ ಅನನ್ಯತೆಯನ್ನು ಗುರುತಿಸಿಕೊಂಡ ಜನರಲ್ಲಿ ಒಂದು ಮತದವರು ಆ ಭೂ ವಿಜ್ಞಾನಿಯನ್ನು ತಮ್ಮ ಮತದ ವಿರೋಧಿ ಹಾಗೂ ಹಳ್ಳಿಯ ಸೌಹಾರ್ದ ಕೆಡಿಸಿ ಬಂದವನೆಂದೂ, ಇನ್ನೊಂದು ಮತದವರು ಭೂ ವಿಜ್ಞಾನಿ ಜನರ ಅಗತ್ಯವಾದ ನೀರಿನ ಪರವಾಗಿಯೇ ಇರುವವನೆಂದೂ ಪರಸ್ಪರ ಅನುಮಾನ ಪಡುವ ವಾತಾವರಣ ಉಂಟಾಗುತ್ತದೆ. ಭೂಗರ್ಭದ ನೀರಿನ ಸಂಗ್ರಹವನ್ನು ಹೊರತರಬೇಕಾದರೆ ಮಸೀದಿಯನ್ನು ಕೆಡವಲೇ ಬೇಕಾಗುತ್ತದೆ. ಎನ್ನುವುದು ಒಂದು ಪ್ರಮೇಯ. ಇದನ್ನು ಒಂದು ಹುನ್ನಾರವೆಂದು ಭಾವಿಸುವ ಧರ್ಮ ವಿಶ್ವಾಸಿಗಳು ಪ್ರತ್ಯೇಕಗೊಳ್ಳುವುದು ಇನ್ನೊಂದು ಘಟನೆ.

ಗ್ರಾಮದ ಸಭ್ಯ ವ್ಯಕ್ತಿಯಾದ ಸಂಗಣ್ಣ ಹಾಗೂ ಮಸೀದಿಯ ಮುಲ್ಲಾ ಸಾಹೇಬ ಊರಿನ ಸಜ್ಜನರು. ಸಂಗಣ್ಣನ ಮಗ ರಾಹುಲ ಮುಲ್ಲಾನ ಮಗಳು ರುಕ್ಸಾನಾಳನ್ನು ಪ್ರೀತಿಸಿರುತ್ತಾನೆ. ಇನ್ನೊಂದೆಡೆ ಮುಲ್ಲಾನ ಮಗ ಸಲ್ಮಾನ್ ಶಾಸಕ ಬಸಣ್ಣ ಪಾಟೀಲನ ಮಗಳು ಅಚ್ಯುತಾಳನ್ನು ಪ್ರೀತಿಸಿರುತ್ತಾನೆ. ಮೊದಲ ಪ್ರೇಮಕ್ಕೆ ಅಡಚಣೆ ಇರುವುದಿಲ್ಲ. ಎರಡನೆಯದರಲ್ಲಿ ಶಾಸಕನ ಶ್ರೀಮಂತಿಕೆಗೆ ಮುಲ್ಲಾನ ಮಗ ಸಲ್ಮಾನ ತಕ್ಕವನಾಗಿರುವುದಿಲ್ಲ; ತನ್ನ ಅಂತಸ್ತಿಗೆ ತಕ್ಕ ಇನ್ನೊಬ್ಬ ಶ್ರೀಮಂತನ ಮಗನಿಗೆ ಮದುವೆ ಮಾಡುತ್ತೇನೆಂದು ಮಾತು ಕೊಟ್ಟಿರುತ್ತಾನೆ. ಇಂಥ ಸಂದರ್ಭದಲ್ಲಿ ಊರಿಗೆ ಬರಗಾಲ ಬರುತ್ತದೆ. ನೀರು ದೊರೆಯದಾಗುತ್ತದೆ. ಜನ ಹೆಂಗಸರು ಕೂಡ ಹಿಡಿದು ನೀರಿಗಾಗಿ ದೂರ ದೂರ ಬಾವಿಗಳೆಡೆಗೆ ಅಲೆದಾಡುತ್ತಾರೆ. ಶಾಸಕ ಪ್ರಭಾವಿಯಾಗಿದ್ದರೂ ಜನರಿಗೆ ನೀರು ಒದಗಿಸುವಲ್ಲಿ ವಿಫಲನಾಗುತ್ತಾನೆ. ಈ ವೇಳೆಗೆ ಚುನಾವಣೆ ಬರುತ್ತದೆ. ಊರಿಗೆ ತಾನು ಶಾಸಕನಾದರೆ ನೀರು ಒದಗಿಸುವುದಾಗಿ ಮುಲ್ಲಾನ ಮಗ ಸಲ್ಮಾನ ಹೇಳುತ್ತಾನೆ. ಊರಿನ ಜನ ಅವನನ್ನು ಬೆಂಬಲಿಸುತ್ತಾರೆ. ಸಲ್ಮಾನ್ ಶಾಸಕನಾಗಿ ಆಯ್ಕೆಯಾದರೂ, ಆಳುವ ಪಕ್ಷದಲ್ಲಿ ಇಲ್ಲವಾದುದರಿಂದ ಅವನು ನೀರು ಪೂರೈಕೆ ಇಲಾಖೆಗಳಿಂದ ನೀರು ಬೇಕಷ್ಟು ತರಿಸಿಕೊಡುವಲ್ಲಿ ವಿಫಲನಾಗುತ್ತಾನೆ. ಹೀಗೆ ಆಗುವಲ್ಲಿ ಹಿಂದಿನ ಶಾಸಕ ಪಾಟೀಲ (ಸಲ್ಮಾನನ ಪ್ರೇಮಿಯ ತಂದೆ)ನ ಕುಮ್ಮಕ್ಕೂ ಇರುತ್ತದೆ.

ಇಂಥ ಸಂದರ್ಭದಲ್ಲಿ ಸಲ್ಮಾನ ತನ್ನ ಗೆಳೆಯ ರಾಹುಲನೊಡನೆ, ಜೈಪುರದಲ್ಲಿ ಸರಸ್ವತೀ ನದಿ ಭೂಗರ್ಭ ಯೋಜನೆಯಲ್ಲಿ ಸಂಶೋಧನೆ ನಡೆಸುತ್ತಿದ್ದ ಕರ್ನಾಟಕದವರೇ ಆದ ಭೂ ವಿಜ್ಞಾನಿ ಡಾ॥ ರಘುನಂದನ್ ಅವರನ್ನು ಕಂಡು, ತನ್ನ ಊರಿಗೆ ಬಂದು ಸಹಾಯ ಮಾಡಲು ಒಪ್ಪಿಸುತ್ತಾನೆ. ವಿಜ್ಞಾನಿ ರಘುನಂದನ್ ಬಂದು, ತನ್ನ ಸಲಕರಣೆ ಹಾಗೂ ಸಹಾಯಕನ ಮೂಲಕ ಊರ ತುಂಬಾ ಜಾಲಾಡಿದರೂ ಎಲ್ಲೂ ನೀರು ಪತ್ತೆಯಾಗುವುದಿಲ್ಲ. ಕೊನೆಯದಾಗಿ ಮಸೀದಿಯ ಬುಡದಲ್ಲಿ ಆಳದಲ್ಲಿ ನೀರು ಇದೆ ಎಂದು ತಿಳಿಯುತ್ತದೆ. ನೀರು ದೊರೆಯಬೇಕಾದರೆ ಮಸೀದಿ ಕೆಡವಬೇಕು. ಇದು ಈ ಹಿಂದೆ ವಿವರಿಸಿದ ಹಿಂದೂ–ಮುಸ್ಲಿಮ್ ಅನುಮಾನ, ದ್ವೇಷ, ಸಂಘರ್ಷಗಳ ಮೂಲ. ಮಸೀದಿ ಕೆಡವಲೇಬಾರದು ಎಂದು ಪಟ್ಟು ಹಿಡಿಯುವ ಮುಖ್ಯ ವ್ಯಕ್ತಿಯೇ ಮುಲ್ಲಾ. ಆತನ ಪತ್ನಿ ಫಾತಿಮಾ ನೀರು ಕೊಡುವುದು ಧರ್ಮ ಎಂದು ಎಷ್ಟೇ ವಾದಿಸಿ, ವಿವೇಕ ಹೇಳಿದರೂ ಮುಲ್ಲಾ ಜಗ್ಗಲಾರ. ಮುಸ್ಲಿಂ ಮಹಿಳೆಯರು ಘರ್ಷಣೆಗೆ ಕಾರಣವಾದ ನೀರಿನ ನೆಲೆಯನ್ನು ಬಿಟ್ಟುಕೊಡಲು ಸಿದ್ಧರಿಲ್ಲದ ಗಂಡಸರನ್ನು ಬಿಟ್ಟು ಬೇರೆ ಊರಿಗೆ ಹೊರಡುತ್ತಾರೆ. ಹಿಂದೂ ಮಹಿಳೆಯರು ಅವರನ್ನು ಬಿಟ್ಟಿರಲಾರದೆ ತಾವೂ ಅವರ ಜೊತೆಗೂಡುತ್ತಾರೆ. ನೀರಿಗಾಗಿ ಪರದಾಡುವವರು ಮಹಿಳೆಯರು. ಗಂಡಸರಿಗೆ ತಮ್ಮ ತಮ್ಮ ಧರ್ಮದ ಪ್ರತಿಷ್ಠೆ–ಪುರುಷತ್ವದ ಪ್ರದರ್ಶನ. ಸೂಫಿ ಫಕೀರನ ಮಾನವತೆಯೇ ನಿಜಧರ್ಮವೆಂಬ ಸಂದೇಶ, ಮತಾಂಧತೆಯ ಆವೇಶದಲ್ಲಿ ಕೇಳಿಸದಾಗುತ್ತದೆ. ಹಿಂದೂ ಪುರುಷರಿಗೆ ಅದೇನು ವಿವೇಕ ಬರುತ್ತದೋ, ಇದೆಲ್ಲ ದ್ವೇಷಕ್ಕೆ ಕಾರಣವಾದ ದೇವರ ಪ್ರಾರ್ಥನಾ ಸ್ಥಳವಾದ ಹಿಂದೂ ದೇವಸ್ಥಾನವನ್ನೇ ಕಡವಿಹಾಕಲು ಮುಂದಾಗುತ್ತಾರೆ. ಆ ವೇಳೆಗೆ ಅರಿವು ಹೊಂದುವ ಮುಸ್ಲಿಮರು ತಾವೂ ಒಪ್ಪಿ ಮಸೀದಿ ಕೆಡವಲು ಸಮ್ಮತಿಸುತ್ತಾರೆ. ಊರಲ್ಲಿ ದೇವಸ್ಥಾನವೂ ಇಲ್ಲ, ಮಸೀದಿಯೂ ಇಲ್ಲವಾಗುತ್ತದೆ. ನೀರಿನ ಸೆಲೆ ಉಕ್ಕಿ ಹರಿಯುತ್ತದೆ.

ಮನುಷ್ಯನ ಭೌತಿಕ ಅಗತ್ಯವಾದ ನೀರಿಗಿಂತಲೂ ಮತಧರ್ಮಗಳ ಪ್ರಾರ್ಥನಾ ಮಂದಿರಗಳು ಮುಖ್ಯವಲ್ಲ ಎಂಬ ಮತೀಯ ಸೌಹಾರ್ದದ ಸಂದೇಶ ಈ ಸಿನಿಮಾದ ಅಂತರ್ಧ್ವನಿ. ಸಿನಿಮಾದ ಕೊನೆಯಲ್ಲಿ ಬರುವ – ಹಿಂದೂಗಳು ತಮ್ಮದೇ ದೇಗುಲವನ್ನು ಕೆಡವಲು ಮುಂದಾಗುವ – ಕಥೆಯ ತಿರುವು ಸ್ವಲ್ಪ ಅಸಹಜವಾದುದನ್ನು ಬಿಟ್ಟರೆ, ಕಥೆಯ ಸಂದೇಶ ನೇರ ನೋಡುಗನ ಮನಮುಟ್ಟುತ್ತದೆ. ಇದೇ ಕಥೆಯಲ್ಲಿ ಒಂದು ವೇಳೆಗೆ ಭೂವಿಜ್ಞಾನಿಗೆ ದೇವಸ್ಥಾನದ ತಳದಲ್ಲಿ ನೀರಸೆಲೆ ಸಿಕ್ಕಿದ್ದಾದರೆ, ಕಥೆಯನ್ನು ಇದೇ ರೀತಿಯಲ್ಲಿ ನಿರೂಪಿಸಬಹುದಾಗಿತ್ತೆ ಎಂಬ ಸಂದೇಹವನ್ನಂತೂ ಸಿನಿಮಾ ಬಿತ್ತಿಯೇ ಬಿತ್ತುತ್ತದೆ. ಇಲ್ಲಿ ನಿರೂಪಿತವಾಗಿರುವ ರೀತಿಯ ವೈವಾಹಿಕ ಕೊಡುಕೊಳೆ ಇರುವ ಹಳ್ಳಿಯೊಂದು 30 ವರ್ಷಗಳ ಹಿಂದೆ ಉತ್ತರ ಕರ್ನಾಟಕದಲ್ಲಿ ಇತ್ತೇ ಎಂಬುದೂ ಸಂಶಯಾಸ್ಪದ. ಈ ಚೌಕಟ್ಟನ್ನು ಒಪ್ಪಿಕೊಂಡ ಮೇಲೆ, ಕಥೆಯ ನಿರೂಪಣೆಯನ್ನು ತಾತ್ತ್ವಿಕತೆಯನ್ನು ಒಪ್ಪಬಹುದಾಗಿಯೆಂದು ತೋರುತ್ತದೆ.

ಕೊಡ್ಲು ರಾಮಕೃಷ್ಣ ಅವರ ನಿದೇಶನ, ಚಿತ್ರಕಥೆ, ಸಂಭಾಷಣೆ ಆಕರ್ಷಕವಾಗಿದೆ. ಚಿತ್ರದ ನಿರ್ಮಾಪಕರಾದ ಹರೀಶ ಶೇರಿಗಾರ್ ಹಾಗೂ ಶರ್ಮಿಳಾ ಶೇರಿಗಾರ್ ಅವರ ಶ್ರಮ ಸಾರ್ಥಕವಾಗಿದೆ. ಸಿನಿಮಾಟೋಗ್ರಾಫಿ ಹಾಗೂ ಸಂಗೀತ ಮನಸೆಳೆಯುವಂತಿದೆ. ಭೂ ವಿಜ್ಞಾನಿಯಾಗಿ ಅನಂತ್‌ನಾಗ್, ಮುಲ್ಲಾಸಾಹೇಬ ಆಗಿ ಆಶಿಶ್ ವಿದ್ಯಾರ್ಥಿ, ಮುಲ್ಲಾ ಪತ್ನಿ ಫಾತಿಮಾ ಆಗಿ ವಿನಯ ಪ್ರಸಾದ್ ಅತ್ಯುತ್ತಮ ಅಭಿನಯ ನೀಡಿದ್ದಾರೆ. ಪ್ರಮುಖ ಪೋಷಿಕ ಪಾತ್ರಗಳಲ್ಲಿ ಜನಪ್ರಿಯ ನಟರೊಂದಿಗೆ, ಪ್ರೇಮಿಗಳ ಪಾತ್ರದ ನಾಲ್ವರು ಯುವನಟರೂ ತುಂಬ ಚೆನ್ನಾಗಿಯೇ ನಟಿಸಿದ್ದಾರೆ. ಸೌಹಾರ್ದದ ಸಂದೇಶ ನೀಡುವ ಈ ಚಲನಚಿತ್ರವನ್ನು ನಾಡಿನ ಎಲ್ಲ ಜನತೆ ನೋಡಬೇಕೆಂದು ನಾವು ಪ್ರಚಾರ ನೀಡಬೇಕಾಗಿದೆ. ●

JANASHAKTHIKANNADAVARAPATRIKE: Printed, Published by **G.V.SRIRAMAREDDY**, EMS Bhavana, No.37/A, 8th Cross, Mahalakshmi Layout, BANGALORE-560086 Karnataka on behalf of **COMMUNIST PARTY OF INDIA (MARXIST)** and **Printed at : Kriya Prakashana,** No. 12, 18th Cross, Sampangirama Nagar, Bangalore 560027
Editor : **G.V.SRIRAMA REDDY**